ಅಖಿಲ ಭಾರತ ಪತ್ರಿಕೆ
ಜನವರಿ 2019



# ಅತಿಮಾನವನ ಅವತರಣ

ಬೆಲೆ : 15/-



ನನ್ನಿಂದ ನಾನೆ ಪುಟಿದೆದ್ದು ಬಂದೆ ಸುಳಿ–ಮನದ ನೃತ್ಯದಿಂದ
ಮತ್ತೆ ಸ್ಥಿತನಿಹೆನು ಆ ಆತ್ಮ–ಘನದ ಮೌಕ್ತಿಕದಮೌನ ಛಂದ
ಜೀವ–ಜಂತುಗಳ ಆಚೆಯಾಚೆಯಲಿ ಕಾಲರಾಹಿತ್ಯ ಅಮರ
ನನ್ನದೇ ಹೃದಯ ಮಧ್ಯದಲಿ ನನ್ನ ಸಾನಿಧ್ಯ ಅತ್ಮ–ಸಾರ
ನಾ ನುಸುಳಿಕೊಂಡೆನ್ನದೇ ಕ್ಷೀಣ ಸ್ವಂತಿಕೆಯು ಮೃತಿಯ ಹೊಂದಿ
ನಾನೀಗ ಅಮರ, ನಾನೀಗ ಏಕ, ವರ್ಣನಾತೀತವಾಗಿ;
ನನ್ನಿಂದ ರಚಿತ ಈ ಲೋಕದಿಂದ ನಾನೀಗ ಮುಕ್ತಗೊಂಡು
ನಾಮರಾಹಿತ್ಯ ಮತ್ತೆ ಅಗಣಿತದ ಹಂತದಲಿ ವಿಕಸಗೊಂಡು
ನನ್ನ ಮನವೀಗ ಮೌನದಲಿ ವ್ಯಾಪ್ತ ಅಕ್ಷಯದ ಬೆಳಕಿನೊಳಗೆ
ನನ್ನ ಹೃದಯವಿದು ಏಕಾಂತ ಘನದ ಜೊತೆ ತೋಷ–ಶಾಂತಿಯೊಳಗೆ,
ನನ್ನ ಬೋಧೆಯಿದು ಸ್ಪರ್ಶ–ಶಬ್ದಗಳ–ದೃಶ್ಯ ಜಾಲಗಳ ಹೊರಗೆ
ನನ್ನ ದೇಹವಿದು ಬಿಂದು ತಾನಿಂದು ಅನಂತಾನಂತವಾಗೆ
ನಾನಿಹೆನು ಈಗ ಆತ್ಮದಾ ಏಕ ಅವಿಚಲದ ತೋಷ ಘನದಿ
ನಾ ನಿರಾಕಾರ, ನಾನಿಹೆನು ಸರ್ವದಸ್ತಿತ್ವ ತತ್ತ್ವಕಾದಿ.

[ಅನುವಾದ: ಪುಟ್ಟು ಕುಲಕರ್ಣಿ]

**ಅಖಿಲ ಭಾರತ ಪತ್ರಿಕೆ**

**ಜನವರಿ 2019**

ಸಂಪುಟ: 29 ಸಂಚಿಕೆ: 01

# ಪರಿವಿಡಿ

## "ಅತಿಮಾನವನ ಅವತರಣ"

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಅತಿಮಾನವನ ಭಾವ** 4
ಅನು: ಶ್ರೀ ಪುಟ್ಟು ಕುಲಕರ್ಣಿ

**ಅತಿಮಾನವನ ಆವಿರ್ಭಾವ** 15
ಅನು: ಶ್ರೀ ಪುಟ್ಟು ಕುಲಕರ್ಣಿ

**ನವ ಜನಾಂಗ** 23
ಅನು: ಡಾ॥ ಬಿ.ಆರ್. ಭೀಡ

**ಮಾನವ ಮತ್ತು ಅತಿಮಾನವ** 33
ಅನು: ಡಾ॥ ಬಿ.ಆರ್. ಭೀಡ
ಅನು: ಪ್ರೊ. ವೀರಭದ್ರಪ್ಪ

**ಅತಿಮಾನಸ ಚೈತನ್ಯದ ಅವತರಣ** 45
ಅನು: ಶ್ರೀ ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 58

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ಹೆಗಡೆ–ಕುಮಟಾ – 581 330.
ಫೋನ್: 94487 74920
editorabpbng@yahoo.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಆರ್.ಕೆ. ಕುಲಕರ್ಣಿ
ಶ್ರೀ ಪುರುಷೋತ್ತಮ ಗಲಗಲಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್ : 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

ಬರಲಿರುವ ಭವಿಷ್ಯದಲ್ಲಿ ಮಾನವ ಸಮುದಾಯವು ಗಮಿಸಬೇಕಾಗಿರುವ ವಿಕಸನದ ಪಥದ ಕುರಿತು ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ಸಂಕೇತಿಸುತ್ತಿದ್ದಾರೆ. ಅದು ಅತಿಮಾನಸದ (ಇದನ್ನು ಉನ್ಮನೀ ಮನೋಭಾವವೆಂದು ಕರೆಯಲಾಗುತ್ತದೆ) ಎಡೆಗೆ ಸಾಗಬೇಕಾಗಿರುವ ವಿಷಯವಾಗಿದೆ. ಈ ಪಶು–ಸದೃಶ ಮಾನವ ಹಂತಕ್ಕು ಮತ್ತು ದಿವ್ಯಮಾನವ ಹಂತಕ್ಕೂ ಮಧ್ಯದಲ್ಲಿ ಇರುವ ಅಂತರವೂ ಅಗಾಧ ಪ್ರಮಾಣದಲ್ಲಿದೆ. ಅದನ್ನು ಒಂದೇ ಒಂದು ನೆಗೆತಕ್ಕೆ ನಾವು ಜಿಗಿದು ದಾಟಲಾರೆವು. ಆದ್ದರಿಂದ ಈಗ ಆಗಮಿಸಲಿರುವ ಅತಿಮಾನವನು ಇಲ್ಲಿ ಮಧ್ಯಸ್ಥ ಹಂತದ ಜೀವಿಯಾಗಿದ್ದಾನೆ, ಮಾನವ ಮತ್ತು ದೇವಮಾನವನ ಮಧ್ಯೆ ಸೇತು ಸ್ವರೂಪನಾಗಿದ್ದಾನೆ. ಬರಲಿರುವ ಭವಿಷ್ಯದಲ್ಲಿ ಅನಿವಾರ್ಯವೇ ಆಗಿರುವ ಈ ಅತಿಮಾನವನು ಸದ್ಯ ದೂರದಲ್ಲಿ ಇದ್ದಂತೆ ಕಂಡುಬಂದರೂ, ಅವನು ಈಗಾಗಲೆ ಈ ಮಾನವ ದೇಹಗಳ ಮೂಲಕ ಮತ್ತು ವ್ಯಕ್ತಿತ್ವಗಳ ಮೂಲಕ ಕಾರ್ಯತತ್ಪರನಾಗಿದ್ದಾನೆ. ಈ ಮೂಲಕ ಅವರನ್ನು ಭವಿಷ್ಯಕ್ಕಾಗಿ ಸಿದ್ಧಗೊಳಿ–ಸುತ್ತಿದ್ದಾನೆ. ಅದೂ ಲೋಕ ಹಿತೈಷಿಯಾಗಿ ಮತ್ತು ಮಾರ್ಗದರ್ಶಿಯಾಗುವಂತೆ ಪರಿವರ್ತನಗೊಳಿಸುತ್ತಿದ್ದಾನೆ.

ಶ್ರೀಮಾತೆಯವರು 1969ರ ಜನೇವರಿ ತಿಂಗಳಲ್ಲಿ ಈ ರೀತಿಯ ಅತಿಮಾನವನ ಅವತರಣವನ್ನು ಖಚಿತಗೊಳಿಸಿದ್ದಾರೆ. ಇದೊಂದು ಅವಿಸ್ಮರಣೀಯ ಸಂಗತಿಯಾಗಿದ್ದು ದಾಖಲಾಗಿದೆ. ಮಾನವ ಮತ್ತು ಅತಿಮಾನವನ ಮಧ್ಯೆ ಇಲ್ಲಿಯವರೆಗೂ ಕಣ್ತಪ್ಪಿಸಿಕೊಂಡಿದ್ದ ಜೋಡಣೆಯ (ಮಿಸ್ಸಿಂಗ್ ಲಿಂಕ್) ಘಟನೆ ಇದಾಗಿದೆ. ಇದನ್ನು ಈ ರೀತಿಯಾಗಿ ಗುರುತಿಸಬಹುದಾಗಿದೆ.

ಈ ಘಟನೆಗೆ ಇದೀಗ ಐವತ್ತನೇ ವರ್ಷ. ಇಷ್ಟೊಂದು ಅವಧಿ ಕಳೆದಿದ್ದರೂ, ಆ ಘಟನೆ ಬಹುತೇಕವಾಗಿ ಅಜ್ಞಾತವಾಗಿಯೇ ಉಳಿದಿದೆ. ಇದು ಪೂರ್ಣಯೋಗ(ಸುಪ್ರಾಮೆಂಟಲ್ ಯೋಗ)ದ ವಿಷಯಕ್ಕೆ ಅತ್ಯಂತ ಪ್ರಮುಖ ಅಂಶವಾಗಿದ್ದು, ಆ ಕಾರಣಕ್ಕೆ ಈ ಸಂಚಿಕೆಯನ್ನು ಅತಿಮಾನವನ ಅವತಾರದ ವಿಷಯಕ್ಕೆ ಸಮರ್ಪಿಸಲಾಗಿದೆ.

*



ಅತಿಮಾನವನು ತಾನುದಿತಗೊಂಡಿರುವ ಈ ಪ್ರಕೃತಿಗೊಡೆಯನಾಗಿ
ಅವನ ಆಗಮನ ಜಡದ–ಲೋಕದಲಿ ರೂಪದಲಿ ಬದಲು ತಾನು;
ಪ್ರಕೃತಿಯಲಿ ಇದ್ದ ಆ ತಮಕೆ ಋತದ–ಅಗ್ನಿ ಸ್ಪರ್ಶದಲಿ ಬೆಳಗು
ಭೂ–ಬದುಕ ಸತ್ಯದಾ ಔನತ್ಯ–ನಿಯಮಗಳಲೀಗ ವಾಸ ಸೊಬಗು;

ಆ ಪರಮ–ದಿವ್ಯ ಆತ್ಮದಾ ಕರೆಗೆ ಮಾನವನು ಸ್ಪಂದಗೊಂಡು
ತನ್ನ ಹೃದಯದಲಿ ಸುಪ್ತ–ಸರ್ವವನು ತಾನೆ ಜಾಗರಿಸಿಕೊಂಡು
ಈ ಬುವಿಯು ಸೃಷ್ಟಿಗೊಂಡಿರುವ ಅವಧಿ ಆ ಪ್ರಕೃತಿ ಬಯಕೆಯಂತೆ
ಅಜ್ಞಾತವಾದ ಈ ಲೋಕವವನ ಗೃಹವಾಗಿ ಆತ್ಮದಂತೆ,

ಹೃತ್–ಸ್ಪಂದದಲ್ಲಿ ಪಡೆಯಲೆನೆ ಋತದ ಈ–ದೇವ–ತೋಷವನ್ನು
ದಿವ್ಯ–ದೇವತೆಯ ಶಾಸನಕೆ ಇವನು ವ್ಯಾಖ್ಯಾನಕಾರನಿನ್ನು
ಪರಮೋಚ್ಚ ಪರಮ ವಿಶ್ವಾಸಕೀಗ ಸಾಧನದ ಹಂತ ಭಾವ
ಆ ಊರ್ಧ್ವ–ಸದಯವೀಗಿಲ್ಲಿ ಬಾಗಿ ಉದ್ಧರಿಸೆ ಮನುಜ ಕುಲವ

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 34/708–09 – ಶ್ರೀ ಅರವಿಂದರು**

*

# ಅತಿಮಾನವನ ಭಾವ

– ಅನುವಾದ: ಪುಟ್ಟು ಕುಲಕರ್ಣಿ

## ಯೋಗದ ಒಂದು ಅವಶ್ಯವಾದ ಉದ್ದೇಶ

ನಮ್ಮ ಆತ್ಮವನ್ನು ಜೊತೆ ಎಲ್ಲ ಆತ್ಮಗಳನ್ನೂ ಆ ಪರಬ್ರಹ್ಮದ ಜೊತೆಗೆ ಸಂಯೋಗಗೊಳಿಸುವದೇ ಯೋಗದ ಪ್ರಮುಖ ಉದ್ದೇಶವಾಗಿದೆ. ಹೀಗಾಗಿ ನಾವು ಇದನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳುವದು ಅನಿವಾರ್ಯವಾಗಿದೆ. ಅತಿಮಾನವನ ಹಂತವನ್ನು ಪಡೆಯುವ ಸಲುವಾಗಿ ಮಾತ್ರವೇ ನಮ್ಮ ಯೋಗ ಇರದೇ, ಅದು ದಿವ್ಯತ್ವವನ್ನು ಪಡೆಯುವದರ ಸಲುವಾಗಿಯೂ ಇರಬೇಕು; ಅತಿಮನೋ–ಚೇತನವನ್ನು ಕೇವಲ ಸ್ವಂತ ಸಂತೋಷಕ್ಕೆ ಹಾಗೂ ಮಹತಿಯನ್ನು ಸಾಧಿಸುವದರ ಸಲುವಾಗಿ ಮಾತ್ರ ಅದನ್ನು ಪಡೆಯದೇ, ಅದರಿಂದ ಪರಿಪೂರ್ಣತೆ ಮತ್ತು ನಿರ್ವಿಶೇಷವಾದ ಸಂತೋಷವನ್ನು ಪಡೆಯುವದರ ಸಲುವಾಗಿ ಪಡೆದುಕೊಳ್ಳಬೇಕಿದೆ. ಅದನ್ನು ಅನುಭಾವಿಸಲಿಕ್ಕೆ, ಅದನ್ನು ಪ್ರಾಪ್ತಿಗೊಳಿಸಿ–ಕೊಳ್ಳುವದಕ್ಕೆ, ನಮ್ಮ ಜೀವನದಲ್ಲಿ ಸಾಧ್ಯವಿರುವ ಎಲ್ಲ ಕಡೆಗೂ ಅದನ್ನು ಗತಿಶೀಲಗೊಳಿಸಿಕೊಳ್ಳಬೇಕಿದೆ. ಇದು ಪರಮೋಚ್ಚ ತೀವ್ರತೆಯನ್ನು ಹಾಗೂ ಸುವಿಶಾಲ ವ್ಯಾಪ್ತತೆಯನ್ನು ಮತ್ತು ಪ್ರತಿ ವಲಯದಲ್ಲಿಯೂ ಜೊತೆಗೆ ಪ್ರತಿ ತಿರುವಿನಲ್ಲಿಯೂ (ಸಂಕ್ರಮಣದಲ್ಲಿ), ಮತ್ತೆ ಪ್ರತಿಯೊಂದು ನಿರ್ಜನದ ಹಂತದಲ್ಲಿಯೂ ಮತ್ತು ನಮ್ಮ ಪ್ರಕೃತಿಯ ಕರ್ಮಾವಕಾಶದಲ್ಲಿಯೂ (ಮಧ್ಯಾವಧಿಯಲ್ಲಿ) ಸಹಿತ ಪಡೆದುಕೊಳ್ಳಬೇಕಿದೆ.

ಅತಿಮಾನವ ತತ್ತ್ವದ ಆ ಮಹತೀ ಬಲವನ್ನು ತರುವ ಸಲುವಾಗಿಯೇ ಈ ಅತಿಮಾನಸ ಯೋಗದ ಉದ್ದೇಶವಿದೆ. ದೈವೀ–ಶಕ್ತಿಯೊಂದರ ಹಾಗೂ ಆ ಬೃಹತ್–ತತ್ವದ ಮೂಲಕ, ಪ್ರತಿಯೊಬ್ಬರ ವೈಯಕ್ತಿಕತೆಯನ್ನು ತನ್ನಲ್ಲಿ ತಾನೇ ಮಹತಿಗೊಳಿಸುವದರ ಸಲುವಾಗಿ, ಈ ಅತಿಮಾನಸ ಯೋಗದ ಆಶಯವಿದೆ ಎಂದು ಕೆಲವರು ಯೋಚಿಸುತ್ತಿದ್ದಲ್ಲಿ ಅದು ತಪ್ಪು ಚಿಂತನೆಯಾಗಿರುತ್ತದೆ. ಹಾಗೆ ಯೋಚಿಸುವದು ಒಂದು ಪ್ರಮಾದದಿಂದ ಕೂಡಿದ ಹಾಗೂ ಅನರ್ಥಕಾರೀ ಕಲ್ಪನೆಯಾಗುತ್ತದೆ.

ಅನರ್ಥಕಾರಿಯಾಗಿರುವದು ಎಂದರೆ, ಇದು ಗರ್ವವನ್ನು ಹೆಚ್ಚಿಸುತ್ತದೆ; ರಜೋಗುಣದ ಭೋಗ–ಬಯಕೆಯ ಮನದಲ್ಲಿ ಆಡಂಬರವನ್ನು ಮತ್ತು ಹೆಬ್ಬಯಕೆಗಳನ್ನು ಅಧಿಕಗೊಳಿಸುತ್ತದೆ. ಹೀಗಿರುವಾಗ, ನಾವು ಮೇಲೇಳಲು ಯತ್ನಿಸದಿದ್ದಲ್ಲಿ, ಇದು ಆಧ್ಯಾತ್ಮಿಕ ಅಧಃಪತನಕ್ಕೆ ಕರೆದೊಯ್ಯುತ್ತದೆ; ಪ್ರಮಾದಗಳ ಕಡೆಗೆ ಸೆಳೆಯುತ್ತದೆ. ಏಕೆಂದರೆ ಇದೊಂದು ಅಹಂಕಾರದಿಂದ ಕೂಡಿದ ವಿಚಾರವಾಗಿರುತ್ತದೆ. ಹೀಗಾಗಿ ಅತಿಮಾನಸ ಹಂತದ ಬದಲಾವಣೆಗೆ ಮೊದಲನೆಯದಾಗಿ ಅಹಂಕಾರವನ್ನು ತ್ಯಜಿಸಿ ಹೊರ ಬರಬೇಕಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/280**

*

ಅತಿಮಾನವನ ವಿಷಯದ ಬಗೆಗೆ, ಚೈತನ್ಯಶೀಲ ಜೀವಿಯೋರ್ವನ ಮನೋಮಯದ ಸೀಮಿತದ ಆ ಹಂತದಿಂದ ಮುಕ್ತವಾಗಿ (ಉತ್ತರೋತ್ತರ ಸ್ಥಿತಿಯ ಹಂತಕ್ಕೆ) ಸಂಪೂರ್ಣ ವಿಮೋಚನೆಗೊಂಡು ಆ ಊರ್ಧ್ವದೆಡೆ ಶಾಶ್ವತವಾಗಿ ಸಾಗುತ್ತಿರುವ ಚೈತನ್ಯಶೀಲ ಜೀವಿಯಾಗಿದ್ದಾನೆ. ತನ್ನಲ್ಲಿಯೇ ಅಂತರ್ಗತವಾಗಿ ಕಾರ್ಯಪ್ರವೃತ್ತವಾಗಿರುವ ಬಲಗಳ ಕ್ರಿಯೆಗಳ ಬಗೆಗೆ ಸಮರ್ಥವಾಗಿ, ಸಂಪೂರ್ಣವಾಗಿ ಗ್ರಹಿಸುವದರ ಮೂಲಕ ಅದರ ಪರಿಪೂರ್ಣತೆಯ ಕುರಿತು ಜಾಗ್ರದಾವಸ್ಥೆಯಲ್ಲಿ ಕಾರ್ಯಕ್ಕಿಳಿಯಲು ಅವನು ನಿರ್ಧರಣೆ ಹೊಂದಿದ್ದಾನೆ. ಇವೆಲ್ಲವನ್ನೂ ಬಳಸಿಕೊಂಡಾಗಲೀ ಅಥವಾ ಅವುಗಳ ಮೂಲಕವೇ ನಿರ್ಧರಣೆಯನ್ನು ಮಾಡುವದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/514**

*

**ಭೂಮಿಯ ಸಲುವಾಗಿ ಸಿದ್ಧತೆಗಳು**

– ಅನುವಾದ: ಪುಟ್ಟು ಕುಲಕರ್ಣಿ

ಯಾವುದೇ ವೈಯಕ್ತಿಕ, ಏಕಮಾತ್ರ ರೂಪಾಂತರಣವು ಈ ಭೂ–ಬದುಕಿನ ಸಲುವಾಗಿ ಕಾರ್ಯವನ್ನು ನಿರ್ವಹಿಸುವ ತತ್ವದಿಂದ ದೂರವಿರುವುದಿಲ್ಲ, (ಅಂದರೆ ಯಾವುದೇ ವ್ಯಕ್ತಿಯ ರೂಪಾಂತರಣವು), ಈ ರೂಪಾಂತರಣವು ಘಟಿಸುವ ಸಂಗತಿಯಾಗಿರಲೇಬೇಕು ಅಥವಾ ಉಪಯುಕ್ತವಾಗಿರಲೇಬೇಕು. (ಯಾವುದೇ

ಓರ್ವ ಮಾನವ ಜೀವನದ ವೈಯಕ್ತಿಕ ಹಂತದಲ್ಲಿ ತನ್ನದೇ ಶಕ್ತಿಯಿಂದ ಈ ರೂಪಾಂತರಣದ ಪ್ರಕ್ರಿಯೆಯನ್ನು ಹೊಂದಲಾರ, ಇದು ಯೋಗದ ಮೂಲಕ ಅತಿಮಾನವನನ್ನು ಅಲ್ಲಿ–ಇಲ್ಲಿ ಸೃಷ್ಟಿಗೊಳಿಸುವ ಉದ್ದೇಶವೂ ಆಗಿರುವದಿಲ್ಲ.

ಯೋಗದ ಉದ್ದೇಶವೆಂದರೆ – ಈ ಅತಿ(ಧಿ)ಮಾನಸದ ಚೈತನ್ಯವನ್ನು (ಸುಪ್ರಾಮೆಂಟಲ್ ಕಾನ್ಸಿಯಸ್‌ನೆಸ್) ಈ ಭೂಮಿಗೆ ಅವತರಣಗೊಳಿಸುವದಾಗಿದೆ. ಅದನ್ನು ಇಲ್ಲಿ ನೆಲೆಗೊಳಿಸುವದಾಗಿದೆ. ಈ ಮೂಲಕ ಒಂದು ನವ ಜನಾಂಗವನ್ನು ಸೃಷ್ಟಿಸುವದಕ್ಕೆ ಇರುತ್ತದೆ. ಏಕೆಂದರೆ ಈ ಅಧಿಮಾನಸದ ಚೈತನ್ಯವು ಈ ನವ ಜನಾಂಗದ ಆಂತರಿಕ ಹಾಗೂ ಬಾಹ್ಯದ ಸಂಗತಿಗಳನ್ನು ವೈಯಕ್ತಿಕ (ವ್ಯಷ್ಠಿ) ಹಾಗೂ ಸಮಷ್ಠಿಯಲ್ಲಿ ಜೀವನವನ್ನು ನಿಯಮಬದ್ಧಗೊಳಿಸುವದಾಗಿರುತ್ತದೆ.

ನಮ್ಮ ಸುತ್ತಲೂ ನಮ್ಮಿಂದಲೇ ಸೃಷ್ಟಿಸಲ್ಪಟ್ಟ ತೊಂದರೆಗಳು ವೈಯಕ್ತಿಕವಾಗಿ ಅಥವಾ ಸಾಮುದಾಯಿಕವಾಗಿ ಇದ್ದರೂ. ಅವುಗಳು ಅನಿವಾರ್ಯವಾಗಿರುವ–ದರಿಂದ, ಈ ಕಾರಣಕ್ಕೆ ಆಶ್ರಮಗಳ ಅಸ್ತಿತ್ವವಿರಬೇಕಾಗುತ್ತದೆ.

ಇಲ್ಲಿ ಭೂ–ಚೈತನ್ಯವನ್ನು (ಮೃಣ್ಮಯದ ಚೈತನ್ಯವನ್ನು) ಸಿದ್ಧಗೊಳಿಸುವದರ ಸಲುವಾಗಿ ಆಶ್ರಮದಿಂದ ಹಾಗೂ ಇತರರಿಂದ (ಸಾಮಾನ್ಯವಾಗಿ ಲೌಕಿಕ–ಪ್ರಜ್ಞೆಯಿಂದ ಕಾರ್ಯ ನಿರ್ವಹಿಸುತ್ತಿರುವ ಹಂತದಿಂದ), ಒಟ್ಟಿನಲ್ಲಿ ಈ ಅಧಿಮಾನಸ ಬಲವು ಅವತರಣಗೊಂಡು, ಅದನ್ನು ಸಾಧ್ಯಗೊಳಿಸುವದರ ಸಲುವಾಗಿ ರೂಪಿಸಲ್ಪಟ್ಟಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/296**

*

**ಅತಿಮಾನವ ಹಂತದ ಎರಡು ಮಾರ್ಗಗಳು**

ವಿಜ್ಞಾನ ಘನಸತ್ತೆಯ ಜೀವಿಗಳಿಗೂ ಒಂದು ಪರಮೋಚ್ಚ ನೆಲೆಯ ಅಧಿಮಾನಸ ಹಂತಕ್ಕೆ, ವಿಕಸನದ ಮೂಲಕ ಸಾಗುತ್ತಿರುವ ಈ ಅತ್ಯಂತ ಸೂಕ್ತವಾದ ಗುಣ ವಿಶೇಷಗಳನ್ನು ಹೊಂದಿರುವ ಇದು ದಿವ್ಯ–ಜೀವನವಾಗಿದೆ; ಇದು ದಿವ್ಯ–ಅಧ್ಯಾತ್ಮದ ದಿವ್ಯ–ಪ್ರಕಾಶದ ಜೀವನದ ಪ್ರಾರಂಭವಾಗಿದೆ, ಮತ್ತು, ಅದರ ಶಕ್ತಿಯೂ ಆಗಿದೆ. ಜೊತೆಗೆ ಈ ಲೌಕಿಕದ ಪ್ರಕೃತಿಯಲ್ಲಿ ಪ್ರಕಟಗೊಳ್ಳುವ ಮೂಲಕ ಪ್ರಫುಲ್ಲಗೊಳ್ಳುತ್ತದೆ.

ಇದನ್ನು ಈ ಕೆಳಕಂಡಂತೆ ವಿಶ್ಲೇಷಿಸಬಹುದಾಗಿದೆ. ಇದು ಮಾನವನ ಮನೋಚೇತನದ ಹಂತವನ್ನು ಮೀರಿ ಸಾಗುತ್ತಿರುವದರಿಂದ, ಆಧ್ಯಾತ್ಮಿಕ ಮತ್ತು ಅಧಿಮಾನಸದ ಅತಿಮಾನವನ ಹಂತದಲ್ಲಿನ ಜೀವನವಾಗಿರುತ್ತದೆ. ಆದರೆ ಅತಿಮಾನವ ಹಂತವು ಪ್ರಾಚೀನ ಅಥವಾ ವರ್ತಮಾನದ ಚಿಂತನಗಳಿಂದ ಗೊಂದಲಗೊಳ್ಳುವಂತೆ ರೂಪಿತವಾಗಬಾರದು. ಏಕೆಂದರೆ ಈ ಅತಿಮಾನವ ಹಂತದ ಮನೋಚಿಂತನಗಳು, ಸಾಮಾನ್ಯ ಮಾನವ ಹಂತದಿಂದಲೇ ಊರ್ಧ್ವದೆಡೆ ಆರೋಹಗೊಂಡಿರುವ ಸಂಗತಿಗಳಾಗಿವೆ. ಆದರೆ ಅವು ಅದೇ ವರ್ಗಗಳಿಂದಾಗಿರದೇ, ಆ ವರ್ಗದ ಕೆಲ ಅಂಶಗಳನ್ನು ಮಾತ್ರ ಬಳಸಿಕೊಂಡು ಅಭಿವ್ಯಕ್ತಗೊಂಡಿರುತ್ತವೆ. ಅಂದರೆ, ವಿಕಸನದಲ್ಲಿ ವೈಶಾಲ್ಯತೆಯನ್ನೂ ಪಡೆದ ವ್ಯಕ್ತಿತ್ವವಾಗಿರುತ್ತದೆ. ಒಂದು ವಿವರ್ಧಿತಗೊಂಡ (ಮ್ಯಾಗ್ನಿಫೈಡ್) ಮತ್ತು ಉತ್ಪ್ರೇಕ್ಷಿತಗೊಂಡ "ಅಹಂ" ಆಗಿದ್ದು, ಮನೋಬಲವನ್ನು ವರ್ಧಿಸಿಕೊಂಡ, ಅಭಿವರ್ಧನೆಗೊಂಡಿರುವ ಜೀವಧಾರಕಗಳ ಬಲಗಳ ಹಾಗೂ ಮಾನವನ ಅನಭಿಜ್ಞತೆಯ ಪರಿಷ್ಕೃತ ಮತ್ತು ಸಾಂದ್ರೀಕೃತವಾಗಿದ್ದು, ಜೊತೆಗೆ ವಿರಾಟ್ ರೂಪದಲ್ಲಿ ಪ್ರಕಟಗೊಂಡಿರುತ್ತದೆ; ಇದು ಇವೆಲ್ಲವನ್ನೂ ಮುಂದುವರೆಸಿಕೊಂಡು ಹೋಗುತ್ತದೆ. ಸಾಮಾನ್ಯವಾಗಿ ಇದರಲ್ಲಿಯೇ ಅನುಷ್ಠಾನಿಸಲ್ಪಡುತ್ತವೆ. ಹೀಗಾಗಿ ಈ ವಿಚಾರಪೂರ್ಣ ಪ್ರಾಬಲ್ಯವನ್ನು ಈ ಅತಿಮಾನವನು ಮಾನವೀಯತೆಯ ಮೇಲೆ ಹೊಂದಿರುತ್ತಾನೆ. ಇದನ್ನು (Nitzchean Type) ಮಾದರಿಯ ಅತಿಮಾನವ ಹಂತವೆಂದು ಕರೆಯುತ್ತಾರೆ. ಇದು ತನ್ನದೇ ಕ್ಷೇತ್ರದಲ್ಲಿರುವ ಸುಂದರ ನರಪಶು ಇಲ್ಲವೇ ಕರಾಳ ಸ್ವರೂಪದ ಮೃಗದಂತೆ, ಇಲ್ಲವೇ ಅಸ್ತಿತ್ವದಲ್ಲಿ ಇರುವ ಇತರ ಯಾವುದೇ ಮೃಗೀಯ ಸ್ವರೂಪದಂತೆ ಇರಬಹುದು. ಬರ್ಬರ ಹಂತಕ್ಕೆ ಮತ್ತೆ ಮರಳಿರುವ, ಅದೇ ತೆರನಾದ ಕ್ರೂರತೆಯ ಮತ್ತು ಅದೇ ತೆರನಾದ ಬಲವನ್ನು ಹೊಂದಿರುವ ಸಂಭವವೂ ಇರಬಹುದು.

ಆದರೆ ಇದಾವುದೂ "ವಿಕಾಸ"ವಾಗಿರುವದಿಲ್ಲ. ಇದು ಪ್ರಾಚೀನ ಕಾಲದ ಕ್ಲೇಶಪೂರ್ಣ ಪರಿಶ್ರಮದ ಹಿಂದಿರುಗುವಿಕೆಯ (ಮತ್ತೆ ಮರಳಿ ಬಂದಿರುವ) ಹಂತವಾಗಿರಬಹುದು. ಅಥವಾ, ಇದು ಮತ್ತೆ ರಾಕ್ಷಸ ಅಥವಾ ಅಸುರನ ಆಗಮನವನ್ನು ಮಹತ್ವಗೊಳಿಸುವಂತಹ ಸ್ಥಿತಿಯಲ್ಲಿ, ಅಂದರೆ ಮಾನವ ವರ್ಗದ ಒತ್ತಡದಿಂದ ಕೂಡಿದ ಪ್ರಯತ್ನಗಳನ್ನು ಹಿಂದಿಕ್ಕಿ, ಮತ್ತೆ ತನ್ನದೇ ಶ್ರೇಷ್ಠಾತಿ–ಶ್ರೇಷ್ಠವೆಂದು ಅತಿಕ್ರಮಿಸಿಕೊಂಡಿರಬಹುದು. ಆದರೆ ಈ ಅತಿಕ್ರಮಿಸುವಿಕೆಯು

ತಪ್ಪು ದಿಶೆಯಲ್ಲಿ ಘಟಿಸಿರುತ್ತದೆ. ಒಂದು ಹಿಂಸಾತ್ಮಕವಾದ ಹಾಗೂ ಪ್ರಕ್ಷುಬ್ದಗೊಂಡ ಅತ್ಯಾವಶ್ಯಕವಾಗಿರುವ "ಅಹಂ" ತನ್ನನ್ನು ತಾನೇ ತೃಪ್ತಿಪಡಿಸಿಕೊಳ್ಳುವ ಸಲುವಾಗಿ – ಅದೂ ಪರಮೋಚ್ಚ ನಿರಂಕುಶಾಧಿಕಾರತ್ವದ ಅಥವಾ ತನ್ನದೇ ಸ್ವಯಂ ಸಂತೃಪ್ತಿಯ ಸಲುವಾಗಿ ಅರಾಜಕತೆಯ ಬಲದಿಂದ ಈ ತೆರನಾದ ರಾಕ್ಷಸೀ ಸಾಮರ್ಥ್ಯದ ಅತಿಮಾನವ ಹಂತವು ರೂಪಣೆಗೊಳ್ಳಬಹುದು.

ಆದರೆ ಈ ಜಗತ್ತಿನಲ್ಲಿ ಬೃಹತ್ ಮಾನವರೂಪೀ ರಾಕ್ಷಸತ್ವವು ಅಥವಾ ಭಕ್ಷಕ (ವಿನಾಶಕಾರೀ) ಸ್ವರೂಪವು, ಒಟ್ಟಿನಲ್ಲಿ ಈ ರಾಕ್ಷಸತ್ವವು ಈಗಲೂ ಅಸ್ತಿತ್ವದಲ್ಲಿ ಇದ್ದರೂ ಸಹಿತ, ಅದು ಯಾವಾಗಲೂ ಇತಿಹಾಸದ ಸಾಮರ್ಥ್ಯವನ್ನೇ ಅವಲಂಬಿಸಿರುತ್ತದೆ; ಇಂತಹ ವ್ಯಕ್ತಿತ್ವಗಳ ಬಹು ಸಂಖ್ಯಾತ ಆಗಮನಗಳು ವಿಕಾಸವನ್ನು ಪತನಗೊಳಿಸುತ್ತವೆ. ಈ ಅತಿ ಸಾಮರ್ಥ್ಯದಿಂದ ಉಬ್ಬಿ ಪ್ರದರ್ಶನಗೊಳ್ಳುತ್ತಿರುವ ಬಲಗಳು – ಅದೊಂದು ಸ್ವಯಂ ನಿರ್ಮಿತ, ಸ್ವಯಂ ಸಮಾಹಿತಗೊಂಡ, ಸ್ವಯಂ–ಅನುಷ್ಠಿತಗೊಂಡಿರುವ ಹಂತವಾಗಿರುತ್ತದೆ; ಇದರ ಜೊತೆಗೆ, ಒಂದು ವೇಳೆ ಅದು ತೃಪ್ತಿದಾಯಕವಾದ ಅಂಶಗಳಿಂದ ಕೂಡಿರುವ ಸ್ವಯಂ–ನಿಯಂತ್ರಿತ ಮನೋಬಲದಿಂದ ಮತ್ತು ಜೀವನ–ಶಕ್ತಿಯಿಂದ ಕೂಡಿದ್ದರೂ ಸಹಿತ, ಸಾಮರ್ಥ್ಯಶಾಲಿಯಾಗಿದ್ದರೂ ಸಹಿತ, ಶಾಂತಚಿತ್ತದಂತೆ ಕಂಡರೂ ಅಥವಾ ಪ್ರಶಾಂತ ಇಲ್ಲವೇ ದಿಗಿಲು ಹುಟ್ಟಿಸುವ ಭಾವೋದ್ರೇಕಗಳಿಂದಲೇ ಸಂಘಟಿತವಾಗಿದ್ದರೆ, ಸೂಕ್ತವಾಗಿದ್ದರೆ, ಪ್ರಭುತ್ವವನ್ನು (ಪ್ರಾಬಲ್ಯವನ್ನು) ಹೊಂದಿದ್ದರೆ ಊರ್ಧ್ವಪಾತಕವಾಗಿದ್ದರೆ (ಸಬ್ಲಿಮೇಶನ್) ಅಥವಾ ಉತ್ಪತನಗೊಂಡಿದ್ದರೆ ಅದೂ ಮಾನಸಿಕ ಮತ್ತು ಜೈವಿಕ ಅಹಂನ ಅಂಶವಾಗಿದ್ದರೆ ಅದು ರಾಕ್ಷಸೀ ಪ್ರವೃತ್ತಿಯಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 22/1104–05**

*

**ನೈಜ ಅತಿಮಾನವ ಹಂತದ ಪ್ರಹೇಳಿಕೆ (ಗಾಸ್ಪೆಲ್)**

ಈ ತೆರನಾದ ಅತಿಮಾನವ ಚಿಂತನವನ್ನು ತೀರ ಇತ್ತೀಚಿಗೆ ಗಮನಕ್ಕೆ ತರಲಾಗಿದೆ. ಇದರ ಬಗೆಗೆ ರೂಪಿತವಾಗಿರುವ ಭರ್ತ್ಸನಾಪೂರಿತ ವ್ಯವಹರಣೆಗಳ ಬಗೆಗೆ ಇನ್ನೂ ಸುಸಂಬದ್ಧವಾದ, ಫಲಪ್ರದವಾದ ಚರ್ಚೆ–ಸಂವಾದ ನಡೆದೇ ಇಲ್ಲ. ಅದರಲ್ಲೂ ಇದನ್ನು ಸಾಮಾನ್ಯವಾಗಿ ಮಾನವ ಕುಲವು ವಿರೋಧಿಸುವ

ಮನೋಭಾವವನ್ನೇ ಹೊಂದಿರುತ್ತದೆ. ಏಕೆಂದರೆ ಅವರಿಗೆ ಈಗಾಗಲೇ ಉಪದೇಶಿಸಲ್ಪಟ್ಟಿರುವಂತೆಯೇ ಅಥವಾ ಅರೆಯರಿವಿನ ಚೇತನಾವಸ್ಥೆಯಲ್ಲಿ ಇರುವ ಮೂಲಕವೇ ಆಶಯಗಳನ್ನು ವ್ಯಕ್ತಪಡಿಸುತ್ತಿರುವದರ ಮೂಲಕ (ಹಕ್ಕು ಮಂಡಿಸುತ್ತಿರುವದರ ಮೂಲಕ) ಹೇಳುತ್ತಿರುವದೇನೆಂದರೆ, ಆ ಹಂತದ ಅವತರಣಕ್ಕೆ ಬಹುತೇಕ ಜನರು ಇನೂ ಸಾಮರ್ಥ್ಯವನ್ನು ಪಡೆದಿಲ್ಲ. ನೈತಿಕ ಹಾಗೂ ಅಧ್ಯಾತ್ಮಿಕ ವಿಶೇಷಾಧಿಕಾರಗಳ ಬಗೆಗೆ ಲಕ್ಷ್ಯವನ್ನು ಕೇಂದ್ರೀಕರಿಸುವಲ್ಲಿ ಮತ್ತು ಅದರ ಮೇಲೆ ಪ್ರಭುತ್ವವನ್ನು ಹೊಂದುವಲ್ಲಿ, ಶಕ್ತಿಗಳನ್ನು ಹೊಂದುವಲ್ಲಿ ಹಾಗೂ ನಿಷ್ಕ್ರಿಯೆಗೊಂಡಿರುವ ಪ್ರತಿಷ್ಠೆಗೆ ರಕ್ಷಣಾತ್ಮಕ ಆಕಾರಗಳನ್ನು ಕೊಡುವದರ ಮೂಲಕ, ಮಾನವ ವರ್ಗದಲ್ಲಿ ಸ್ವಾತಂತ್ರ್ಯವನ್ನು ರೂಪಿಸುವಲ್ಲಿ ಇನ್ನೂ ಸಾಮರ್ಥ್ಯವನ್ನು ಪಡೆದಿಲ್ಲ ಎನ್ನುವ ಅಭಿಪ್ರಾಯವಿದೆ.

ಈ ಮೂಲಕ ಪರಿಗಣಿಸಲ್ಪಡುತ್ತಿರುವದೇನೆಂದರೆ, ಈ ಅತಿಮಾನವ ಹಂತವು ಅಪರೂಪವಾದ ಮತ್ತು ಏಕೈಕವಾದ “ಅಹಂ” ಭಾವವಾಗಿದ್ದು, ಇದು ಇನ್ನುಳಿದ ಸಾಮಾನ್ಯ–ಮಾನವನ ಗುಣವಿಶೇಷಗಳ ಹೊರಾವರಣದಲ್ಲಿಯೇ ದೈವತ್ವವನ್ನು ಅರೋಪಣೆ ಮಾಡಿಕೊಂಡಿರುವದಕ್ಕಿಂತ ಹೆಚ್ಚಿನ ವಿಷಯವೇನೂ ಇಲ್ಲ ಎನ್ನುವ ಪರಿಗಣನೆಯೂ ಇದೆ. ಆದರೆ ಈ ಅಭಿವ್ಯಕ್ತಿಯು ಅತ್ಯಂತ ಸೀಮಿತ ಹಾಗೂ ಹಾಸ್ಯಪೂರಿತ ಅನುಕರಣವಾಗಿದೆ.

ಆದರೆ ನಿಜವಾದ ಅತಿಮಾನವ ಹಂತದ ಪ್ರಹೇಳಿಕೆಯು(ಅನುಭಾವದ ವಾಣಿಯು) ನಮಗೆ – ಪ್ರಗತಿಶೀಲ ಮಾನವ ಕುಲಕ್ಕೆ – ಒಂದು ಉದಾರ ಚಿಂತನವನ್ನು ಒದಗಿಸುತ್ತಿದೆ. ಜೊತೆಗೆ ಯಾವುದೇ ಕಾರಣಕ್ಕೂ ಒಂದು ಮಾರ್ಗ ನಿರ್ಮಾಣದ ಸಲುವಾಗಿ ಅಥವಾ ವ್ಯಕ್ತಿನಿಷ್ಠತೆಯ ಅಂಶಗಳಿಗಾಗಿ ಅಹಂಕಾರಿಯಾಗದಂತೆ ಇರಬೇಕಾಗುವದು. ಏಕೆಂದರೆ, ಇದು, ಇಲ್ಲಿಯವರೆಗೂ ಯಾವುದೇ ಜೀವಿಯೂ ಕೈಕೊಳ್ಳದಿರುವಂತಹ ಮಹತ್ತರ ಕಾರ್ಯವನ್ನು ಕೈಕೊಳ್ಳುವ ಮೂಲಕ ಅಥವಾ ಈ ಲೌಕಿಕ (ಭೂ ಮಂಡಳದ ವ್ಯಾಪ್ತಿಯಲ್ಲಿ) ಇತಿಹಾಸದಲ್ಲಿಯೂ ಸಹಿತ ಯಾರೂ ಅಭೀಪ್ಸೆ ಹೊಂದಿರದ ವಿಷಯವಾಗಿದೆ. ತನ್ನಲ್ಲಿ ತಾನೇ ವಿಕಸನಗೊಳ್ಳುತ್ತ, ಅದೂ ಅತ್ಯಂತ ಪ್ರಜ್ಞಾಪೂರ್ವಕವಾಗಿ ಮುಂದಿನ ಪರಮೋಚ್ಚ ಹಂತಕ್ಕೆ ಸಾಗುವ ವಿಷಯವಾಗಿರುತ್ತದೆ. ಅದರಲ್ಲಿ ಈಗಾಗಲೇ ಅರ್ಧದಷ್ಟು ಪ್ರಕಾಶನಗೊಂಡು, ಅವಿರತವಾದ ಚಕ್ರೀಯ ವ್ಯವಸ್ಥೆಯಲ್ಲಿ, ಅದೂ ಈ ಪ್ರಕೃತಿಯ ಫಲಪ್ರದದಾಯಕವಾದ ನಾದಗಳಲ್ಲಿ ದರ್ಶನಕ್ಕೆ ಲಭ್ಯವಿದೆ.

ಯಾವಾಗ ನಾವು ಇದನ್ನು ಪರಿಕಲ್ಪಿಸಿಕೊಳ್ಳುತ್ತೇವೆಯೋ, ಈ ಸಂಕಲ್ಪವು ಖಂಡಿತವಾಗಿಯೂ ಅತ್ಯಂತ ಸೂಕ್ತವಾದ, ಸಾಮರ್ಥ್ಯದ ಬೀಜಗಳನ್ನೇ ಹೊಂದಿದ್ದು ಅವು ಚಿಂತನಗಳ ಮೂಲಕವೇ ಸಂರಚನೆಗೊಂಡು ನಮ್ಮ ಮೃಣ್ಮಯದ ಬದುಕಿನಲ್ಲಿ ನಮ್ಮದೇ ಮಾನವ ಕುಲವನ್ನು ಪ್ರಕಾಶನಗೊಳಿಸುವ ಸಲುವಾಗಿ ರೂಪಿಸಲ್ಪಟ್ಟಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/151**

*

**ಮಾನವನ ವಿಕಾಸದ ಮಾರ್ಗಗಳು; ದೇವತೆಗಳು ಮತ್ತು ದೈತ್ಯರು**

ದೇವತೆ ಮತ್ತು ದೈತ್ಯ, ದೇವ ಮತ್ತು ಅಸುರ ಪರಸ್ಪರ ಅವರದೇ ಆದ ಅವರವರ ವಂಶಗಳಲ್ಲಿನ ವ್ಯತ್ಯಾಸದೊಂದಿಗೇನೇ ಇರುವರು. ಈ ವಿಕಾಸದ ಕ್ರಿಯೆಯಲ್ಲಿ ಯಾರನ್ನೂ ಹೊರತುಪಡಿಸಲು ಸಾಧ್ಯವಾಗುವದಿಲ್ಲ.

ಅವರೀರ್ವರು ಜನ್ಮಜಾತವಾಗಿ ಬಂದಿರುವ ವಿರುದ್ಧ ಧ್ರುವಗಳಂತೆ ಇದ್ದರೂ, ಅದು ಸಾಮಾನ್ಯ ಅಸ್ತಿತ್ವದಲ್ಲಿ ಮತ್ತು ಸಾಮಾನ್ಯ ಸ್ವಭಾವದಲ್ಲಿ ಮಾತ್ರ ಈ ತೆರನಾದ ಭಾವವಿರುತ್ತದೆ. ಅವರಲ್ಲಿ ಓರ್ವರು ಅನಂತತೆಯಿಂದ ಹಾಗೂ ಪ್ರಕಾಶದಿಂದ ಸಂತೃಪ್ತನಾಗಿದ್ದಾನೆ. ಮತ್ತು ಲೀಲೆಗಳಲ್ಲಿ ತೊಡಗುವ ಸಲುವಾಗಿ ಅವತರಣಗೊಂಡಿದ್ದಾನೆ. ಇನ್ನೊಬ್ಬನು ದುರ್ಬೋಧತೆಯಲ್ಲಿ, ಅಸ್ಪಷ್ಟತೆಯಲ್ಲಿ, ಕೋಪದಲ್ಲಿ, ಸದಾ ಹೋರಾಟಗಳಲ್ಲಿ ತೊಡಗುವ ಸಲುವಾಗಿ ಅಧಿರೋಹಣೆ–ಗೊಂಡಿರುತ್ತಾನೆ.

ದೇವನ ಸರ್ವ ಲೀಲೆಗಳೂ ಆ ವಿಶ್ವದಿಂದಲೇ ಪ್ರಾಪ್ತಗೊಳ್ಳುತ್ತಿದ್ದು ಜೊತೆಗೆ ವೈಶ್ವಿಕವಾಗಿಯೇ ಅನುಷ್ಠಾನಗೊಳಿಸಲ್ಪಟ್ಟಿರುತ್ತವೆ. ಅವನು ಒಂದು ಸಫಲೀಕೃತವಾದ ಸೌಷಮ್ಯವನ್ನು (ಸಾಂಗತ್ಯವನ್ನು) ಹೊಂದಿರುತ್ತಾನೆ. ಅವನ ಗುಣವಿಶೇಷಗಳಲ್ಲಿ ಪರಿಶುದ್ಧವಾಗಿಯೇ ಸಂಯೋಗಗೊಳ್ಳುತ್ತಿದ್ದು, ಮತ್ತು ಕೃಪಾಪೂರ್ಣ ಹಸ್ತದಿಂದಲೇ ರೂಪಿತಗೊಳ್ಳುತ್ತಿದ್ದು, ಅವು ತಮ್ಮಷ್ಟಕ್ಕೆ ತಾವೇ ನೈಸರ್ಗಿಕವಾಗಿ ಸಂಯೋಗ–ಗೊಳ್ಳುತ್ತವೆ. ಇದು ಬೃಂದಾವನದಲ್ಲಿ ಅವಿನಾಭಾವ ಸಂಬಂಧವಾಗಿರುವ ಆ ತೋಷ–ವೃತ್ತದಲ್ಲಿ – ಅವು ಆ ದೇವಕೃಷ್ಣನು ಅಂತಹ ತೋಷ–ವೃತ್ತಗಳನ್ನು ನಿರ್ಮಿಸುತ್ತ – ಅವುಗಳ ಮೇಲೆ ಪ್ರಭುತ್ವವನ್ನು ಹೊಂದಿ, ಅವುಗಳನ್ನು ಪರಿಪೂರ್ಣಗೊಳಿಸುತ್ತಾನೆ.

ದೇವರ ದೃಷ್ಟಿಯಲ್ಲಿ ವಿಕಾಸವೆಂದರೆ ಅಂತಃಪ್ರಜ್ಞೆಯಲ್ಲಿ, ಪ್ರಕಾಶದಲ್ಲಿ, ಆಹ್ಲಾದದಲ್ಲಿ, ಪ್ರೇಮದಲ್ಲಿ, ಸಂತೋಷದಲ್ಲಿ, ಆನಂದದಾಯಕ ತಜ್ಞತೆಯಲ್ಲಿ ಪ್ರಗತಿ ಹೊಂದುವದಾಗಿದೆ. ಲೋಕ ನಿಯಮಗಳ ಅನುಸಾರವಾಗಿಯೇ ಸೇವೆ ಗೈಯುವ ಹಾಗೂ ಸೇವೆಯಿಂದಲೇ ನಿರ್ವಹಣೆ ಮಾಡುವದಾಗಿದೆ. ಇದರ ಜೊತೆಗೆ ಸಮರ್ಥವಾಗಿರುವ, ದಿಟ್ಟತನದಿಂದ(ಸ್ಥೈರ್ಯದಿಂದ) ಕೂಡಿರುವ ಮತ್ತೆ ಚುರುಕಾಗಿ, ಯಾವುದೇ ನೋವುಗಳಿಲ್ಲದ, ನೀಚತನವಿಲ್ಲದ ಹಾಗೆ, ಜೊತೆಗೆ ಮೃದುತನದಿಂದ, ದಯಾಳುವಾಗಿ ಅದೂ ಅಲ್ಲದೇ ಸ್ವಯಂ–ಪ್ರಸನ್ನತೆಯಲ್ಲಿ, ಯಾವ ಕಾರಣಕ್ಕೂ ಶಿಥಿಲತೆ ಇಲ್ಲದ ಹಾಗೆ, ದುರಾಚಾರಿಯಲ್ಲದ ಹಾಗೆ, ಅಥವಾ ಅಸಾಮರ್ಥ್ಯ ತೋರದ ಹಾಗೆ ಇರುವದಾಗಿದೆ; ಪ್ರತಿಯೋರ್ವನಲ್ಲಿಯೂ ಅವನ ಅಸ್ಮಿತೆಯನ್ನು ತರಲು ಸರ್ವಸ್ವವನ್ನೂ ಪ್ರಕಾಶಮಾನಗೊಳಿಸುವ ಮೂಲಕ (ತೇಜದುಂಬುವ ಮೂಲಕ) ಹಾಗೂ ಸಂತೋಷವಾಗಿಡುವ ಮೂಲಕ, ಕರುಣೆಯಿಂದ – ಸಹಾನುಭೂತಿಯಿಂದಲೇ ಅದೂ ಮಾನವನೊಂದಿಗೆ ಮತ್ತು ಸರ್ವ ಜೀವ ಪ್ರಪಂಚದೊಂದಿಗೆ ಸ್ಪಂದಿಸುವದಾಗಿದೆ.

ಮತ್ತೆ ಇದು ಅಂತಿಮವಾಗಿ, ನಿರಾಕಾರ ವ್ಯಕ್ತಿತ್ವವನ್ನು ರೂಪಣೆಗೊಳಿಸುವ ಹಾಗೂ ಈ ಜಗತ್ತಿನ ಐಕ್ಯತೆಯನ್ನು ಸದಾಕಾಲವೂ ಅನುಭವಜನ್ಯವಾಗುವ ಹಂತಕ್ಕೆ ಉನ್ನತೀಕರಣಗೊಳಿಸುವ ಮೂಲಕ ವಿಕಾಸವನ್ನು ಹೊಂದುವದಾಗಿದೆ. ಇದರ ಸಲುವಾಗಿಯೇ ದೇವತೆಗಳು ಇರುವರು. ಅವರು ತಮ್ಮ ವೈಶ್ವಿಕ ಆಯಾಮದ ಬಗೆಗೆ ಸದಾ ಜಾಗೃತವಾಗಿಯೇ ಇರುವದರಿಂದಲೇ ಅವರು “ದಿವ್ಯ”ವಾಗಿದ್ದಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/152–53**

*

**ದಿವ್ಯ ಮಾನವ**

ಖಂಡಿತವಾಗಿಯೂ, ಇಲ್ಲಿ ಶಕ್ತಿಯು ಅಂತರ್ಗತವಾಗಿದೆ. ದಿವ್ಯ–ಮಾನವನಾಗಿರುವದೆಂದರೆ, ಸ್ವಯಂ–ನಿಯಂತೃವಗಿರುವದು ಮತ್ತು ಲೋಕ–ನಿಯಾಮಕನೂ ಆಗಿರುವದು. ಆದರೆ ಇದು ಮತ್ತೊಂದು ದೃಷ್ಟಿಕೋನದಲ್ಲಿ ಬಾಹ್ಯ–ಸಂವೇದನೆಯಂತೆ ಕಾಣುತ್ತದೆ. ಇದೊಂದು ರಹಸ್ಯಮಯ ಕರುಣೆಯಲ್ಲಿ ಹಾಗೂ ಮತ್ತೊಂದು ಜೀವಿಯ(ಜೀವನದ) ಶಾಸನಗಳನ್ನು ಅರಿತುಕೊಂಡಿರುವ

ಜೊತೆಗೆ ಜಗತ್ತಿನ ಜೀವನದ ಬಗೆಗೂ ಅರಿತುಕೊಂಡಿರುವ ಹಾಗೂ ಸಹಾಯ ಮಾಡುವ ಕ್ರಿಯೆಯನ್ನು ಅವಲಂಬಿಸಿಕೊಂಡು ಈ ನಿಯಮವು ರೂಪಿತ–ಗೊಂಡಿರುತ್ತದೆ. ಅದೂ ಅಲ್ಲದೇ ಅಲ್ಲಿ ಅವಶ್ಯಕತೆ ಇದ್ದ ಸಂದರ್ಭದಲ್ಲಿ, ಅದರ ಮಹತ್–ಸಾಧ್ಯತೆಗಳೆಲ್ಲವನ್ನೂ ಸಾಕ್ಷಾತ್ಕರಿಸಿಕೊಳ್ಳಲು ಬಾಧ್ಯಸ್ಥನಾಗಿರಬೇಕಾಗುತ್ತದೆ. ಆದರೆ ಇದೆಲ್ಲವೂ ಒಂದು ದಿವ್ಯತೆಯಲ್ಲಿ ಮತ್ತು ಅತ್ಯಾವಶ್ಯಕವಾಗಿರುವ ಹಾಗೆ ಆಂತರಿಕ ಅನಿವಾರ್ಯತೆಯಲ್ಲಿ (ವಿವಶತೆಯಲ್ಲಿ), ಜಗತ್ತಿನಲ್ಲಿ ನಮ್ಮ ಸುತ್ತಲೂ ಆವರಿಸಿರುವ, ಸಮ್ಮ ಸಲುವಾಗಿಯೇ ಇರುವ ಅವುಗಳನ್ನು ಮತ್ತಷ್ಟು ಮತ್ತಷ್ಟು ಸಮೃದ್ಧಿಗೊಳಿಸುವ ಮೂಲಕ ಮತ್ತೆ ಅವುಗಳನ್ನು ಮರಳಿ ರೂಪಿಸುವ ಮೂಲಕ ಅವುಗಳನ್ನು ಉದಾತ್ತ ವ್ಯವಹರಣೆಗಳನ್ನಾಗಿ ಪರಿವರ್ತನಗೊಳಿಸುವ ಮೂಲಕ ನಮ್ಮ ಉಪಯೋಗಕ್ಕೆ ಬರುವಂತೆ ಮಾಡಿಕೊಳ್ಳಬೇಕಾಗಿದೆ. ಇವುಗಳಲ್ಲಿ ಎಲ್ಲ ಗುಣಗಳನ್ನು, ಶಕ್ತಿಗಳನ್ನು, ಸಂತೋಷಗಳನ್ನು, ದುಃಖಗಳನ್ನು, ಚಿಂತಗಳನ್ನು, ಜ್ಞಾನವನ್ನು, ಆಶಯಗಳನ್ನು, ಗುರಿಗಳನ್ನು ಸಹಿತ ಈ ವ್ಯವಸ್ಥೆಗೆ ತೆಗೆದುಕೊಳ್ಳ–ಬೇಕಾಗುತ್ತದೆ.

ಇಂತಹ ವ್ಯವಸ್ಥೆಯನ್ನು ಹೊಂದಿದ ಒಂದು ಸಾಮ್ರಾಜ್ಯವು ಎಂದಿಗೂ ಅಸಹ್ಯವಾದ ಆಡಂಬರವನ್ನು ಅಥವಾ ಸ್ವರ್ಣಾಚ್ಛಾಯದ ಕೃತಕ ಹೊದಿಕೆಯನ್ನು ಬಯಸುದಿಲ್ಲ. ಆ ದೇವತೆಗಳೆಲ್ಲರೂ ಬಹುತೇಕವಾಗಿ ಬೆಳಕಿನ ಗವಸಿನಲ್ಲಿಯೇ ಇರುವರು. ಇಲ್ಲವೇ ತೀವ್ರಾತಿತೀವ್ರವಾದ ಬೆಳಕಿನ ಪ್ರವಾಹದಿಂದ ಅಚ್ಛಾದಿತ–ರಾಗಿರುತ್ತಾರೆ. ಅವರೆಂದಿಗೂ ಮಾನವರ ಮಧ್ಯೆ ಜೀವಿಸಲು ಹಿಂಜರಿಯುವದಿಲ್ಲ. ಅದರಲ್ಲೂ ಗೊಲ್ಲರ ವೇಷದಲ್ಲಾಗಲೀ, ಕುರುಬನ ವೇಷದಲ್ಲಾಗಲಿ ಅಥವಾ ಕುಶಲ ಕರ್ಮಿಯ ಜೊತೆಗೆ ವಾಸಿಸಲು ಅಸಡ್ಡೆ ತೋರುವದಿಲ್ಲ. ಅವರೆಂದಿಗೂ ಶಿಲುಬೆಯಿಂದ ಮುದುಡುವದೂ ಇಲ್ಲ; ಮುಳ್ಳಿನ ಕಿರೀಟದಿಂದ ಕುಗ್ಗುವದೂ ಇಲ್ಲ. ಅದರಲ್ಲೂ ಆಂತರಿಕ ವಿಕಸನದಲ್ಲಿ ಮತ್ತು ಬಾಹ್ಯದ ಭಾಗ್ಯಗಳಲ್ಲಿ ಇಂತಹ ಯಾವದೇ ಆಂಶವನ್ನೂ ಕಡೆಗಣಿಸುವದಿಲ್ಲ.

ಈ ಮೂಲಕ ಈಗಾಗಲೇ ಅವರಿಗೆ ಮನೋಗತವಾಗಿರುವದೆಂದರೆ, ಆ ಅಹಂಕಾರವು ಸಂಪೂರ್ಣವಾಗಿ ಶಿಲುಬೆಗೇರಿಸಲ್ಪಡಬೇಕಾಗಿದೆ (ನಿರ್ನಾಮ–ಗೊಳಿಸಲ್ಪಟ್ಟು). ಅವರು ಹಾಗಿಲ್ಲದಿದ್ದರೆ, ಅಂದರೆ ಆ ದೇವ–ದೇವತೆಗಳು ಈ ತೆರನಾದ ಪಥವನ್ನು ತೋರದಿದ್ದರೆ, ಜನರು ಅದು ಹೇಗೆ ತಮ್ಮ ಸಮ್ಮತಿಯನ್ನು ರೂಪಿಸಿಕೊಳ್ಳುವದಕ್ಕೆ ಸಾಧ್ಯವಾಗುತ್ತದೆ?

ಈ ಎಲ್ಲವೂ ಮಾನವ ಜೀವಿಗೆ ಅವಶ್ಯವಾಗಿದ್ದು, ಅದು ಉನ್ನತಿಗೊಳಿಸುವದಕ್ಕೆ ಮತ್ತು ಅದರ ಬಹುಮುಖ್ಯವಾದ ಪರಿಪೂರ್ಣತೆಯತ್ತ ಒಯ್ಯುವ ಮೂಲಕ, ಅದು ಓರ್ವನ ಪ್ರಕಾಶದ, ಆನಂದದ, ಶಕ್ತಿಯ ತತ್ತ್ವವಾಗುವದು. ಇದೇ ದಿವ್ಯತೆಯಾಗಿರುತ್ತದೆ. ಇದೂ ಸಹಿತ, ಈ ಅತಿಮಾನವ ಹಂತದ ಸ್ರೋತವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/153**

*

**ದೇವಶೀರ್ಷನ ಪರಿಪೂರ್ಣ ಪಾತ್ರ**

ಇದೆಲ್ಲವೂ 'ನಿನ್ನದೇ' ಲೀಲೆ(ಕ್ರಿಯೆ)ಗಳಾಗಿವೆ ಮತ್ತು ಇದೆಲ್ಲವೂ ನಿನ್ನದೇ ಜೀವನದ ಗುರಿಯೂ ಆಗಿದೆ. ಇದಕ್ಕಾಗಿಯೇ ಆ ನಿನ್ನ ಕಲೆಗಳೆಲ್ಲವೂ ಇನ್ನೂ ಲೀಲೆಗೊಳಿಸಲ್ಪಟ್ಟಿವೆ. ಈ ಮೂಲಕವೇ ಆ ದಿವ್ಯ–ಅತಿಮಾನವನು ರೂಪಣೆಗೊಂಡು ದೇವನ ಪರಿಪೂರ್ಣ ಪಾತ್ರವಾಗಬೇಕಿದೆ. "ನೀನು" ಏನೆಲ್ಲವನ್ನು ರೂಪಣೆಗೊಳಿಸಬೇಕಾಗಿದೆಯೋ, ಅದೆಲ್ಲವೂ ನಿನ್ನನ್ನೇ ನೀನು ರೂಪಣೆಗೊಳಿಸಿಕೊಳ್ಳುವದರ ಸಲುವಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದೀಯಾ. ಅಥವಾ, ಅದರ ಮೂಲಕವೇ ಆಹ್ಲಾದಗೊಳ್ಳಲು ಅಥವಾ ಆ ಉದ್ದೇಶದಿಂದ ಪತನಗೊಳ್ಳಲು ನಿನಗೆ ನೀನೇ ರೂಪಿಸಿಕೊಂಡಿರುವ ಲೀಲೆಗಳು ಇವು.

ಆದರೆ ಇದೇ ಗಮ್ಯವೂ ಆಗಿದೆ; ಇದೇ ಉದ್ದೇಶವೂ ಆಗಿದೆಯೇ ವಿನಾ, ಇದು ಪಥದ ಶಕ್ತಿಯಲ್ಲಿ ಇರುವದಿಲ್ಲ. ಈ ಪಥದಲ್ಲಿಯೇ ಅವರು ಅದನ್ನು ಪಡೆಯುತ್ತಿದ್ದು, ಆದರೆ ಆ ಗಮ್ಯದ ಆನಂದದಲ್ಲಿಯೇ ಆ ಮಹತಿಯೂ ಇದೆ. ಹೀಗಾಗಿ ಆ **"ತೊಷ"**ವೂ ನಿನ್ನದೇ ಆಗಿದೆ. ಆ ತೋಷವೂ ಸಹಿತ ನಿನ್ನದೇ ಜೀವನದಿಂದ (ಅಸ್ತಿತ್ವದಿಂದ) ನಿರೂಪಣೆಗೊಂಡಿದೆ.

ಈ ಪಥದ ಆನಂದವು ಅಖಂಡವಾಗಿ ಇರುವದೇಕೆಂದರೆ, ಅದು ನಿನ್ನನ್ನೇ ರೂಪಿಸುತ್ತಿದೆ. ಅದೂ ನಿನ್ನ ಜೊತೆಗೇನೇ ನಿನ್ನದೇ ಪಥದಲ್ಲಿ ಇದ್ದು, ಜೊತೆಗೆ ಆರೋಹಣ ಮಾಡುವ ಶಕ್ತಿಯನ್ನು ನಿನಗೆ ನೀನು ಕೊಟ್ಟುಕೊಳ್ಳುವ ಮೂಲಕ ನಿನ್ನಿಂದಲೇ ನಿರ್ಮಾಣವಾಗಿರುವ ಆ ಮಹತ್ತರವಾದ ಬಲಶಾಲಿಯಾದ ಶಿಖರಗಳನ್ನು ಆರೋಹಣ ಮೂಲಕ ಅದೂ ನಿನ್ನದೇ ಆದ ಆ ಶಿಖರಾಗ್ರಗಳನ್ನು (ಸುಮೇರುಗಳನ್ನು) ತಲುಪುವ ಮೂಲಕ ಸ್ಪಂದಗೊಳ್ಳುತ್ತೀಯ.

ಒಂದು ವೇಳೆ ನೀನು ಕರ್ತವ್ಯಗಳನ್ನು ಬಯಸುತ್ತಿದ್ದಲ್ಲಿ, ಇದೇ ನಿನ್ನ ಕರ್ತವ್ಯಗಳೂ ಆಗಿವೆ. ಒಂದು ವೇಳೆ ನೀನು ನಿನ್ನ ಗಮ್ಯವು ಯಾವುದು ಎಂದು ತಿಳಿದುಕೊಳ್ಳಬಯಸಿದಲ್ಲಿ, ಇದೇ ನಿನ್ನ ಗಮ್ಯವೂ ಆಗಿದೆ. ಒಂದು ವೇಳೆ ನೀನು ಆನಂದವನ್ನು ಬಯಸುತ್ತಿದ್ದಲ್ಲಿ, ಈ ಆನಂದಕ್ಕಿಂತ ಮಹತ್ತಾದ ಆನಂದ ಯಾವುದೂ ಇಲ್ಲ. ಏಕೆಂದರೆ ಉಳಿದೆಲ್ಲ ಆನಂದವೂ ಸೀಮಿತವಾದ ಅಥವಾ ಅಪೂರ್ಣವಾಗಿರುವಂತೆ ತುಂಡರಿಸಲ್ಪಟ್ಟಿವೆ. ಇವೆಲ್ಲವೂ ಕನಸಿನಲ್ಲಿ ಅನುಭವಿಸಿದ ಆನಂದದಂತೆ; ನಿದ್ರೆಯ ಅವಧಿಯಲ್ಲಿ ಇರುವ ಆನಂದದಂತೆ ಅಥವಾ ಸ್ವಯಂ ತನ್ನನೇ ತಾನು ಮರೆತು ಬಿಡುವಂತಹ ಆನಂದವಾಗಿರುತ್ತದೆ.

ಆದರೆ ಆ ಆನಂದವು ನಿನ್ನದೇ ಸಂಪೂರ್ಣ ಅಸ್ತಿತ್ವವಾಗಿದೆ. ಅದಕ್ಕಾಗಿಯೇ ನೀನು "ಅದು ನನ್ನ ಆತ್ಮವಾಗಿದೆ" ಎಂದು ಹೇಳುವಂತೆಯೇ ಇದೆ. ಹೌದು, ಇದು ನಿನ್ನದೇ ಆತ್ಮವಾಗಿದೆ. ಆ ದಿವ್ಯತ್ವವಾಗಿದೆ. ಅದನ್ನು ಬಿಟ್ಟು ಉಳಿದುದೆಲ್ಲವೂ ಅಪೂರ್ಣವಾಗಿಯೇ ಇದುತ್ತದೆ ಇಲ್ಲವೇ ಅದರ ವಿಕೃತ ಉಪಸ್ಥಿತಿಯೇ ಆಗಿರುತ್ತದೆ.

ಒಂದು ವೇಳೆ ನೀನು ಋತವನ್ನು ಬಯಸುತ್ತಿದ್ದಲ್ಲಿ ಇದೇ ಆ ಋತವಾಗಿದೆ. ಅದನ್ನು ನಿನ್ನ ಸಮಕ್ಷಮದಲ್ಲಿ ಪ್ರತಿಷ್ಠಾಪಿಸು. ಜೊತೆಗೆ ಸರ್ವ ವಸ್ತು–ವಿಷಯಗಳೂ ಅಕ್ಕೆ ವಿಶ್ವಾಸಪೂರ್ವಕವಾಗಿ ಇರುವಂತೆಯೇ ರೂಪಿಸು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/150 – ಶ್ರೀ ಅರವಿಂದರು**

*

*ಈ ಪ್ರಾಣಿ ಪ್ರಪಂಚವು ಪ್ರಕೃತಿಯ ಪ್ರಯೋಗ ಶಾಲೆಯಾಗಿದ್ದು, ಇಲ್ಲಿಂದಲೇ ಮಾನವನನ್ನು ರೂಪಿಸಲಾಗುತ್ತದೆ; ಈ ಮಾನವನೇ ಪ್ರಾಯಶಃ ಅತ್ಯುತ್ತಮ ಪ್ರಯೋಗ ಶಾಲೆಯಾಗಿದ್ದು, ಅವಳು ಇಲ್ಲಿಂದಲೇ ಅತಿಮಾನವನನ್ನು ರೂಪಿಸಲು ಆಶಿಸುತ್ತಾಳೆ. ಈ ಆತ್ಮವು ಒಂದು ದಿವ್ಯಾತ್ಮವಾಗಿದೆ ಎನ್ನುವದನ್ನು ಪ್ರಕಾಶನಗೊಳಿಸುವಳು. ಜೊತೆಗೆ ಒಂದು ದಿವ್ಯ ಸ್ವಭಾವವನ್ನು ಸಹಿತ ವಿಕಸನಗೊಳಿಸಲು ಇಚ್ಛಿಸುತ್ತಾಳೆ.*

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/502 – ಶ್ರೀ ಅರವಿಂದರು**

*

# ಅತಿಮಾನವನ ಆವಿರ್ಭಾವ

– ಅನುವಾದ: ಪುಟ್ಟು ಕುಲಕರ್ಣಿ

## ಮಾನವನು ಅವಸ್ಥಾಪರಿರ್ತನೀಯ ಜೀವಿಯಾಗಿದ್ದಾನೆ

ಮಾನವನು ಸದಾ ಅವಸ್ಥಾ ಪರಿವರ್ತನದಲ್ಲಿರುವ ಜೀವಿಯಾಗಿದ್ದಾನೆ. ಏಕೆಂದರೆ, ಈಗಿರುವ ಹಂತ ಅಂತಿಮವಲ್ಲ; ಅವನಲ್ಲಿ ಅಂತರ್ಗತವಾಗಿರುವ ಅವನಿಗೇ ಮತ್ತು ಅವನಿಗಿಂತ ಊರ್ಧ್ವದಲ್ಲಿ ತದುತ್ತರದಲ್ಲಿ ಅವತರಣಗೊಳ್ಳಲಿರುವ ಆ ದೀಪ್ತಿಮಾನ ಹಂತಗಳು ಇದ್ದು, ಅವನು ಆ ದಿವ್ಯ ಅತಿಮಾನಸ ಹಂತಕ್ಕೆ ಆರೋಹಗೊಳ್ಳುವ ಸಲುವಾಗಿ ರೂಪಿಗೊಂಡಿದೆ.

ಮಾನವನ ಹಂತದಿಂದ ಅತಿಮಾನಸ ಹಂತಕ್ಕೆ ಸಾಗುವ ಹೆಜ್ಜೆಯೇ, ಈ ಭೂಮಿಯು ವಿಕಸನದ ಮೂಲಕ ತಲುಪಬಹುದಾದ ಸಾಧ್ಯತೆಯಾಗಿದೆ. ಅಲ್ಲಿಯೇ ನಮ್ಮ ಗಮ್ಯವೂ ಸಹಿತ ಸ್ಥಿತಗೊಂಡಿದೆ. ಜೊತೆಗೆ ನಮ್ಮ ಅಭೀಪ್ಸೆಯಾಗಿರುವ ಮುಕ್ತತ್ವವನ್ನು ಹೊಂದುವ ಸೂತ್ರವೂ ಆಗಿದೆ. ಆದರೆ ಇಲ್ಲಿ ಮಾನವರ ಸೀಮಿತ ಅಸ್ತಿತ್ವದಿಂದಾಗಿ ತೊಂದರೆಗೆ ಒಳಪಡುತ್ತದೆ. ಇದು ಅನಿವಾರ್ಯವೂ ಹೌದು. ಏಕೆಂದರೆ ಇದು ಅಂತರಾತ್ಮನ ಆತ್ಮ ತುಡಿತವೂ ಜೊತೆಗೆ ಪ್ರಕೃತಿ ಪ್ರಕ್ರಿಯೆಯ ತರ್ಕಬದ್ಧತೆಯೂ ಆಗಿರುತ್ತದೆ.

ಲೌಕಿಕ ಮತ್ತು ಪ್ರಾಣಿಗಳ ಪ್ರಪಂಚದಲ್ಲಿ ಮಾನವನ ಈ ಹಾಜರಾತಿಯ ಈ ಸಂಭವವು, ಆಗಮಿಸಲಿರುವ ದಿವ್ಯ–ಜ್ಯೋತಿಯ ಪ್ರಪ್ರಥಮ ಮಿಂಚಿನ ಕಣವಾಗಿತ್ತು. ಅದು ಪ್ರಪ್ರಥಮವಾಗಿ, ಪೂರ್ವಭಾವಿಯಾಗಿಯೇ ಜಡದಿಂದಲೇ ಜನಿಸಿ ಬಂದಿರುವ ಬಗೆಗೆ ಆ ದೇವಶೀರ್ಷನಿಂದ ಆಗಮಿಸಿದ ಸಂದೇಶವಾಗಿತ್ತು. ಈ ಮನುಕುಲದ ಮಧ್ಯದಲ್ಲಿಯೇ ಅತಿಮಾನವನ ಅವತಾರವನ್ನು ಈಡೇರಿಸುವದಕ್ಕೆ ಆ ದೂರದಿಂದ ಬಂದ ಶಾಂತಿಯುತ ಕಾಂತಿಮಯ ಭರವಸೆಯಾಗಿತ್ತು.

ಮಾನವ ಮತ್ತು ಅತಿಮಾನವನ ಮಧ್ಯದ ವ್ಯತ್ಯಾಸವೆಂದರೆ, ಮನಸ್ಸು ಮತ್ತು ಚೈತನ್ಯ. ಚಿಂತನಶೀಲ ಮನಸ್ಸಿಗಿಂತಲೂ ಸಂಪೂರ್ಣ ಬೇರೆಯದೇ ಆಗಿದ್ದು ಅದು ಸಸ್ಯ ಹಾಗೂ ಪ್ರಾಣಿಗಳ ಚೇತನಕ್ಕಿಂತಲೂ ಎನಿತೆನಿತೋ ದೂರದಲ್ಲಿರುವದಾಗಿದೆ. ಈ ರೀತಿಯಾಗಿ ವಿಭಾಗಿಸುತ್ತಿರುವಲ್ಲಿ, ಮಾನವನ ಮನಸ್ಸು ಅತೀ ಪ್ರಮುಖ ಅಂಶವಾಗಿದೆ. ಅದೇ ಸಮಯಕ್ಕೆ ಈ ರೀತಿಯಾದ ಅತಿಮಾನವನ ಪೃಥಃಕರಣಕ್ಕೆ ಅತಿಮಾನಸ ಅಥವಾ ಆ "ದಿವ್ಯ–ವಿಜ್ಞಾನ" (Divine gnosis)ದ ಸಾರವೂ ಅಗಿರುತ್ತದೆ.

ಮಾನವನು ಮನದ ಸೆರೆಯಲ್ಲಿ ಸಿಲುಕಿದ ಬಂದಿ. ಅಸ್ಪಷ್ಟತೆಯಲ್ಲಿ ಮತ್ತು ಅನಿಶ್ಚಿತತೆಯಿಂದ ಹಾಗೂ ಅಸಮಗ್ರವಾಗಿರುವ ಜೀವನ ಪದ್ಧತಿಯಿಂದಲೇ ಆವರಿಸಲ್ಪಟ್ಟಿದ್ದು, ಆದರೆ ಅಪೂರ್ಣ ಪ್ರಜ್ಞಾವಸ್ಥೆಯ ದೇಹದಲ್ಲಿ ವಾಸಿಸುತ್ತಾನೆ.

ಆದರೆ ಅತಿಮಾನವನು ಮಾತ್ರ ಅತಿಮಾನಸದ ಶಕ್ತಿಯನ್ನು ಹೊಂದಿದ್ದು, ಅದೇ ಅವನನ್ನು ಆವರಿಸಿರುತ್ತದೆ. ಇದರಿಂದಾಗಿ ಚೈತನ್ಯಪೂರ್ಣ ದೇಹವನ್ನು ಉಚಿತವಾಗಿಯೇ ಉಪಯೋಗಿಸಿಕೊಳ್ಳುತ್ತಾನೆ. ಇದು ಅಧ್ಯಾತ್ಮಿಕ ಬಲಗಳಿಗೆ ಸುನಮ್ಯವಾಗಿರುತ್ತದೆ. ಅವನ ಭೌತಿಕ ಸ್ವರೂಪವು ನಿಗಧಿಗೊಳಿಸಲ್ಪಟ್ಟ ಹಾಗೆಯೇ ಸಹಕಾರಿಯಾಗಿದ್ದು ಮತ್ತು ಸಮರ್ಥನೀಯ ಪ್ರಕಾಶಮಾನದ ಉಪಕರಣ–ವಾಗಿರುತ್ತದೆ. ಇದು ಆ ಆತ್ಮದ ದೈವೀ ಲೀಲೆಯ ಹಾಗೂ ಈ ಜಡದಲ್ಲಿ ಕಾರ್ಯಪ್ರವೃತ್ತವಾಗಿರುವದರ ಬಗೆಗೆ ಸಹಕಾರಿಯಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/157**

*

**ನಾವು ಆಶಿಸಿದ ಅಚಲ–ಆನಂದ**

ಆ ಪರಮನಿಂದ ನಾವು ಆಶಿಸುವ ಈ ಅಚಲ–ಆನಂದವು ಪರಮೋಚ್ಚ–ವಾಗಿದ್ದು, ಅದು ಆ ಊರ್ಧ್ವಾತಿಊರ್ಧ್ವದ ಎಡೆಯಿಂದ ಬಯಸುತ್ತಿರುವ ಘಟನೆಯಾಗಿದೆ. ಈ ಬದಲಾವಣೆಯನ್ನು ಅರ್ಥೈಸಿಕೊಳ್ಳುವದು ಅಷ್ಟು ಸುಲಭವಲ್ಲ. ಏಕೆಂದರೆ, ಅದು ಅತ್ಯಂತ ನಿಖರತೆಯಿಂದ ಕೂಡಿ ಅದರಲ್ಲಿರುವ ಗುಣ–ಸ್ವಭಾವವಾಗಿದೆ. ಇದು ಆ ಪರಮ–ಸತ್ಯದ ಅವರೋಹಣವಲ್ಲದೇ ಬೇರೆ ಏನೂ ಅಲ್ಲ. ಜೊತೆಗೆ ಈ ಜಡದಲ್ಲಿ ಶಕ್ತಿಯನ್ನು ತುಂಬುವ, ಜೊತೆಗೆ ಈ ಭೌತಿಕ–ವ್ಯವಸ್ಥೆಯ ಮೇಲೆ ಅತಿಮಾನಸ ಮತ್ತು ಚೈತನ್ಯವನ್ನು ಪ್ರತಿಷ್ಠಾಪಿಸುವ ಮೂಲಕ ಒಂದು ಸಮನ್ವಯದ ರೂಪಾಂತರವನ್ನು ಇಲ್ಲಿ ಅವತರಣಗೊಳಿಸುವದರ ಮೂಲಕ ಅದೇ ಈ ಜಡದ ಮೂಲತತ್ತ್ವವನ್ನು ರೂಪಿಸುವದಾಗಿದೆ. ಆ ಪರಮೋಚ್ಚ ಕೃಪೆಯು ಮಾತ್ರ ಈ ಪರಿಣಾಮವನ್ನು ಅಲೌಕಿಕದ ಸ್ವರೂಪದಲ್ಲಿ ರೂಪಿಸಬಹುದಾಗಿದೆ.

ಈ ಪರಮ ಶಕ್ತಿಯು ಬಹುತೇಕವಾಗಿ (ಲೌಕಿಕ) ಭೌತಿಕ–ಚೈತನ್ಯದಲ್ಲಿ ಅವತರಣಗೊಂಡಿದೆ. ಆದರೆ, ಆದರೆ ಅದು ತನ್ನ ಗಮ್ಯತೆಗೆ ಇರುವ ಭೌತಿಕದ ಪರದೆಯ ಹಿಂದೆಯೇ ನೆಲೆ ನಿಂತಿದ್ದು, ಅಭಿವ್ಯಕ್ತಿಗೊಳ್ಳುವ ಸಲುವಾಗಿ ವಿಶೇಷ ಆಕಾಂಕ್ಷೆಯನ್ನು ಹೊಂದಿರುತ್ತದೆ. ಅದು ಅಪೂರ್ವವಾಗಿ ತೆರೆದುಕೊಳ್ಳುವ

ಪೂರ್ವದಲ್ಲಿಯೇ ಕಾರ್ಯಶೀಲತೆಯು ಅಲ್ಲಿ ಪ್ರಾರಂಭಗೊಳ್ಳಲಿ ಎಂದು ಬಯಸುತ್ತಿರುತ್ತದೆ. ಜೊತೆಗೆ ಅಲ್ಲಿ, ಆ ಪರಮ ಕೃಪೆಯೂ ಸಹಿತ ಇರಬೇಕೆಂದು, ನೈಜವಾಗಿ ಹಾಗೂ ಪರಿಣಾಮಕಾರಿಯಾಗಿ ಅಭಿವ್ಯಕ್ತಿಗೊಳ್ಳಬೇಕೆಂದು ಆಶಿಸುತ್ತದೆ. ಇಲ್ಲಿರುವ ಪ್ರಥಮ ನಿಬಂಧನೆ ಎಂದರೆ ಈ ಸತ್ಯವನ್ನು (ಸಂತ್ಯದ ಛಂದಃ ಸ್ವರೂಪವು) ಮೊದಲು ನಿನ್ನಂತರಂಗವು ಸಂಪೂರ್ಣವಾಗಿ, ಯಾವುದೇ ಪೂರ್ವಗ್ರಹವಿಲ್ಲದೇ ಸ್ವೀಕರಿಸಿರಬೇಕು. ಇದು ಆ ಸಂತ್ಯವು ಭೌತಿಕ ಸ್ವರೂಪದಲ್ಲಿ ಮತ್ತು ಪ್ರಕೃತಿಯ ರೂಪದಲ್ಲಿ ಅಭಿವ್ಯಕ್ತಗೊಳ್ಳುವ ಮುನ್ನವೇ ಆಗಿರಬೇಕು.

ತನ್ನನ್ನು ತಾನೇ ಮುಕ್ತಗೊಳಿಸಿಕೊಳ್ಳುವ ಮೂಲಕ ಆ ದೈವೀ ಪ್ರಭಾವಕ್ಕೆ, ಸಂಪೂರ್ಣ ಶರಣಾಗತಿ ಹೊಂದುವದೆಂದರೆ, ನಿರಂತರವಾದ ಮತ್ತು ಸಮನ್ವಯದ ಆಯ್ಕೆ ಹಾಗೂ ಮಿಥ್ಯಾವಾದವನ್ನು ನಿರಾಕರಿಸುವದಾಗಿದೆ. ಇವು ಮಾತ್ರ ಇಲ್ಲಿ ರೂಪಿತವಾಗಿರುವ ನಿಬಂಧನೆಗಳಾಗಿವೆ. ಆದರೆ ಇವೆಲ್ಲವೂ ಸಂಪೂರ್ಣವಾಗಿಯೇ ಫಲಪ್ರದಗೊಳಿಸಲ್ಪಟ್ಟಿರಬೇಕು. ಇದಕ್ಕೆ ಯಾವುದೇ ಪೂರ್ವಗ್ರಹವಾಗಲೀ, ಯಾವುದೇ ರೀತಿಯ ನೆಪವನ್ನು ಒಡ್ಡಿ ತಪ್ಪಿಸಿಕೊಳ್ಳುವದಾಗಲೀ ಅಥವಾ ನಟನೆಯಾಗಲಿ ಇರದೇ, ಅತ್ಯಂತ ಸರಳವಾಗಿ ಮತ್ತು ಪ್ರಾಮಾಣಿಕವಾಗಿ ಈ ಭೌತಿಕ ಚೇತನಕ್ಕೆ ಮತ್ತು ಅದರ ಕಾರ್ಯ ಚಟುಟಿಕೆಗಳಿಗೆ ಒಪ್ಪಿಕೊಳ್ಳಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/372–73 – ಶ್ರೀ ಅರವಿಂದರು**

*

ಇಡೀ ಮಾನವ ಕುಲಕ್ಕೆ ದಾಸನಾಗಿ(ಶರಣಾಗಿ)ದ್ದೇನೆ ಎಂದರೆ ಇಡೀ ಮಾನವ ಕುಲಕ್ಕೇ ಕಾರ್ಯ ಮಾಡಲು ಸಿದ್ಧನಾದಂತೆ; ತನ್ನನು ತಾನೇ ಒಂದು ಕಾಮಧೇನುವಿನ ಹಾಗೆ ಧ್ಯಾನಿಸಿ, ತನ್ನೆಲ್ಲ ಬಲವನ್ನು, ಪ್ರಕಾಶವನ್ನು, ಆ ಶಕ್ತಿಯನ್ನು ಧಾರೆ–ಧಾರೆಯಾಗಿ ಎರೆದು ಕೊಡಲು ಸಿದ್ಧನಾಗಿರಬೇಕು. ಏಕೆಂದರೆ ಇದನ್ನು ಪಡೆಯುವದೇ ಮಾನವರ ಅವಶ್ಯಕತೆಯಾಗಿದೆ. ಇದನ್ನು ಪಡೆಯುವದರ ಮೂಲಕ ತಮ್ಮ ಅಜ್ಞಾನ ಮತ್ತು ಅಸಾಮರ್ಥ್ಯತೆಯಿಂದ ಹೊರಬರಲು ತವಕ ಹೊಂದಿದ್ದಾರೆ. ಒಂದು ವೇಳೆ ಈ ತೆರನಾದ ತುಡಿತ ಇಲ್ಲದಿದ್ದರೆ, ಆಗ ಈ ಅತಿಮಾನವ(ತ)ತ್ವವು ಈ ಭೂಮಿಗೆ ವರದಾನವಾಗುವದರ ಬದಲು ತೊಂದರೆಯನ್ನೇ ತಂದೀತು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/247 – ಶ್ರೀಮಾತೆ**

*

## ಪ್ರತ್ಯಕ್ಷಗೊಳುವ ನೂತನ ಜೀವ–ರಾಶಿಗಳು

ಈ ಭೂಮಿಯ ಮೇಲೆ ನೂತನ ತತ್ವವೊಂದನ್ನು ರೂಪಧಾರಣೆಗೊಳಿಸುವ ಸಲುವಾಗಿ ಅದನ್ನು ಘೋಷಿಸುವ ಮೂಲಕವೇ ಒಂದು ಹೊಸ ಜೀವ–ವರ್ಗ ಜನಿಸಿದೆ ಎನ್ನುವದನ್ನು ನಾವು ಈಗಾಗಲೇ ಕಂಡಿದ್ದೇವೆ. ಇದು ಚೈತನ್ಯದ ನೂತನ ವಲಯವಾಗಿದೆ. ಇದೇ ನೂತನ ಬಲ ಅಥವಾ ಶಕ್ತಿಯೂ ಆಗಿದೆ. ಆದರೆ, ಅದೇ ಸಮಯಕ್ಕೆ, ಈ ನವೀನ ಜೀವ ಸಂಕುಲವು ಇನ್ನೂ ರೂಪಾಂತರಗೊಳ್ಳುವ ಶಕ್ತಿ ಹಾಗೂ ಚೈತನ್ಯವನ್ನು ಪಡೆಯುವ ಹಂತದಲ್ಲಿ ಅದು ತನ್ನ ಒಂದು ಅಥವಾ ಕೆಲವು ಪರಿಪೂರ್ಣತೆಯನ್ನು ಕಳೆದುಕೊಳ್ಳುವ ಸಂಭವವೂ ಇರುತ್ತದೆ. ಇವು ಈ ಜೀವ–ಸಂಕುಲದ ಹಿಂದಿನ ಪೀಳಿಗೆಯು ಹೊಂದಿದ್ದ ಗುಣವಿಶೇಷಗಳೂ ಆಗಿರಬಹುದು. ಉದಾಹರಣೆಗೆ, ಪ್ರಕೃತಿಯ ವಿಕಸನದ ಕೊನೆಯ ಹಂತದ ಬಗೆಗೆ ಇರುವ ಮಾತಾಗಿದ್ದರೂ ಇರಬಹುದು – ಮಾನವನಿಗೂ ಹಾಗೂ ಅವನಿಗೆ ನಿಕಟಪೂರ್ವ ಪೂರ್ವಜನಾಗಿರುವ –ಏಪ್– ವಾನರನಿಗೂ ಅಂತಹ ಮಹತ್ತರವಾದ ವ್ಯತ್ಯಾಸಗಳೇನು?

ವಾನರನಲ್ಲಿ ಜೀವನಶಕ್ತಿ (ವೈಟಾಲಿಟಿ) ಮತ್ತು ದೈಹಿಕ ಶಕ್ತಿಯು ಪರಿಪೂರ್ಣತೆಯ ಹಂತದಲ್ಲಿ ಎಂದರೆ ಗರಿಷ್ಠ ಮಟ್ಟದಲ್ಲಿತ್ತು ಎನ್ನುವದನ್ನು ನಾವು ಕಂಡಿದ್ದೇವೆ. ಅದು ಯಾವ ಹಂತದ ಪರಿಪೂರ್ಣತೆ ಎಂದರೆ, ಈ ನವಜೀವ ಸಂಕುಲವು ಅದನ್ನು ಪರಿತ್ಯಜಿಸಲೇಬೇಕಿತ್ತು.

ಮಾನವನಲ್ಲಿ, ಆ ರೀತಿಯಲ್ಲಿ ಮನಾಕರ್ಷಕ ರೀತಿಯಲ್ಲಿ ಮರವನ್ನು ಏರುವ ಕ್ರಿಯೆ ಇರುವದಿಲ್ಲ. ಪಾತಾಳದೆಡೆಗೆ ಜಿಗಿದಾಟ ಮಾಡುವ, ಶಿಖರದಿಂದ ಶಿಖರಕ್ಕೆ ನೆಗೆದಾಡುವ ಯಾವುದೇ ಕ್ರಿಯೆಯೂ ಇರುವದಿಲ್ಲ. ಈ ರೀತಿಯ ದೈಹಿಕ ಕ್ರಿಯೆಗಳ ಬದಲಿಗೆ ಜಾಣ್ಮೆಯನ್ನೂ, ಕಾರಣತ್ವವನ್ನೂ (ತರ್ಕಬದ್ಧತೆಯಲ್ಲಿ ಅರಿತುಕೊಳ್ಳುವದನ್ನು), ಸಂಯೋಜನೆಗೊಳಿಸಿಕೊಳ್ಳುವದನ್ನೂ ಮತ್ತು ಸಂರಚನಾ ಕ್ರಮಗಳನ್ನೂ ಪಡೆದುಕೊಂಡಿದ್ದಾನೆ. ಹೀಗಾಗಿಯೇ ಮನಸ್ಸಿನ ಆಯಸ್ಸೂ ಕೂಡ ಮಾನವನೊಂದಿಗೇ ಇದೆ. ಅದೂ ಬುದ್ಧಿಮತ್ತೆಯು ಈ ಭೂಮಿಯ ಮೇಲೆ ಪ್ರತ್ಯಕ್ಷಗೊಂಡ ಹಂತವಾಗಿದೆ.

ಮಾನವನು ಮೂಲತಃ ಮನೋಜೀವಿಯಾಗಿದ್ದಾನೆ. ಮತ್ತೆ ಅವನ ಈ ಸಾಧ್ಯತೆಗಳು ಅಲ್ಲಿಯೇ ಸ್ಥಗಿತಗೊಳ್ಳಲೇಬಾರದು. ಅವನು ತನ್ನಲ್ಲಿಯೇ ಅನ್ಯ ಲೋಕಗಳ ಕುರಿತು ಅನುಭವವನ್ನು ಪಡೆಯುತ್ತಿದ್ದಲ್ಲಿ, ಅನ್ಯ ಕರ್ಮಕ್ಷಮತೆಗಳನ್ನೂ (ಫ್ಯಾಕಲ್ಟೀಜ್), ಅವನ ಮನೋಜೀವನದ ವಲಯದ ಆಚೆ ಆಚೆ ಊರ್ಧ್ವದಲ್ಲಿ ಇರುವ ಚೈತನ್ಯದ ವಲಯಗಳ ಬಗೆಗೆ, ಮತ್ತು ಇವೆಲ್ಲವೂ ಬರಲಿರುವ ಭವಿಷ್ಯಕ್ಕೆ ಭರವಸೆದಾಯಕ ಅಂಶಗಳಾಗಿಯೇ ಇರುವದರಿಂದ, ಈ ತೆರನಾದ ಮನೋ ಸಾಮರ್ಥ್ಯಗಳು ವಾನರನಲ್ಲಿ ಇನ್ನೂ ಅಪ್ರಕಾಶಿತವಾದ ಸ್ಥಿತಿಯಲ್ಲಿ ಇದ್ದವು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/162–63**

*

**ಅಪೇಕ್ಷಿತ ಸ್ಥಿತಿ**

ಅತಿಮಾನಸ ಚೈತನ್ಯಕ್ಕೆ ಈ ಮಾನವ–ಚೈತನ್ಯವೇ ಅಪೇಕ್ಷಿತ ಸ್ಥಿತಿಯಾಗಿದೆ. ಈ ಮೂಲಕವೇ ಆ ಅತಿಮಾನಸ ಚೈತನ್ಯವು ಈ ಮಾನವ ಚೇತನಕ್ಕೆ ಪ್ರವೇಶ ಪಡೆದು ಪ್ರಕಟಗೊಳ್ಳುತ್ತದೆ.

ಆದರೆ ಈ ತೆರನಾದ ಸಾಧ್ಯತೆಯ ಸಲುವಾಗಿ, ಅಂದರೆ, ಈ ಅತಿಮಾನಸ ಚೈತನ್ಯವು ಆಗಮಿಸುವ ಪೂರ್ವದಲ್ಲಿ ಒಂದು ನೂತನ ಮಾನವ–ಕುಲವೊಂದು ಬರುವ ಸಾಧ್ಯತೆಯಿದೆ. ಇದು ದೀರ್ಘಾವಧಿಯನ್ನು ಬಯಸಬಹುದು. ಹೌದು, ದೀರ್ಘಾತಿದೀರ್ಘವಾದ ಅವಧಿಯನ್ನೇ ತೆಗೆದುಕೊಳ್ಳಬಹುದು. ಆದರೆ ಇದು ಖಂಡಿಯವಾಗಿಯೂ ಉತ್ತರೋತ್ತರವಾಗಿಯೇ ಘಟಿಸುತ್ತದೆ. ಏನೇ ಆದರೂ ನಾನು ಹೇಳುತ್ತಿರುವದೇನೆಂದರೆ, ಇದು ಒಂದು ಮುಖ್ಯ ವಿಷಯವಾಗಿದ್ದು, ಇದು ಯಾವಾಗ ಘಟಿಸಬೇಕೆಂದು ನಿರ್ಧರಿಸಿಕೊಂಡಿದೆಯೋ ಆಗ ಖಂಡಿತವಾಗಿಯೂ ಘಟಿಸುತ್ತದೆ. ಆದರೆ ಇದು ರಬ್ಬರಿನಂತೆ ಎಳೆದೆಳೆದು ಹಿಗ್ಗಿಸಲು ಬರುವದಿಲ್ಲ. ಅದು ಆ ರೀತಿಯಲ್ಲಿ ಘಟಿಸುವದೂ ಅಲ್ಲ. ಅದು ಘಟಿಸಲೇಬೇಕಾದ ಸಮಯವು ಬಂದಿದೆ. ಯಾವಾಗ ಆ ಅವತರಣವು ಸಂಭವಿಸುವದೋ, ಯಾವಾಗ ಆ ಸಂಲಯನವು (ಫ್ಯೂಜನ್) ಘಟಿಸುವದೋ, ಆಗ ಅದರ ಅಭಿವ್ಯಕ್ತಿಯನ್ನು ಗುರುತಿಸಲು ಅದರದೇ ಆದ ಅಸ್ಮಿತೆಯು ಆಗಮಿಸುತ್ತದೆ. ಕೇವಲ ಒಂದೇ

ಒಂದು ಮಿನುಗುವಿಕೆಯ ಪ್ರಕಾಶದ ಸೂಸುವಿಕೆಯಲ್ಲಿ ಇದು ಬರುತ್ತದೆ. ಇದು ಘಟಿಸಲಿರುವ ಆ ಘಳಿಗೆಯೂ ಈಗಾಗಲೇ ನಿರ್ಧರಿತವಾಗಿದೆ. ತದನಂತರದಲ್ಲಿ ಅದು ದೀರ್ಘವಾಗಿ, ಸುದೀರ್ಘವಾಗಿ, ದೀರ್ಘಾತಿದೀರ್ಘವಾಗಿ ಮುಂದು–ವರೆಯುತ್ತದೆ. ಯಾರೇ ಆಗಲಿ ಬೆಳಗಾಗುವದರ ಒಳಗೇನೇ ಆ ಅತಿಮಾನವನ ಅವತರಣವಾಗುವದು ಎಂದು ಆಶೆ ಪಡುವಂತಿಲ್ಲ. ಏಕೆಂದರೆ ಅದು ಆ ರೀತಿಯಲ್ಲಿ ಘಟಿಸಲು ಸಾಧ್ಯವೂ ಇಲ್ಲ.

ನಾನು ಹೇಳಿರುವಂತೆಯೇ ಯಾರು ನಡೆಯುತ್ತಾರೋ, ಯಾರು ತಮ್ಮನ್ನು ತಾವೇ ಸಂಪೂರ್ಣವಾಗಿ ತ್ಯಾಗಗೊಳಿಸಿಕೊಳ್ಳುವಲ್ಲಿ ಸಫಲರಾಗಿದ್ದಾರೋ, ಆತ್ಮಬಲ ಹೊಂದಿದ್ದಾರೋ, ಸರ್ವ ಅಡೆ–ತಡೆಗಳನ್ನೂ ಎದುರಿಸುವ ಸಾಮರ್ಥ್ಯ ಹೊಂದಿದ್ದಾರೆಯೋ ಅವರಿಗೆ ಮಾತ್ರವೇ ಇದು ಅರಿವಿಗೆ ಬರುತ್ತದೆ. ಇದನ್ನು ಅರಿತುಕೊಳ್ಳಬೇಕಾದ ಕೆಲವೇ ಕೆಲವರಲ್ಲಿ ಮಾತ್ರ ಇವರಾಗಿರುವರು; ಅದು ಯಾವಾಗ ಘಟಿಸುತ್ತದೆಯೋ ಆಗ ಅವರು ಅದನ್ನು ದರ್ಶಿಸಬಲ್ಲರು, ಅರಿತುಕೊಳ್ಳಬಲ್ಲರು.

**ಪ್ರಶ್ನೆ:** *ಅಂದರೆ ಇನ್ನುಳಿದವರು ಅದನ್ನು ಅರಿತುಕೊಳ್ಳಲು ಅಸಮರ್ಥರು ಎಂದಾಯಿತೇ?*

– ಏನು ಬೇರೆಯವರೇ? ಯಾರಿಗೆ ಇಷ್ಟೆಲ್ಲಾ ಘಟಿಸಿದರೂ ಅರಿವಿಗೆ ಬರುವದಿಲ್ಲವೋ ಅವರಿಗೆ ಮಾತ್ರ! ಅವರು ಆಗಲೂ ತಮ್ಮ ಹಳೆಯ ಮೂರ್ಖ–ಜೀವನ ವಿಧಾನವನ್ನೇ ಮುಂದುವರೆಸಿರುತ್ತಾರೆ. ಅಲ್ಲಿ ಏನು ಘಟಿಸಿದೆ ಎನ್ನುವದನ್ನೂ ಸಹಿತ ಅವರು ತಿಳಿದುಕೊಳ್ಳಲು ಯತ್ನಿಸುವದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/328–29 – ಶ್ರೀಮಾತೆ**

*

ಅತಿಮಾನವನಾಗುವದೆಂದರೆ ದಿವ್ಯ–ಜೀವನದಲ್ಲಿ ಬದುಕುವುದು; ದೇವ–ಸ್ವರೂಪವಾಗಿರುವದು; ದೇವಗಣಗಳಿಗೂ ಸಹಿತ ಶಕ್ತಿಗಳನ್ನು ಒದಗಿಸುವ ದೇವರಾಗಿರುವದು. ಮಾನವೀತೆಯೂ ಆ ದೇವ ಶಕ್ತಿಯನ್ನ ಹೊಂದಿರುವ ಹಂತವಾಗಿದೆ.

ದಿವ್ಯ–ಜೀವಿಯಾಗಿಯೇ ಬದುಕುವ ಮತ್ತೆ ಆ ಚೈತನ್ಯ ಹಾಗೂ ತೋಷವನ್ನು ಹೊಂದುವ, ಆ ಆತ್ಮವು ಹೊಂದಿರುವ ಅಭೀಪ್ಸೆ ಮತ್ತು ಜ್ಞಾನವನ್ನು ಹೊಂದಿ, ಅದರೊಡನೆಯೇ ಲೀಲೆಗಳಲ್ಲಿ – ಅದರ ಮೂಲಕವೇ – ತೊಡಗಿಕೊಳ್ಳುವದೇ ಇದರ ಆಂತರ್ಯವಾಗಿದೆ.

ಇದು ತನ್ನಲ್ಲಿ ತಾನೇ ರೂಪಾಂತರಣ ಅಥವಾ ಆಕಾರ ಪರಿವರ್ತನವಗೊಳ್ಳುವ ಹಂತವಾಗಿದೆ. ಇದು ತನ್ನಲ್ಲಿಯೇ ದೇವರನ್ನೂ ಕಾಣುವ ಹಾಗೂ ಎಲ್ಲೆಡೆಗೂ ದೇವರನ್ನು ಕಾಣುವದಾಗಿದೆ. ಅವನ ಜೀವದೊಡನೆ ಬದುಕುವ, ಅವನ ಪ್ರಕಾಶದಲ್ಲಿಯೇ ಬೆಳಗುವ, ಅವನ ಶಕ್ತಿಯಿಂದಲೇ ಕರ್ಮಗಳನ್ನು ನಡೆಸುವ, ಅವನ ತೋಷದಲ್ಲಿಯೇ ಪ್ರಸನ್ನ(ರೀಜೊಯ್ಸ್)ಗೊಳ್ಳುವದಾಗಿದೆ. ಅದೇ ರೀತಿಯ ಅಗ್ನಿಯಂತಾಗಿ, ಆ ಸೂರ್ಯನಂತಾಗಿ ಮತ್ತು ಆ ಆರ್ಣವದಂತಾಗಿ(ಅವಕಾಶದಲ್ಲಿರುವ ಮಹಾಸಾಗರಗಳು)ರುವದಾಗಿದೆ. ಅದೇ ತೆರನಾದ ಆನಂದ, ಮಹತ್ತು ಮತ್ತು ಅದೇ ತೆರನಾದ ಸೌಂದರ್ಯದಂತೆ ಇರುವದಾಗಿದೆ.

ಯಾವಾಗ ನೀನು ಇದನ್ನು ಕೆಲ ಅಂಶದಲ್ಲಾದರೂ ಕೈಗೊಳ್ಳಲು ಸಾಧ್ಯವಾದಲ್ಲಿ, ಆಗ ನೀನೇ ಆ ಅತಿಮಾನವ ಹಂತಕ್ಕೆ ಪ್ರಪ್ರಥಮ ಹೆಜ್ಜೆಯನ್ನು ಇಟ್ಟಂತಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/152 – ಶ್ರೀ ಅರವಿಂದರು**

*



ಹಲವರೀಗಿಲ್ಲಿ ಆ ಮಹಿಮೆ–ಪಾತ್ರಗಳ ರೂಪ ಧರಿಸಿ ಬಂದು
ಶಾಶ್ವತದ ತೇಜ–ಕಾಂತಿ–ಶಕ್ತಿಯಾ ವಾಹಕದ ಶ್ರೇಣಿ ಇಂದು,
ಆದಿಯೊಲು ಬಂದ ಮುಂಚೂಣಿ ಮೇಳ, ಕಾಲದಧಿಪತಿಗಳಾಗಿ
ಭೂ–ಬಂಧ–ಛಂದ ಮನವನ್ನು ದತ್ತಗೊಳಿಸಲೆನೆ ಭವ್ಯವಾಗಿ

ಅತಿಶ್ರೇಷ್ಠ ರೂಪಧಾರಣೆಗೆ ಮನುಜ–ಮೃತ್ತಿಕೆಯ ಬಂಧದಂಶ,
ಅತಿಮಾನವತ್ವ ಖಚಿತದಲಿ ಹೊಂದಿ ಉದಿತವಿಹ ಪ್ರಥಮ ವಂಶ.
ಪುನರಾವತಾರದಲಿ ಯುಗಲ–ಶಕ್ತಿ ಆ ದೇವದ್ವಾರ ತೆರೆದು
ಶಾಶ್ವತದ ಸ್ಪಂದವೀಗಿಲ್ಲಿ ಬುವಿಯ ಕಾಲವನು ಸ್ಪರ್ಶ ಪಡೆದು.

ಮರ್ತ್ಯಮಾನವನಂತರಂಗದಲಿ ಅತಿಮಾನವನುದಿತವೀಗ
ಸುಪ್ತವಾಗಿರುವ ಉಪದೇವನನ್ನು ಸುಸ್ಪಷ್ಟಗೊಳಿಸಿ ಈಗ,
ಆ ದೇವ–ಜ್ಯೋತಿ ಜೊತೆ ದೈವ–ಶಕ್ತಿಯಲಿ ಸತತ ವೃದ್ಧಿಗೊಂಡು
ಆ ಗುಹ್ಯದಲ್ಲಿ ಸ್ಥಿತವಿದ್ದ ಗೂಢ ದೇವತೆಯು ಪ್ರಕಟವಿಂದು.

**Savitri, p. (ಸಾವಿತ್ರಿ ಪುಟ) 705** **– ಶ್ರೀ ಅರವಿಂದರು**

*

# ನವ ಜನಾಂಗ

– ಅನುವಾದ: ಡಾ॥ ಬಿ.ಆರ್. ಭೀಡ

## ಅತಿಮಾನವ ಯಾರು

ಅತಿಮಾನವ ಯಾರು? ವಿಚ್ಛಿನ್ನ ಮನೋಮಯ ಮಾನವ ಸಮುದಾಯದ ಭೌತಿಕ ಜಗತ್ತಿನಿಂದ ಮೇಲಕ್ಕೇರಿ, ವಿಶ್ವಾತ್ಮಿಕವಾಗಿ ಬೆಳೆದು ದೈವೀಶಕ್ತಿ, ಪ್ರೇಮ, ಆನಂದ, ಹಾಗೂ ಜ್ಞಾನಗಳಿಂದ "ಆರಾಧ್ಯ"ನಾಗಿ ನಿಲ್ಲಬಲ್ಲವನೇ ಅತಿಮಾನವ. ಸಂಕುಚಿತವಾದ "ಅಹಂ" ಅನ್ನು ಇಟ್ಟುಕೊಂಡು ಅತಿಮಾನವನಾಗಿರುವುದಾಗಿ ಭಾವಿಸುವಿಯಾದರೆ ಅದು ನಿನ್ನ ಮೂರ್ಖತನ, ನಿನ್ನದೇ ಆದ ಶಕ್ತಿಗಳ ಕೈಗೊಂಬೆಯಾದಂತೆ, ನಿನ್ನದೇ ಆದ ಭ್ರಮೆಗಳ ದಾಸನಾದಂತೆ. ಜರ್ಮನ್ ದಾರ್ಶನಿಕ ನೀತ್ಸೆಯ(Nietzsche) ಪ್ರಕಾರ, ಅತಿಮಾನವನೆಂದರೆ ಒಂಟೆಯ ಸ್ಥಿತಿಯಿಂದ ಮೇಲೇರಿ ಸಿಂಹದ ಆತ್ಮದಂತಾಗಿರುವವನು. ಆದರೆ ಅತಿಮಾನವನ ನಿಜವಾದ ಲಕ್ಷಣವೇನೆಂದರೆ ಸುರಧೇನು ಸುರಭಿಯ ಮೇಲೆ ನಿಂತಿರುವ ಒಂಟೆಯ ಸವಾರಿ ಮಾಡುತ್ತಿರುವ ಸಿಂಹದಂತೆ, ಅದೇ ಅವನ ಲಕ್ಷಣ. ಇಡೀ ಮನುಕುಲಕ್ಕೆ ಆಳಾಗಿ ದುಡಿಯಲು ನಿನ್ನಿಂದ ಸಾಧ್ಯವಾಗದೇ ಹೋದರೆ ನೀನದರ ಯಜಮಾನನೂ ಆಗಲಾರಿ. ಸಕಲ ಮನುಕುಲವೇ ವಶಿಷ್ಠನ ಸುರಧೇನು ಸುರಭಿಯ ಕೆಚ್ಚಲಿಂದ ಸಕಲ ಇಷ್ಟಾರ್ಥ ಸಿದ್ಧಿಸಿಕೊಳ್ಳುತ್ತದಲ್ಲಾ, ಹಾಗೆ ನೀನು ನಿನ್ನ ಸ್ವಭಾವವನ್ನು ಅದರಂತೆ ಬದಲಾಯಿಸಿಕೊಳ್ಳಲಾಗದಿದ್ದರೆ ನಿನ್ನ ಅತಿಮಾನವತೆ–ಯಿಂದ ಪ್ರಯೋಜನವೇನು?

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/439–40 – ಶ್ರೀ ಅರವಿಂದರು**

*

## ಅತಿಮಾನವನ ಹುಟ್ಟು

ನಾವು ಇದುವರೆಗೆ ನೋಡಿರುವ ಅಥವಾ ಕೇಳಿಬಲ್ಲ ಶ್ರೇಷ್ಠ ವ್ಯಕ್ತಿಯಂಥ ಅಥವಾ ಅವನಿಗಿಂತ ಶ್ರೇಷ್ಠನಾದ, ಪ್ರಗತಿ ಹೊಂದಿದ ಹಾಗೂ ಪ್ರತಿಭಾವಂತನಾದ ಮಾನವನನ್ನು ಸೃಷ್ಟಿಸುವುದರಿಂದ ಏನೂ ಆಗದು, ಅದು ಸಾಕಾಗದು. ಎಲ್ಲ ಮಾನವೀಯ ಅಂಶಗಳನ್ನು, ಪ್ರಮಾಣಗಳನ್ನು ಮೀರಿದ ಅತಿ ಶ್ರೇಷ್ಠ ವ್ಯಕ್ತಿಯನ್ನು

ನಮ್ಮ ಆಲೋಚನೆ, ಸಂಕಲ್ಪಗಳ ಮೂಲಕ ಕಲ್ಪಿಸಿಕೊಂಡು ಅಂಥವನ ಜೊತೆ ಸದಾ ಸಂಪರ್ಕದಲ್ಲಿರುವುದಾದರೆ, ಅತಿಮಾನವನ ಹುಟ್ಟಿಗೆ ಅದು ಕಾರಣ–ವಾಗಬಹುದು. ಪ್ರಕೃತಿಯು ತನ್ನ ಸೃಷ್ಟಿಯಲ್ಲಿ ತೀರ ವಿನೂತನವಾದುದನ್ನು, ಅನೀರಿಕ್ಷಿತವಾದುದನ್ನು ಪ್ರಕಟಿಸಲು ಬಯಸುತ್ತಿದೆ. ಪ್ರಕೃತಿಯ ಈ ಬಯಕೆಗೆ ನಾವು ಸ್ಪಂದಿಸಬೇಕಾಗಿದೆ, ಅದಕ್ಕೆ ವಿಧೇಯರಾಗಿರಬೇಕಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/160–61**

*

**ವಿಕಾಸದಲ್ಲಿನ ಮುಂದಿನ ತಿರುವು: ತರ್ಕದಿಂದ ಅಂತರ್ಬೋಧೆ**

ಸದ್ಯಕ್ಕೆ ಮಾನವನ ಜೀವನವನ್ನು ತರ್ಕ ಆಳುತ್ತಿದೆ. ಮನಸ್ಸಿನ ಎಲ್ಲ ಚಟುವಟಿಕೆಗಳು – ಜ್ಞಾನದ ಉಪಕರಣಗಳು, ಗಮನಿಸುವಿಕೆ, ತಾರ್ಕಿಕ ವಿಶ್ಲೇಷಣೆ ಎಲ್ಲವೂ ಸಾಮಾನ್ಯವಾಗಿಬಿಟ್ಟಿವೆ. ತರ್ಕದ ಮೂಲಕವೇ ಮಾನವ ಕೊನೆಯ ನಿರ್ಣಯ ತೆಗೆದುಕೊಳ್ಳುತ್ತಾನೆ. ದಾರಿಯನ್ನು ಆಯ್ದುಕೊಳ್ಳುತ್ತಾನೆ ಅಥವಾ ಹಾಗೆ ಮಾಡುತ್ತೇನೆಂದು ಅವನು ಭಾವಿಸುತ್ತಾನೆ.

ಆದರೆ, ಮುಂದೆ ಬರಲಿರುವ ಜನಾಂಗದಲ್ಲಿ ಅಂತರ್ಬೋಧೆಯೇ ಪ್ರಧಾನವಾಗಿರಲಿದೆ, ಅದೇ ಬದುಕನ್ನು ನಿಯಂತ್ರಿಸಲಿದೆ. ಅಂದರೆ ಅಂತರಂಗದಲ್ಲಿರುವ ದೈವೀ ನಿಯಮವನ್ನು ನೇರವಾಗಿ ತಿಳಿದುಕೊಂಡು ಅದರಂತೆ ನಡೆಯುವುದಾಗಿದೆ. ಸಾಮಾನ್ಯ ಜನರಿಗೂ ಸಹ ಅಂತಃಸ್ಫೂರ್ತಿ ಅಂದರೇನೆಂಬುದು ಗೊತ್ತಿದೆ, ಅದರ ಅನುಭವ ಇದೆ, ದೊಡ್ಡ ದೊಡ್ಡ ಗೋರಿಲ್ಲಾಗಳು ಕೂಡ ಆಗೀಗ ತರ್ಕವನ್ನುಪಯೋಗಿಸಿ ತೋರಿಸುವಂತೆ, ಮಾನವನಿಗೆ ಕೂಡ ಅಂತಃಸ್ಫೂರ್ತಿಯ ಬಗ್ಗೆ ಚೆನ್ನಾಗಿ ಅರಿವಿದೆ. ಮಾನವರಲ್ಲಿ ಕೂಡ ಯಾರು ತಮ್ಮ ಅಂತಃಸತ್ತೆಯಲ್ಲಿ ಕೃಷಿ ಮಾಡಿದ್ದಾರೋ, ತಮ್ಮ ನಿಜವಾದ ಸತ್ತೆಯ ನಿಯಮವನ್ನು ತಿಳಿದುಕೊಳ್ಳಲು ತಮ್ಮೆಲ್ಲ ಶಕ್ತಿಯನ್ನು ಕೇಂದ್ರೀಕರಿಸಿದ್ದಾರೋ ಅಂಥವರಿಗೆ ಅಂತಃಸ್ಫೂರ್ತಿ ಈಗಲೂ ಸಿದ್ಧಿಸಿದೆ/ಸಿದ್ಧಿಸುತ್ತಿದೆ. ಮನಸ್ಸು ಪೂರ್ಣತಃ ಶಾಂತವಾಗಿರುವಾಗ, ಪಾಲಿಶ್ ಮಾಡಿದ (ಶುಭ್ರಗೊಳಿಸಿರುವ) ಕನ್ನಡಿಯಂತೆ ಪರಿಶುದ್ಧವಾಗಿರುವಾಗ, ಗಾಳಿ ಇಲ್ಲದಿರುವ ಸಮಯದಲ್ಲಿ

ಸರೋವರದ ನೀರಿನಲ್ಲಿ ಮೇಲಿನಿಂದ ನಕ್ಷತ್ರದ ಬೆಳಕು ಪ್ರತಿಫಲಿಸಿ ತೋರುವಂತೆ, ಮನಸ್ಸು ನಿಶ್ಚಲವಾಗಿರುವಾಗ ಅತಿಮಾನಸದ ಬೆಳಕು, ಅಂತರಂಗದಲ್ಲಿರುವ ಸತ್ಯವು ಅದರಲ್ಲಿ ಹೊಳೆದು ತೋರುವುದು ಹಾಗೂ ಅಂತಃಸ್ಫೂರ್ತಿಗೆ ಎಡೆಮಾಡಿಕೊಡುವುದು. ಈ ದಿವ್ಯ ಮೌನದೊಳಗಿಂದ ಬರುವ ಧ್ವನಿಗೆ ಯಾರು ಕಿವಿಗೊಡಲು ಶಕ್ತರಿದ್ದಾರೋ ಅಂಥವರು ತಮ್ಮ ಎಲ್ಲ ಕಾರ್ಯಗಳಿಗೆ, ಅದನ್ನೇ ಮೂಲ ಪ್ರೇರಣಾಶಕ್ತಿಯಾಗಿ ಸ್ವೀಕರಿಸುತ್ತಾರೆ. ಸಾಮಾನ್ಯ ಜನರು ತರ್ಕ–ಯುಕ್ತಿಗಳ ಸಂಕೀರ್ಣ ಪಥದಲ್ಲಿ ಪರದಾಡುತ್ತಿರುವಾಗ, ಅಂಥ ಜನರು ನೇರವಾದ ದಾರಿ ಹಿಡಿದು ಹೋಗಿಬಿಡುತ್ತಾರೆ, ಅವರಿಗೆ ಅಂತಃಸ್ಫೂರ್ತಿಯೇ ಮಾರ್ಗದರ್ಶಕ–ವಾಗಿರುತ್ತದೆ, ಅದು ಉಚ್ಚತರವಾದ ಸಹಜ ಪ್ರವೃತ್ತಿಯಾಗಿರುವುದರಿಂದ ಅದು ಪ್ರಬಲವಾಗಿರುತ್ತದೆ ಹಾಗೂ ಅಜೇಯವಾಗಿರುತ್ತದೆ. ಈ ಶಕ್ತಿಯು ಅಪರೂಪದ್ದು ಹಾಗೂ ಸದ್ಯದಲ್ಲಿ ಅಸಾಮಾನ್ಯವಾದುದೆಂದು ತೋರಿದರೂ ಸಹ, ಮುಂದೆ ಅದುವೇ ಸಾಮಾನ್ಯವಾಗಿ ಬಿಡುವುದು. ಬರಲಿರುವ ಹೊಸ ಜನಾಂಗಕ್ಕೆ ಅದೇ ಸಹಜವಾಗಿ ಬಿಡುವುದು. ಆದರೆ ಈ ಶಕ್ತಿಯನ್ನೇ ನಿರಂತರವಾಗಿ ಬಳಸುತ್ತ ಹೋಗುವುದರಿಂದ ಅದು ತರ್ಕ ಶಕ್ತಿಯ ಹ್ರಾಸಕ್ಕೆ ಕಾರಣವಾಗಲೂಬಹುದು.

ಈಗ ಮಂಗಗಳಿಗಿರುವಂಥ ಅಸಾಮಾನ್ಯ ದೈಹಿಕ ಶಕ್ತಿ ಮಾನವನಲ್ಲಿ ಇಲ್ಲ, ಅವನದನ್ನು ಕಳೆದುಕೊಂಡಿದ್ದಾನೆ. ಹಾಗೆ, ಅತಿಮಾನವನಾದರೂ ಕೂಡ ಮಾನವನಲ್ಲಿರುವ ತೀಕ್ಷ್ಣ ಮಾನಸಿಕ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಾನೆ, ಅಂದರೆ ತನ್ನನ್ನು ಹಾಗೂ ಇತರನ್ನು ವಂಚಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಾನೆ. ಮಾನವನು ತಾನಿದುವರೆಗೆ ಬೆಳೆಸಿಕೊಂಡಿರುವ, ತಾನು ಅತಿಯಾಗಿ ಅಭಿಮಾನಿಸುವ ಹಾಗೂ ವೃಥಾ ಗರ್ವಪಡುವ ಬುದ್ಧಿಯನ್ನು, ಅದಾವುದೂ ಇನ್ನು ಮೇಲೆ ನಿಷ್ಪ್ರಯೋಜಕವೆಂದು ಬಿಡಲು ಸಿದ್ಧನಾದಾಗ, ಮಾನವನಿಗೆ ಅತಿಮಾನಸದ ದಾರಿ ತೆರೆದುಕೊಳ್ಳುವುದು ಅಲ್ಲಿಂದಾಚೆಗೆ ತನ್ನಲ್ಲಿರುವ ಹೊಸದಾದ, ಮಹತ್ತಾದ ಶಕ್ತಿಯನ್ನು ಶೋಧಿಸಿ ಪ್ರಕಟಿಸುವುದೇ ಅವನ ಏಕೈಕ ಕಾರ್ಯವಾಗುವುದು. ಆಗ ಅವನ ತತ್ವಜ್ಞಾನ, ಕಲೆ, ವಿಜ್ಞಾನ, ನೈತಿಕತೆ, ಸಾಮಾಜಿಕ ಬದ್ಧತೆ, ಪ್ರಾಣಿಕ ಹಂಬಲ ಇವಾವೂ ಕೇವಲ ಮಾನಸಿಕ ಪ್ರಯತ್ನಗಳಾಗಿ ಉಳಿಯುವುದಿಲ್ಲ, ಬದಲಾಗಿ ಮನಸ್ಸು ಮತ್ತು ಪ್ರಾಣಗಳ ಹಿಂದಿರುವ ಹಿರಿದಾದ ಸತ್ಯವನ್ನು ಶೋಧಿಸುವ ಹಾಗೂ ಅದರ ಶಕ್ತಿಯನ್ನು

ಮಾನವನ ಬದುಕಿನಲ್ಲಿಳಿಸಿ ತರುವ ಸಾಧನವಾಗಿಬಿಡುವುದು. ಮತ್ತು ಈ ಶೋಧನೆಯೇ ನಮ್ಮ ನಿಜವಾದ, ಹಿರಿದಾದ ಸತ್ತೆ ಹಾಗೂ ಪ್ರಕೃತಿಯ ಪ್ರಕಟಣೆಯಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/163–64**

*

**ಭವಿಷ್ಯಕ್ಕೆ ಸಹಾಯಮಾಡಬಲ್ಲ ವ್ಯಕ್ತಿಗಳು**

ಆದ್ದರಿಂದ, ಯಾರು ಆಧ್ಯಾತ್ಮಿಕ ವಿಕಾಸವೇ ನಮ್ಮ ಭವಿಷ್ಯ, ಹಾಗೂ ಅದುವೇ ಸದ್ಯದ ಮಾನವನ ಅತ್ಯಂತಿಕ ಅವಶ್ಯಕತೆಯಾಗಿದೆ ಎಂಬುದನ್ನು ಗುರುತಿಸಿದ್ದಾರೋ, ಸಾಮಾನ್ಯ ಪ್ರಾಣಿಯಾಗಿದ್ದ ಮಾನವನು ಹೇಗೆ ವಿಶೇಷ ಮನೋಮಯ ಮಾನವನಾಗಿ ರೂಪಗೊಂಡಿದ್ದಾನೋ, ಹಾಗೆ ಸದ್ಯದ ಮಾನವನು ಪೂರ್ಣತಃ ವಿಕಾಸ ಹೊಂದಿ ಅಥವಾ ರೂಪಾಂತರ ಹೊಂದಿ ಆಧ್ಯಾತ್ಮಿಕ ಮಾನವನಾಗಿ ಪರಿವರ್ತನೆ ಹೊಂದುವುದು ಖಚಿತವೆಂದು ಯಾರು ನಂಬಿದ್ದಾರೋ, ಅಂಥವರು ಮಾತ್ರ ಹೊಸ ಯುಗದ ಮಾನವ ಜನಾಂಗದ ಭವಿಷ್ಯಕ್ಕೆ ಸಹಾಯ ಮಾಡಬಲ್ಲ ವ್ಯಕ್ತಿಗಳಾಗಿದ್ದಾರೆ. ಅವರು ಸಾಮಾನ್ಯ ನಂಬಿಕೆ, ಧರ್ಮ, ಮತಗಳಿಗೆ ಕಟ್ಟುಬೀಳುವುದಿಲ್ಲ, ಅವರು ನಿರಾಸಕ್ತರಾಗಿರುತ್ತಾರೆ. ಆದರೆ ಸಾಮಾನ್ಯ ಮಾನವರು ತಮ್ಮ ತಮ್ಮ ನಂಬಿಕೆಗಳಿಗೆ, ಧರ್ಮಕ್ಕೆ ಸಹಜವಾಗಿ ಆಕರ್ಷಿತವಾಗಿದ್ದರೆ, ಅಂಥವರನ್ನು ಅವರ ಪಾಡಿಗೆ ಬಿಟ್ಟುಬಿಡುತ್ತಾರೆ. ಅವರು ಮುಖ್ಯವಾಗಿ ಆಧ್ಯಾತ್ಮಿಕ ಪರಿವರ್ತನೆಯೊಂದನ್ನೇ ಅವಶ್ಯವಾಗಿ ನಂಬಿರುತ್ತಾರೆ. ಮುಖ್ಯವಾಗಿ ಇಂಥ ರೂಪಾಂತರವು ಯಾವುದೇ ತೆರನಾದ ಬಾಹ್ಯ ಸಂಘಟನೆಗಳಿಂದ, ಸಂಸ್ಥೆಗಳಿಂದ ಯಂತ್ರಿಕವಾದ ರೀತಿಯಲ್ಲಿ ಬಂದೀತೆಂದು ಭಾವಿಸುವ ತಪ್ಪು ಮಾಡುವುದಿಲ್ಲ. ಅವರಿಗೆ ಚೆನ್ನಾಗಿ ಗೊತ್ತು, ಈ ಬದಲಾವಣೆಯನ್ನು ಪ್ರತಿ ವ್ಯಕ್ತಿ ಜೀವಿಸಬೇಕು, ಆಂತರಿಕವಾಗಿ ಬದುಕಬೇಕು ಇಲ್ಲವಾದರೆ ಇಂಥ ರೂಪಾಂತರ ಎಂದಿಗೂ ವಾಸ್ತವದಲ್ಲಿ ಬರಲಾರದೆಂಬ ಸತ್ಯವನ್ನು ಅವರು ಮರೆಯುವುದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/165–66**

*

## ಹೊಸ ಸಾಮಾಜಿಕ ವ್ಯವಸ್ಥೆ ಮತ್ತು ಹೊಸ ಜನಾಂಗ

ಧಾರ್ಮಿಕ ನಂಬಿಕೆಗಳು, ಮತ–ಪಂಥಗಳು ಮುಂದೆ ಅಪ್ರಧಾನವಾಗಿ ಬಿಡುವಂತೆ ನೈತಿಕ ಕಟ್ಟುಪಾಡುಗಳು, ಅವುಗಳ ಶಾಸನ, ಸಾಂಪ್ರದಾಯಿಕ ನಿಯಮಾವಳಿಗಳು, ಇವೆಲ್ಲ ತಮ್ಮ ಮಹತ್ವ ಕಳೆದುಕೊಳ್ಳುವುವು. ವಾಸ್ತವವಾಗಿ ಮಾನವನ ಜೀವನದಲ್ಲಿ ಸಮಸ್ತ ನೈತಿಕ ಸಮಸ್ಯೆಯು ಪ್ರಾಣಿಕ ಬಯಕೆ, ಅದರ ಪ್ರವೃತ್ತಿ ಅಥವಾ ಆವೇಗ ಹಾಗೂ ಮಾನಸಿಕ ಶಕ್ತಿ ಮತ್ತು ನಿರ್ಣಯಗಳ ಮೇಲೆಯೇ ಕೇಂದ್ರಿತವಾಗಿದೆ. ಪ್ರಾಣಿಕ ಬಯಕೆ ಅಥವಾ ಸಂಕಲ್ಪವು ಮಾನಸಿಕ ಶಕ್ತಿಗೆ ಶರಣಾದರೆ ಆಗ ಮಾತ್ರ ಮಾನವನ ವ್ಯಕ್ತಿಗತ ಜೀವನವಾಗಲಿ ಅಥವಾ ಇಡೀ ಸಮಾಜದ ಬದುಕಾಗಲಿ ಅದು ನೈತಿಕತೆಯುಳ್ಳದ್ದಾಗುವುದು. ಆದರೆ ಅವೆರಡೂ ಸೇರಿ, ಅಂದರೆ, ಪ್ರಾಣಿಕ ಮತ್ತು ಮಾನಸಿಕ ಶಕ್ತಿಗಳು ತಮಗಿಂತ ಹಿರಿದಾದ, ಅತಿಮಾನಸದ ಶಕ್ತಿಗೆ ಶರಣಾದರೆ, ಮಾನವನ ಬದುಕು ಹೊಸ ಆಯಾಮ ಪಡೆಯುವುದು, ಆವಾಗ ನಿಜವಾದ ಆಧ್ಯಾತ್ಮಿಕ ಜೀವನ ಆರಂಭವಾಗುವುದು, ಅತಿಮಾನವನ ಜೀವನ ಆರಂಭವಾಗುವುದು. ಏಕಂದರೆ ಅವನ ಜೀವನವು ಅಂತರಂಗದ ನಿಯಮಗಳಿಗೆ ಒಳಪಡುವುದು, ಪ್ರತಿಯೊಬ್ಬ ವ್ಯಕ್ತಿಯ ಹೃತ್‌ಕೇಂದ್ರದಲ್ಲಿ ದೈವೀ ನಿಯಮ ಪ್ರಕಾಶಿಸುವುದು, ಅಂತರಂಗ–ದೊಳಗಿನಿಂದಲೇ ಎಲ್ಲ ಶಾಸನ ನಡೆಯುವುದು, ಏಕೆಂದರೆ ದೈವೀ ನಿಯಮವು ಅನೇಕ ವಿಧವಾಗಿ ಪ್ರಕಟವಾದರೂ ಕೂಡ ಅದರ ಮೂಲ ಸೆಲೆ ಒಂದೇ ಆಗಿರುವುದು. ಈ ಏಕತೆ ಇರುವುದರಿಂದಲೇ ಈ ನಿಯಮ ಅಥವಾ ಶಾಸನವು ಶ್ರೇಷ್ಠವಾದ ವ್ಯವಸ್ಥೆ ಹಾಗೂ ಸಾಮರಸ್ಯದ ಆಳ್ವಿಕೆಯಾಗಿರುವುದು. ಹೀಗಾಗಿ ಮಾನವನು ಆಗ ಅಹಂ–ಕೇಂದ್ರಿತ ಉದ್ದೇಶಗಳಿಂದ, ನಿಯಮ ಹಾಗೂ ಸಂಪ್ರದಾಯಗಳಿಂದ ನಿರ್ದೇಶಿಸಲ್ಪಡುವುದಿಲ್ಲವಾಗಿ ಎಲ್ಲ ತೆರನಾದ ಸ್ವಾರ್ಥಪರ ಗುರಿಗಳನ್ನು ತ್ಯಾಗ ಮಾಡುವನು. ಅವನು ಸಂಪೂರ್ಣ ನಿರಾಸಕ್ತಿಯಿಂದ ಕೆಲಸ ಮಾಡತೊಡಗುವನು. ವೈಯಕ್ತಿಕ ಲಾಭಕ್ಕಾಗಿ ಈ ಜಗತ್ತಿನಲ್ಲೇ ಆಗಲಿ ಇನ್ನಾವುದೇ ಬೇರೆ ಲೋಕದಲ್ಲೇ ಆಗಲಿ ಕೆಲಸ ಮಾಡುವುದು ಆಗ ಸಾಧ್ಯವಾಗುವುದಿಲ್ಲ. ಏಕಂದರೆ ಪ್ರತಿಯೊಂದು ಕೆಲಸವೂ ಪರಿಪೂರ್ಣವಾಗಿರುವುದು, ಸರಳ ಆನಂದಪೂರ್ಣ ಹಾಗೂ ದೈವೀ ನಿಯಮದ ಪ್ರೇರಣೆಯಿಂದಲೇ ಮಾಡಲ್ಪಡುವುದು. ಅಲ್ಲಿ ಯಾವುದೇ ರೀತಿಯ ಲಾಭಾನ್ವೇಷಣೆಯಿಲ್ಲ, ಪ್ರತಿಫಲದ

ಅಪೇಕ್ಷೆ ಇಲ್ಲ. ಏಕೆಂದರೆ ಇಂಥ ದೈವೀ ಪ್ರೇರಣೆ ಹಾಗೂ ನಿಯಮದಡಿಯಲ್ಲಿ ಕೆಲಸ ಮಾಡುವುದೇ ದೊಡ್ಡ ಪ್ರತಿಫಲವಾಗಿ ತೋರುವುದು, ತನ್ನೊಳಗಿರುವ ದೈವೀ ತತ್ವದ ಜೊತೆ ಒಂದಾಗಿ ತನ್ನ ಅತ್ಮಸಾಕ್ಷಿ ಹಾಗೂ ಸಂಕಲ್ಪಗಳನ್ನು ಅದರ ಜೊತೆ ಸೇರಿಸಿ ಕೆಲಸ ಮಾಡುವುದೇ ಹಿರಿದಾದ ಪ್ರತಿಫಲವಾಗುವುದು.

ಹೀಗೆ ತಾದಾತ್ಮ್ಯ ಹೊಂದುವುದರಲ್ಲಿಯೇ ಅತಿಮಾನವನು ತನ್ನ ಸಾಮಾಜಿಕ ಜೀವನವನ್ನು ಗುರುತಿಸುವನು. ಏಕೆಂದರೆ ತನ್ನೊಳಗಿರುವ ದೈವೀ ನಿಯಮವನ್ನು ಕಂಡುಕೊಳ್ಳುವುದರ ಜೊತೆಯಲ್ಲಿಯೇ, ಎಲ್ಲ ಜೀವರಾಶಿಗಳ ಆಂತರ್ಯದಲ್ಲಿರುವ ದೈವೀ ನಿಯಮವನ್ನೂ ಗುರುತಿಸುವನು. ಆ ದೈವೀ ನಿಯಮದ ಜೊತೆ ಒಂದಾಗುವುದರ ಮೂಲಕ ಅವನು ಎಲ್ಲ ಜೀವರಾಶಿಗಳ ಜೊತೆ ಒಂದಾಗುವನು, ಎಲ್ಲದರಲ್ಲಿರುವ ಏಕತೆಯನ್ನು ಅದ್ವೈತವನ್ನು ಗುರುತಿಸುವನು. ಇದೆಲ್ಲವನ್ನು ಅವನು ಕೇವಲ ಸಾರ ರೂಪದಲ್ಲಿ ಅಲ್ಲ ತೀರ ಬಾಹ್ಯ ಸ್ತರದ ಜೀವ ಹಾಗೂ ಜೀವಿಗಳಲ್ಲೂ ಸಹ ಗುರುತಿಸುವುನು. ಅವನು ಕೇವಲ ಮನಸ್ಸು, ಪ್ರಾಣ ಅಥವಾ ಒಂದು ಶರೀರವಾಗಿ ಮಾತ್ರ ಉಳಿಯದೇ ಶಾಂತವಾದ, ನಿಶ್ಚಲವಾದ, ಶಾಶ್ವತವಾದ ಎಲ್ಲವನ್ನೂ ಭರಿಸುವ ಆತ್ಮರೂಪನಾಗಿ ನಿಲ್ಲುವನು. ಅವನು ಎಲ್ಲವನ್ನೂ ಭರಿಸುವ, ಪೋಷಿಸುವ, ಒಳಗೊಳ್ಳುವ ಆತ್ಮವನ್ನು ಎಲ್ಲಡೆ ಕಾಣುವನು, ಮನಸ್ಸು, ಪ್ರಾಣ ಹಾಗೂ ಶರೀರಗಳೂ ಅದರೊಳಗಿರುವುದನ್ನೇ ಅವನು ಕಾಣುವನು. ಅವನಿಗೆ ಇಂಥ ಸರ್ವತೋಮಯ ಆತ್ಮದ ಅರಿವಾಗುವುದು, ಅದೇ ಸೃಷ್ಟಿಕರ್ತೃ, ಅದೇ ಸಕಲ ಕಾರ್ಯಗಳ ಕರ್ತೃ, ಇಡೀ ಸೃಷ್ಟಿಯಲ್ಲಿ ತಾನೇ ತಾನಾಗಿರುವ ಏಕೈಕ ತತ್ವವೆಂದರಿತುಕೊಳ್ಳುವನು. ಈ ಜಗದಲ್ಲಿರುವ ಅನೇಕ ವಿಧವಾದ ಜೀವರಾಶಿಗಳೆಲ್ಲ ಆ ಪರಮಾತ್ಮನ ಪ್ರಕಟಗಳೇ ಆಗಿವೆ. ಪ್ರತಿಯೊಬ್ಬ ವ್ಯಕ್ತಿ ಅಥವಾ ಜೀವಿಯು ತನಗೆ ಕಾಣುವ ಪರಮಾತ್ಮನ ಅನಂತ ಪ್ರಕಟಣೆಗಳಲ್ಲಿನ ಒಂದು ಮುಖ ಎಂದು ಅವನು ಭಾವಿಸುವವನು. ಅವನು ಆ 'ತತ್'ನಲ್ಲಿ ಒಂದಾಗಿ ಹೋಗಿ, ಮುಖವೆಂದು ಹಾಗೂ ನಾವೀಗ ಬೇರೆ ಬೇರೆ ಎಂದು ಭಾವಿಸುವ ಸಕಲ ಜೀವಿಗಳೂ ಕೂಡ ಅವನ ಪ್ರಜ್ಞೆಗೆ ತನ್ನದೇ ಎಂಬಂತೆ ತೋರ ತೊಡಗುವವು. ಎಲ್ಲವೂ ತನ್ನದೇ ಮನಃಪ್ರಾಣ ಶರೀರ ಎಂಬ ಸತ್ಯದ ಅನುಭವವಾಗುವದು. ಪ್ರಪಂಚದಲ್ಲಿನ ಎಲ್ಲ ಭೌತಿಕ ತತ್ವ ಒಂದೇ ಎಂಬ ಅರಿವಾದಾಗ ಪ್ರಪಂಚದೊಳಗಿನ ಎಲ್ಲ ಜೀವಿಗಳ ಶರೀರವೂ

ತನ್ನದೇ ಎಂಬಂತೆ ಅವನಿಗೆ ತೋರುವದು. ತನ್ನ ಮನಸ್ಸು ಮತ್ತು ಹೃದಯಗಳ ಮೂಲಕ ಅವನು ಇಡೀ ಸೃಷ್ಟಿಯ ಜೊತೆ ಒಂದಾಗುವನು. ಸ್ವಲ್ಪದರಲ್ಲಿ ಹೇಳಬೇಕೆಂದರೆ, ಎಲ್ಲರಲ್ಲೂ ಎಲ್ಲವನ್ನೂ ಅವನು ತನ್ನೊಳಗೇ ಕಾಣುವನು. ಹೀಗೆ ಅವನಿಗೆ ಏಕತೆಯ, ನಿಜವಾದ ಏಕಾತ್ಮತೆಯ ಸಾಕ್ಷಾತ್ಕಾರ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/166–68**

*

**ಅತಿಮಾನಸದ ಅಭ್ಯರ್ಥಿ**

ನೀವು ಅತಿಮಾನಸದ ಅಭ್ಯರ್ಥಿಯಾಗಿದ್ದರೆ, ಮೊದಲು ನಿಮ್ಮಿಂದ ಅಹಂನ್ನು ಕಿತ್ತು ಹಾಕಲು ದೃಢ ನಿಶ್ಚಯ ಮಾಡಬೇಕು, ಅದನ್ನು ಮೀರಿ ಹೋಗಲು ನಿರ್ಧಾರ ಮಾಡಬೇಕು. ಏಕೆಂದರೆ ಎಲ್ಲಿಯವರೆಗೆ ನೀವದನ್ನು ದೂರೀಕರಿಸುವುದಿಲ್ಲವೋ ಅಲ್ಲಿಯವರೆಗೆ ಅತಿಮಾನಸವು ನಿಮಗೆ ಅಪರಿಚಿತವಾಗಿ ಅಗ್ರಾಹ್ಯವಾಗಿ ಉಳಿಯುವುದು.

ನಿಮ್ಮ ನಿರಂತರ ಪ್ರಯತ್ನದ ಮೂಲಕ, ವ್ಯವಸ್ಥಿತ ಶಿಸ್ತಿನ ಮೂಲಕ, ಹೆಚ್ಚು ಹೆಚ್ಚು ಪ್ರಭುತ್ವ ಸಾಧಿಸುತ್ತ ಹೋಗುವುದರ ಮೂಲಕ ನಿಮ್ಮ ಅಹಂನ್ನು ದಾಟಿ, ಅದನ್ನು ಮೀರಿ ಮುಂದೆ ಹೋಗುವುದು ಸಾಧ್ಯವಾದರೆ, ಅಥವಾ ನಿಮ್ಮ ಸತ್ತೆಯ ಒಂದು ಅತ್ಯಂತ ಸೂಕ್ಷ್ಮ ಭಾಗವಾದರೂ ಸಾಕು ಕಿಟಕಿಯಂತೆ ತೆರೆದುಕೊಂಡರೆ, ಆ ಸಣ್ಣ ಕಿಟಕಿಯ ಮೂಲಕವಾದರೂ ನೀವು ಸೂಕ್ಷ್ಮವಾಗಿ ನೋಡಿದರೆ, ನಿಮಗೆ ಅತಿಮಾನಸದ ದರ್ಶನ ಆಗುವುದು. ಇದೊಂದು ಅಭಿವಚನವಿದ್ದಂತೆ. ನೀವಿದನ್ನು ಒಂದುಸಲ ನೋಡಲು ಸಾಧ್ಯವಾದರೆ ಸಾಕು, ಅದು ಎಷ್ಟು ಸುಂದರವಾಗಿದೆಯೆಂದರೆ – ನೀವು ತಕ್ಷಣ ಅದಕ್ಕಾಗಿ ಎಲ್ಲವನ್ನೂ ಬಿಡಲು ಸಿದ್ಧರಾಗಿ ಬಿಡುವಿರಿ, ಹೌದು ಎಲ್ಲವನ್ನೂ, ನಿಮ್ಮ ಅಹಂನ್ನು ಕೂಡ!

ದಯವಿಟ್ಟು ತಿಳಿದುಕೊಳ್ಳಿ, ಸುಪ್ರಮಾನಸದ ಒಂದು ಸಣ್ಣ ನೋಟಕ್ಕಾಗಿ ನೀವು ಎಲ್ಲವನ್ನೂ ಬಿಡಬೇಕು, ಅಹಂನ್ನು ಸಂಪೂರ್ಣವಾಗಿ ಜಯಿಸಬೇಕೆಂದು ನಾನು ಹೇಳುತ್ತಿಲ್ಲ. ಏಕೆಂದರೆ ಹಾಗೆ ಹೇಳುವುದು ಯುಕ್ತವಲ್ಲ ಅದು ಸಾಧ್ಯವೂ ಇಲ್ಲ. ಹಾಗಾದರೆ ಅತಿಮಾನಸವು ಅಸಾಧ್ಯವೇ ಆಗಿ ಉಳಿದುಬಿಡುವುದು. ಹಾಗೇನಿಲ್ಲ, ಅಹಂನಿಂದ ಮುಕ್ತರಾಗಬೇಕು, ಎಲ್ಲೋ ಒಂದೆಡೆ ತುಸು, ನಿಮ್ಮ

ಸತ್ತೆಯ ಯಾವುದೋ ಒಂದು ಮೂಲೆಯಲ್ಲಿ, ನಿಮ್ಮ ಮನಸ್ಸಿನ ಸಣ್ಣ ಮೂಲೆಯಲ್ಲಾದರೂ ಸಾಕು. ಮನಸ್ಸು ಮತ್ತು ಪ್ರಾಣ ಎರಡೂ ಆದರೆ ತುಂಬ ಒಳ್ಳೆಯದು, ಅಕಸ್ಮಾತ್ತಾಗಿ – ಓಹ್! ಅಕಸ್ಮಾತ್ತಾಗಿ ಅಲ್ಲ, ಪುನಃಪುನಃ ಪ್ರಯತ್ನ ಮಾಡುತ್ತಿರುವುದರ ಮೂಲಕ ನಿಮ್ಮ ಅಂತರಾತ್ಮಿಕ ಸತ್ತೆಯ ಸಂಪರ್ಕ ನಿಮಗೆ ಸಾಧ್ಯವಾದರೆ, ಆಯಿತು, ಬಾಗಿಲು ತೆರೆಯಿತೆಂದೇ ಅರ್ಥ. ಅಂತರಾತ್ಮನ ಮೂಲಕ ನೀವು ನೇರವಾಗಿ ಹಾಗೂ ಸ್ಪಷ್ಟವಾಗಿ ಅತಿಮಾನಸದ ಸುಂದರ ದರ್ಶನವನ್ನು ಕಾಣಬಲ್ಲಿರಿ. ಅದು ಕೇವಲ ದರ್ಶನ ಮಾತ್ರ, ಸಾಕ್ಷಾತ್ಕಾರವಲ್ಲ. ಅದು ತುಂಬ ದೂರದ ಹಾಗೂ ಹಿರಿದಾದ ದಾರಿ. ಆದರೆ ಇಂಥ ಸುಂದರವಾದ ಹಾಗೂ ಅದ್ಭುತವಾದ ಸಾಕ್ಷಾತ್ಕಾರದವರೆಗೆ ಹೋಗದೇ, ಅಂದರೆ ಅಂತರಾತ್ಮನ ಸಾಕ್ಷಾತ್ಕಾರದವರೆಗೆ ಹೋಗದೇ, ನಿಮ್ಮ ಮನಸ್ಸಿನ ಅಥವಾ ಪ್ರಾಣದ ಯಾವುದೋ ಒಂದು ಅಂಶವನ್ನಾದರೂ ಮುಕ್ತಗೊಳಿಸಲು ನಿಮಗೆ ಸಾಧ್ಯವಾದರೆ, ಅಷ್ಟು ಸಾಕು, ಅದು ಒಂದು ರೀತಿಯಲ್ಲಿ ರಂಧ್ರವನ್ನು ಕೊರೆಯುವುದು, ನೀವು ಆ ಸಣ್ಣ ರಂಧ್ರದ ಮೂಲಕ ಅತಿಮಾನಸವನ್ನು ನೋಡಬಲ್ಲಿರಿ, ಒಂದು ಸಣ್ಣ ನೋಟವಾದರೂ ಸಾಕು, ಸಾಧ್ಯವಾಗುವುದು. ಅದು ಅಷ್ಟಕ್ಕೇ ಅತ್ಯಂತ ಸುಂದರವಾಗಿದೆ, ಆಕರ್ಷಕವಾಗಿದೆ, ನಿಮಗೆ ಅದ್ಭುತವಾಗಿ ತೋರಿಬಿಡುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/242**

*

**ಮಧ್ಯಂತರ ಸ್ತರಗಳು**

ಪರಿಪೂರ್ಣವಾದ ಜನಾಂಗವೊಂದು ತಾನಾಗಿ ಸಹಜವಾಗಿ ಬಂದುಬಿಡುವುದಿಲ್ಲ. ಹಾಗೆ ಬರುವದೂ ಸಾಧ್ಯವಿಲ್ಲ. ಆದರೆ ಅಂಥ ಮೊದಲ ಪ್ರಯತ್ನದಲ್ಲಿಯೇ, ಸದ್ಯದ ಮಾನವ ಜನಾಂಗಕ್ಕೆ ಹೋಲಿಸಿದರೆ, ಅದು ಅಪಾರ ವ್ಯತ್ಯಾಸವನ್ನುಂಟು ಮಾಡುವುದು. ಇದು ತುಂಬ ಅದ್ಭುತವೆಂದು ಆರಂಭದಲ್ಲಿಯೇ ಅನಿಸುವಷ್ಟು ಮಹತ್ತರವಾಗಿರುವುದು.

ಮೊದಲ ಅತಿಮಾನಸ ಪ್ರಕಟಣೆಯು ಅತಿ ಸಾಮಾನ್ಯವಾಗಿರುವುದು, ಅಪರಿಪೂರ್ಣವಾಗಿರುವುದು. ಆದರೆ ಅದಕ್ಕೆ ಹೋಲಿಸಿದರೆ, ಸದ್ಯದ ಮಾನವನು

ತೀರ ಅಸಂಸ್ಕೃತ, ಸ್ಥೂಲ ಎಂದೆನಿಸುವುದು. ವಿಶ್ವಾತ್ಮಕ ಬೆಳವಣಿಗೆಯಲ್ಲಿ ನಿಲುಗಡೆ ಎಂಬುದೇ ಇರದು, ಒಂದೊಮ್ಮೆ ನಿಗದಿತವಾದ ಗಳಿಗೆಯಲ್ಲಿ ಎಲ್ಲವೂ ಪರಿಪೂರ್ಣವಾಗಿದೆ, ಪೂರ್ಣವಾಗಿದೆ ಎಂದೆನಿಸಿದರೂ ಕೂಡ, ಅದು ಭವಿಷ್ಯದ ಪ್ರಕಟಣೆಗೆ ಒಂದು ವೇದಿಕೆ ಮಾತ್ರವಾಗಿರುತ್ತದೆ. ಆದರೆ ಜನರು ಮಾತ್ರ "ನಾನೇನು ಮಾಡಲೇಬೇಕಾಗಿತ್ತೋ ಅದನ್ನು ಮಾಡಿದ್ದೇನೆ" ಎಂದು ಹೇಳಿ ತೃಪ್ತರಾಗಿ ಇದ್ದುಬಿಡಬಹುದೇನೋ.

ಆದರೆ ವಿಶ್ವ ಹಾಗಿರುವುದಿಲ್ಲ. ಅದು ನಿಲ್ಲುವುದಿಲ್ಲ, ಅದು ವಿಶ್ರಾಂತಿ ತೆಗೆದುಕೊಳ್ಳುವುದಿಲ್ಲ. ಅದು ಹಾಗೆಯೇ ಮುಂದುವರಿಯುತ್ತಲೇ ಇರುವುದು. "ಆಹಾ, ಎಲ್ಲ ಮುಗಿದಂತಾಯಿತು. ನಾನಿನ್ನು ಬಾಗಿಲು ಮುಚ್ಚಿ ನಿಶ್ಚಿಂತೆಯಾಗಿ ಕುಳಿತು ಬಿಡುತ್ತೇನೆ" ಎಂದು ಯಾರೂ ಯಾವತ್ತಿಗೂ ಹೇಳುವಂತಿಲ್ಲ. ಬಾಗಿಲು ಮುಚ್ಚಿ ಕುಳಿತುಕೊಳ್ಳಬಹುದೇನೋ, ಆದರೆ, ಆ ಕ್ಷಣದಲ್ಲಿ ಅವನು ವಿಶ್ವಾತ್ಮಕ ಚಲನೆಯ ಜೊತೆ ಸಂಬಂಧ ಕಳಚಿಕೊಳ್ಳಬೇಕಾಗುತ್ತದೆ. ಪ್ರಕಟಣೆ ಎಂಬುದು ಯಾವಾಗಲೂ ಸಾಪೇಕ್ಷವೇ, ಮೊದಲ ವ್ಯಕ್ತಿಯು ಮಾನವ–ಪ್ರಾಣಿಯಾಗಿರದೇ ಆರಂಭದಲ್ಲೇ ದೈವೀ ಮಾನವ ವ್ಯಕ್ತಿಯಾಗಿರುತ್ತಾನೆ, ದಿವ್ಯ ಮಾನವನಾಗಿರುತ್ತಾನೆ, ಹೀಗಾಗಿ ಅವನು ತುಂಬ ಅದ್ಭುತವಾಗಿ ತೋರುತ್ತಾನೆ. ಹೊಸ ಜನಾಂಗದ ಪರಿಪೂರ್ಣ ಮಾದರಿಯ ಜೊತೆ ಹೋಲಿಸಿದರೆ, ಅವನು ತೀರ ಅಪೂರ್ಣನಾಗಿರುವನಾದರೂ, ಅದ್ಭುತವಾಗಿಯೇ ಇರುತ್ತಾನೆ. ಯಾರೇ ಆಗಲಿ ನಿರಂತರ ಚಲನೆಯಲ್ಲಿ ಜೀವಿಸುವುದನ್ನು ರೂಢಿಸಿಕೊಳ್ಳಬೇಕು. ಹಾಗೆ ನೋಡಿದರೆ – ಕಾರ್ಯಮಾಡಲು ಸುಲಭವಾಗಬೇಕಾದರೆ ಹೀಗೆ ಮಾಡುವುದು ಅಗತ್ಯವೇನೋ – ಒಂದು ಗುರಿಯನ್ನು ನಿಗದಿಪಡಿಸಿಕೊಂಡು "ಇದು, ಅಂತಿಮ ಸ್ಥಿತಿ" ಎಂದು ಹೇಳಿ ಕೆಲಸ ಮಾಡುವುದು ಒಳ್ಳೆಯದೇ, ಆದರೆ ಅದೇ ಸರ್ವಸ್ವ ಅಲ್ಲ." ಇದು ಪರಿಪೂರ್ಣ "– ಅಲ್ಲದೇ ನಿತಾಂತ ಪರಿಪೂರ್ಣತೆ ಎಂಬುದು ಇಲ್ಲವೇ ಇಲ್ಲ. ಎಲ್ಲ ವಸ್ತುಗಳೂ, ಸಂಗತಿಗಳೂ ಸಾಪೇಕ್ಷವೇ, ಎಲ್ಲವೂ ನಿರಂತರ ಬದಲಾಗುತ್ತಲೇ ಇರುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/417–18 – ಶ್ರೀಮಾತೆ**

*

ಯಾವಾಗ ಪ್ರೇಮದ ಹೃದಯವು ಸಂಪೂರ್ಣ ಜ್ಞಾನದಿಂದ ಶಾಂತವಾಗಿ ಪ್ರಶಾಂತ ಹರ್ಷಾತಿರೇಕತೆಯ ಜೊತೆಗೆ ಶಕ್ತಿಯೊಂದಿಗೆ ಮಿಡಿಯ–ಲಾರಂಭಿಸುವುದೋ, ಪರಮ ಶಕ್ತಿಯ ಪ್ರಬಲ ಕೈಗಳು ಯಾವಾಗ ಸಂಪೂರ್ಣ ಅರಿವು, ಆನಂದ ಹಾಗೂ ಬೆಳಕಿನೊಂದಿಗೆ ಜಗತ್ತಿಗಾಗಿ ದುಡಿಯಲು ಸಿದ್ಧವಾಗುವವೋ, ಜ್ಞಾನ ಸಂಪನ್ನವಾದ ಮಿದುಳು ಹೃದಯದ ಅಸ್ಪಷ್ಟ ಅಂತಃಸ್ಫೂರ್ತಿಯನ್ನು ಒಪ್ಪಿಕೊಂಡು ಅದನ್ನು ಪರಿವರ್ತಿಸಲು ಹಾಗೂ ಪರಮೋನ್ನತ ದಿವ್ಯ ಸಂಕಲ್ಪಕ್ಕೆ ತನ್ನನ್ನ ಒಪ್ಪಿಸಿಕೊಳ್ಳಲು ಸಿದ್ಧವಾಗುವುದೋ, ಎಲ್ಲ ದೇಹಾನುದೇವತೆಗಳು ಯಜ್ಞದ ಆತ್ಮ ತತ್ವದಲ್ಲಿ ಸ್ಥಿತರಾಗಿ ಇಡೀ ಜಗತ್ತಿನ ಜೊತೆ ಒಂದಾಗಿ, ಎಲ್ಲವನ್ನು ಪರಿವರ್ತಿಸಲು ಯಾವಾಗ ಸಿದ್ಧರಾಗುವುರೋ, ಆಗ ಮಾನವನು ಸಮಗ್ರವಾಗಿ ತನ್ನನ್ನು ತಾನೇ ಮೀರಿ ಬೆಳೆಯಬಲ್ಲ ವಾತಾವರಣ ಸೃಷ್ಟಿಯಾಗುವುದು. ಇದು ಅತಿಮಾನಸದ ದೈವೀ ದಾರಿಯಾಗಿದೆಯೇ ಹೊರತು ಒಣ ಜಂಬದ, ಬಲಿಷ್ಠ ಹಾಗೂ ತಾರ್ಕಿಕ ಅಹಂಕಾರ ಪೂರ್ಣವಾದ ಸಂಸ್ಕಾರವು ಮಾನವತೆಯನ್ನು ಒತ್ತೆಯಾಳಾಗಿಸಿ ಮೆರೆಯುವುದು ಅದರ ದಾರಿ ಸರ್ವಥಾ ಆಗಿರಲಾರದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/157 – ಶ್ರೀ ಅರವಿಂದರು**

*

# ಮಾನವ ಮತ್ತು ಅತಿಮಾನವ

– ಅನುವಾದ: ಡಾ॥ ಬಿ.ಆರ್. ಭೀಡ
ಪ್ರೊ. ವೀರಭದ್ರಪ್ಪ

## ಅನ್ಯ ಜೀವಿಗಳ ಜೊತೆ ಅವನ ವರ್ತನೆ

... ಅತಿಮಾನವ ಪ್ರಜ್ಞೆಯ ದೃಷ್ಟಿಯಿಂದ ನೋಡಿದರೆ ಮಾನವ ನಿಜವಾಗಿ ಮೂರ್ಖನಾಗಿದ್ದಾನೆ. ಎಲ್ಲ ಪರಿಪೂರ್ಣತೆಗಳಿಂದ ಕೂಡಿದ, ಸಾಕ್ಷಾತ್ಕಾರಗಳನ್ನು ಸಿದ್ಧಿಸಿಕೊಂಡ, ಎಲ್ಲವೂ ಉಳ್ಳ, ಏನೆಲ್ಲ ಮಹತ್ತರ ಸಾಧನೆಗಳನ್ನು ಮಾಡಿದ್ದರೂ ಸಹ ಅವನು ಅತಿಮಾನವನೆದರು ಕೇವಲ ಮೂರ್ಖನಾಗಿದ್ದಾನೆ. ಆದರೆ ಇಷ್ಟೇ, ಈ ಕಾರಣಕ್ಕಾಗಿ ಅವನನ್ನು ಜರಿಯುವಂತಿಲ್ಲ, ಅವನನ್ನು ಅವಮಾನಿಸಬೇಕಾಗಿಲ್ಲ. ಆದರೆ, ನನಗನಿಸುವಂತೆ, ಅತಿಮಾನವನು ಯಾರನ್ನು ಅವಮಾನಿಸುವುದಿಲ್ಲ. ಏಕೆಂದರೆ ಬಾಹ್ಯ ತೋರಿಕೆಯ ಹಿಂದೆ ಹೋಗಿ ನೋಡಬಲ್ಲ ಪ್ರಜ್ಞೆ ಅವನಿಗಿರುತ್ತದೆ. ಅವನು ಅಷ್ಟೇ ದಯಾಳುವಾಗಿರುತ್ತಾನೆ ಎಂದು ನಾವು ಆಶಿಸೋಣ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/329**

*

*(ಪವಿತ್ರಾ), ಅತಿಮಾನವನನ್ನು ಮಾನವ ಯಾವ ದೃಷ್ಟಿಯಿಂದ ನೋಡುತ್ತಾನೆ?*

ಆಹ್ (ನಗು) ಅಲ್ಲ, ದೇವತೆಗಳ ಜೊತೆ ಅವನ ವರ್ತನೆ ಹೇಗಿದೆಯೋ ಹಾಗೆ ಇರದಿರಲಿ ಎಂದು ನಾವು ಆಶಿಸೋಣ, ಏಕೆಂದರೆ ಅವನು ಅವರೆಲ್ಲರನ್ನು ಅಗೌರವದಿಂದ ನಡೆಸಿಕೊಂಡಿದ್ದಾನೆ. ಅವನು ಪ್ರವಾದಿಗಳನ್ನು, ದೇವತೆಗಳನ್ನು – ಎಲ್ಲರನ್ನೂ ಶಿಲುಬೆಗೇರಿಸಿದ್ದಾನೆ, ಕಲ್ಲುಗಳಿಂದ ಹೊಡೆದಿದ್ದಾನೆ, ಜೀವಂತ ಸುಟ್ಟಿದ್ದಾನೆ – ನಿಜವಾಗಿ ಯಾರೆಲ್ಲ ತನಗೆ ಹೊಸ ಬದುಕನ್ನು ಕಲಿಸಲೆಂದು ಬಂದರೋ ಅವರನ್ನು ಮಾನವ ಅಗೌರವದಿಂದ ಕಂಡಿದ್ದಾನೆ, ಅವರ ಜೊತೆ ಕೆಟ್ಟದಾಗಿ ನಡೆದುಕೊಂಡಿದ್ದಾನೆ. ಈಗಲಾದರೂ ಮಾನವ ತುಸು ಹೆಚ್ಚು ಯುಕ್ತಿ ಪೂರ್ವಕವಾಗಿ ನಡೆದುಕೊಳ್ಳುತ್ತಾನೆಂದು ಆಶಿಸೋಣ. ಅವರನ್ನು ಅವನು ಸೆರೆಮನೆಯಲ್ಲಿರಿಸಬಹುದೇನೇನೋ..!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/330**

*

**ಮಾನವನಲ್ಲಿ ಪ್ರಜ್ಞಾಪೂರ್ವಕ ವಿಕಾಸದ ಸಾಧ್ಯತೆ**

ಮನಸ್ಸು ಯಾವಾಗ ಭೂಮಿಯ ಮೇಲಿಳಿದು ಬಂದಿತೋ, ಭೂಮಿಯ ವಾತಾವರಣದಲ್ಲಿ ಮನಸ್ಸು ಪ್ರಕಟವಾದಾಗಿನಿಂದ ಹಿಡಿದು ಭೂಮಿಯ ಮೇಲೆ ಮೊದಲ ಮಾನವ ಕಾಣಿಸಿಕೊಂಡನೋ, ಅಲ್ಲಿಯವರೆಗೆ ಸುಮಾರು ಸಾವಿರಾರು ವರ್ಷಗಳೇ ಕಳೆದಿವೆ. ಆದರೆ ಇದೀಗ ಈ ಪ್ರಕ್ರಿಯೆ ವೇಗವಾಗಿ ಆಗಲಿದೆ, ಏಕೆಂದರೆ ಮಾನವನು ಅದನ್ನು ಬಯಸುತ್ತಿದ್ದಾನೆ, ನಿರೀಕ್ಷಿಸುತ್ತಿದ್ದಾನೆ. ಅವನಿಗೆ ಅಸ್ಪಷ್ಟ ಕಲ್ಪನೆಯಾದರೂ ಇದೆ. ಒಂದರ್ಥದಲ್ಲಿ ಅವನು ಅತಿಮಾನವನ ಆಗಮನಕ್ಕಾಗಿ ಕಾಯುತ್ತಿದ್ದಾನೆ. ಆದರೆ ಮಂಗಗಳು ಈ ರೀತಿ ಮಾನವನ ಆಗಮನವನ್ನು ನಿರೀಕ್ಷಿಸಿರಲಿಲ್ಲ, ಬಯಸಿರಲಿಲ್ಲ. ಅವುಗಳಿಗೆ ಅಂಥ ವಿಚಾರ ಕೂಡ ಇದ್ದಿರಲಿಲ್ಲ. ಏಕೆಂದರೆ ಅವುಗಳಿಗೆ ಅಂಥ ವಿಚಾರ ಕೂಡ ಇದ್ದಿರಲಿಲ್ಲ. ಏಕೆಂದರೆ ಅವುಗಳಿಗೆ ಹೆಚ್ಚು ವಿಚಾರ ಮಾಡುವ ಶಕ್ತಿ ಇಲ್ಲ. ಆದರೆ ಮಾನವ ಆ ಬಗ್ಗೆ ಚಿಂತನೆ ನಡೆಸಿದ್ದಾನೆ, ಹಾಗೂ ಅದಕ್ಕಾಗಿ ದಾರಿ ಕಾಯುತ್ತಿದ್ದಾನೆ. ಅಂತೆಯೇ ಅದು ವೇಗವಾಗಿ ಸಾಧ್ಯವಾಗಲಿದೆ. ಆದರೆ ವೇಗವಾಗಿ ಅಂದರೆ ಸಾವಿರಾರು ವರ್ಷಗಳು ಅಂತಲೇ ಅರ್ಥ. ಈ ವಿಚಾರವಾಗಿ ನಾವು ಮತ್ತೆ ಕೆಲ ಸಾವಿರ ವರ್ಷಗಳ ನಂತರ ಮಾತನಾಡೋಣ. ಇರಲಿ.

(ಮೌನ)

ಯಾರು ಆಂತರಿಕವಾಗಿ ಸಿದ್ಧರಾಗಿದ್ದಾರೋ, ಯಾರು ಉನ್ಮುಖ–ರಾಗಿದ್ದಾರೋ, ಯಾರು ಉನ್ನತ ಶಕ್ತಿಗಳ ಸಂಪರ್ಕದಲ್ಲಿದ್ದಾರೋ, ಯಾರು ಅತಿಮಾನಸದ ಬೆಳಕಿನ ಜೊತೆ ವೈಯಕ್ತಿಕವಾಗಿ ಹಾಗೂ ನೇರವಾಗಿ ಸಂಪರ್ಕ ಸಾಧಿಸಿದ್ದಾರೋ, ಅಂಥವರು ಭೂಮಿಯ ಮೇಲಿನ ವಾತಾವರಣದಲ್ಲಾಗಿರುವ ಸೂಕ್ಷ್ಮ ಬದಲಾವಣೆಯನ್ನು ಗುರುತಿಸಲು ಸಾಧ್ಯ.

ಆದರೆ ಅದಕ್ಕಾಗಿ.. ಸಮಾನ ಗುಣವು ಮಾತ್ರ ಸಮಾನ ಗುಣವನ್ನು ಗುರುತಿಸುತ್ತದೆ, ಅಂದರೆ ಅತಿಮಾನಸ ಪ್ರಜ್ಞೆಯು ಮಾತ್ರ ಈ ಭೂಮಿಯ ವಾತಾವರಣದಲ್ಲಿ ಕಾರ್ಯೋನ್ಮುಖವಾಗಿರುವ ಅತಿಮಾನಸವನ್ನು ಗುರುತಿಸಬಲ್ಲದು. ಯಾವುದೇ ರೀತಿಯಿಂದಲೇ ಆಗಿರಲಿ, ಯಾರು ಈ ದೃಷ್ಟಿಯನ್ನು ಬೆಳಸಿಕೊಂಡಿದ್ದಾರೋ ಅವರು ಅದನ್ನು ಗುರುತಿಸಬಲ್ಲರು. ಆದರೆ ಯಾರಿಗೆ ತಮ್ಮ ಅಂತಃಸತ್ತೆಯ ಬಗ್ಗೆ, ಬಹಳ ಬೇಡ ತುಸುವಾದರೂ, ಅರಿವಿಲ್ಲವೋ

ಅಂಥವರಿಗೆ ಭೂಮಿಯ ಮೇಲಾಗಿರುವ ಈ ಬದಲಾವಣೆಯನ್ನು ಗುರುತಿಸುವ ಸಾಮಾರ್ಥ್ಯ ಇರುವುದಿಲ್ಲ. ಅವರು ಇನ್ನೂ ಬಹಳ ದೂರ ಇದ್ದಾರೆ ಎಂದೇ ಅರ್ಥ. ಏಕೆಂದರೆ ಅಂಥವರ ಪ್ರಜ್ಞೆಯು ಕೇವಲ ಬಾಹ್ಯದಲ್ಲಿ, ಬಾಹ್ಯ ಮಾನಸಿಕ–ಪ್ರಾಣಿಕ ಮತ್ತು ಭೌತಿಕ ಸತ್ತೆಗಳಲ್ಲಿ ಮಾತ್ರ ಕೇಂದ್ರಿತವಾಗಿರುವುದರಿಂದ ಆಗಿರುವ ಬದಲಾವಣೆಯನ್ನು ಗುರುತಿಸಬೇಕಾದರೆ ಅನಿರೀಕ್ಷಿತವಾದ ಹಾಗೂ ವಿಚಿತ್ರವಾದ ಘಟನೆ ಜರುಗಬೇಕಾಗುತ್ತದೆ. ಆಗ ಅವರದನ್ನು ಪವಾಡವೆಂದು ಕರೆಯುತ್ತಾರೆ.

ಆದರೆ ಪರಿಸರ ಅಥವಾ ಸಂದರ್ಭಗಳನ್ನು ಹಾಗೂ ಅವುಗಳ ಲಕ್ಷಣಗಳನ್ನು ಬದಲಿಸಬಲ್ಲ ಶಕ್ತಿಗಳು ನಿರಂತರವಾಗಿ ಕಾರ್ಯೋನ್ಮುಖವಾಗಿರುವುದರಿಂದಾಗುವ ಬದಲಾವಣೆಗಳನ್ನು ಹಾಗೂ ವ್ಯಾಪಕವಾದ ಪರಿಣಾಮಗಳನ್ನು ಅವರು ಗುರುತಿಸುವದಿಲ್ಲ ಹಾಗೂ ಅವುಗಳನ್ನು ಪವಾಡಗಳೆಂದು ಕರೆಯುವುದೂ ಇಲ್ಲ ಏಕೆಂದರೆ ಅಂಥವರಿಗೆ ಕೇವಲ ಮೇಲ್ಮೈ ಮಾತ್ರ ಕಾಣುತ್ತದೆ ಹಾಗೂ ಅದು ಸಹಜವೆಂದು ತೋರುತ್ತದೆ ಅಷ್ಟೇ, – ಆದರೆ ನಿಜವಾಗಿ ಎಂಥ ಸಣ್ಣದೇ ಆಗಿರಲಿ ಆಗಿರುವ ಬದಲಾವಣೆಯನ್ನು ಗುರುತಿಸಿ, ಆಳವಾಗಿ ಆಲೋಚಿಸಲು ನೀವು ಸಮರ್ಥರಾದಿರೆಂದರೆ ನೀವು ಜರುಗಲಿರುವ ಪವಾಡವನ್ನು ಗುರುತಿಸಬಲ್ಲಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/126–27**

*

**ಮಾನವ ಸಹಕರಿಸಬಲ್ಲ**

– ಅನುವಾದ: ಪ್ರೋ. ಕೆ. ವೀರಭದ್ರಪ್ಪ

*ಶ್ರೀಮಾತೆ, ಯಾವಾಗ ಮನಸ್ಸು ಭೂಮಿಯ ವಾತಾವರಣದಲ್ಲಿ ಇಳಿದು ಬಂದಿತ್ತೋ ಆಗ ಮಂಗಗಳೇನೂ ಮನುಷ್ಯನಾಗಲು ಪ್ರಯತ್ನ ಪಟ್ಟಿರಲಿಲ್ಲವಲ್ಲ. ಅಥವಾ ಅವು ಪ್ರಯತ್ನ ಮಾಡಿದ್ದವಾ.. ಪ್ರಯತ್ನ ಮಾಡಿದ್ದು ಮಾತ್ರ ಪ್ರಕೃತಿ. ಆದರೆ ಇಲ್ಲಿ..*

ಆದರೆ ಮಾನವನು ತನ್ನನ್ನು ತಾನು ಅತಿಮಾನವನನ್ನಾಗಿ ಪರಿವರ್ತಿಸಿಕೊಳ್ಳಲು ಸಾಧ್ಯವಿಲ್ಲವಲ್ಲ.

*ಇಲ್ಲವೇ?*

ಸುಮ್ಮನೇ ಪ್ರಯತ್ನ ಪಟ್ಟುನೋಡಿ. (ನಗು)

ಹೌದು. ಅದು ಬೇರೆ ಯಾವುದೋ ಈ ಕೆಲಸ ಮಾಡುತ್ತದೆ. ಹೌದು. ಅದೇ. ಇದು ಸತ್ಯ, ನಾನು ತುಂಬ ಕ್ರೂರಳಾಗಲು ಬಯಸುವುದಿಲ್ಲ. ಈಗ ಮಾನವನು ಸಹಕರಿಸಬಲ್ಲ. ಅಂದರೆ, ಮಾನವನು ಒಳ್ಳೆಯ ಭಾವನೆಯಿಂದ, ತೀವ್ರ ಅಭೀಪ್ಸೆಯಿಂದ ಹಾಗೂ ತನ್ನಿಂದ ಸಾಧ್ಯವಿದ್ದಷ್ಟು ಕೆಲಸ ಮಾಡುತ್ತ, ಈ ಕಾರ್ಯಕ್ಕೆ ತನ್ನನ್ನು ಸಂಪೂರ್ಣವಾಗಿ ಒಪ್ಪಿಸಿಕೊಳ್ಳಬಲ್ಲ. ಅದಕ್ಕೇ ನಾನು ಹೇಳಿದ್ದು, ಈ ಕಾರ್ಯ ಇನ್ನು ತ್ವರಿತವಾಗಿ ಆಗುತ್ತದೆ. ಇನ್ನೂ ತ್ವರಿತವಾಗಿ ಆಗುವುದೆಂದು ನಾನು ಭಾವಿಸುತ್ತೇನೆ.

ಆದಾಗ್ಯೂ ಬಹಳ ವೇಗವಾಗಿ ಅಂದರೂ ಕೂಡ, ಇದಕ್ಕೆ ಸ್ವಲ್ಪ ಸಮಯ ಬೇಕು!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/130**

*

**ಮಾನವನ ಮೂರು ಮಜಲುಗಳು**

ನಿಮ್ನ ಮಾನವ ಕುಲವು ಮನಸ್ಸಿಯಿಂದ ಕೆಳಗೆ, ಪ್ರಾಣದ ಹಾಗೂ ಭೌತಿಕ ಶರೀರದ ಕಡೆಗೆ ಇಳಿಯುವುದು. ಸಾಮಾನ್ಯ ಮಾನವ ಕುಲವು ಕೇವಲ ಪ್ರಾಣ ಮತ್ತು ಶರೀರಗಳ ಕಡೆಗೆ ನಿಗಾ ವಹಿಸಿರುವ ಮನಸ್ಸಿನ ಪರಿಧಿಯಲ್ಲಿ ಉಳಿದುಬಿಡುವುದು. ಶ್ರೇಷ್ಠವಾದ ಮನುಕುಲವು ಆದರ್ಶ ಮಾನಸದತ್ತ ಅಥವಾ ಪರಿಶುದ್ಧ ಪರಿಕಲ್ಪನೆಯತ್ತ, ಜ್ಞಾನದ ನೇರವಾದ ಸತ್ಯ ಮತ್ತು ಅಸ್ತಿತ್ವದ ಉತ್‌ಸ್ಫೂರ್ತಿ ಸತ್ಯದತ್ತ ಏರುತ್ತ ಹೋಗುವುದು. ಸರ್ವ ಶ್ರೇಷ್ಠವಾದ ಮನುಕುಲವು ದೈವೀ ಆನಂದದ ಸ್ತರಕ್ಕೆ ಏರಿ ಅಲ್ಲಿಂದ ಮೇಲೆ ಪರಿಶುದ್ಧ ಸತ್ ಮತ್ತು ಪರಬ್ರಹ್ಮನ ಸ್ತರಕ್ಕೆ ಆರೋಹಿಸುವುದು. ಅಥವಾ ನಿಮ್ನ ಸ್ತರದ ಘಟಕಗಳಲ್ಲಿ ಆನಂದ ತುಂಬಿಸುತ್ತ, ಅವುಗಳನ್ನು ಹಾಗೂ ಮಾನವ ಸೃಷ್ಟಿಯ ಎಲ್ಲ ಘಟಕಗಳನ್ನು ಕೂಡ ದೈವತ್ವದೆತ್ತರಕ್ಕೆ ಎತ್ತರಿಸಲು ಪ್ರಯತ್ನಿಸುವುದು.

ಯಾವ ಮಾನವನು ಉನ್ನತವಾದ ದೈವೀ ಸ್ತರದಲ್ಲಿ, ಈಗ ಪ್ರಚ್ಛನ್ನವಾಗಿರುವ ಪ್ರಜ್ಞೆಯ ವಲಯದಲ್ಲಿ(ಗೋಳಾರ್ಧದಲ್ಲಿ) ನೆಲೆಗೊಂಡಿರುವನೋ, ಹಾಗೂ ಅಲ್ಲಿ ಮಧ್ಯದಲ್ಲಿ ನೆಲೆಗೊಂಡಿರುವ ಪರದೆಯನ್ನು ಹರಿದು ಹಾಕಿಬಿಡುವನೋ ಅವನೇ ನಿಜವಾದ ಅತಿಮಾನವ. ಹಂತ ಹಂತವಾಗಿ ವಿಕಸನಗೊಳ್ಳುತ್ತಿರುವ ಜಗದಲ್ಲಿ,

ಹೀಗೆ ಪ್ರಕಟವಾಗುತ್ತಿರುವ ಭಗವಂತನ ಸೃಷ್ಟಿಯಲ್ಲಿ ಕೊನೆಯವನಾಗಿದ್ದಾನೆ. ಈ ರೀತಿ ಭೌತಿಕದಿಂದಲೇ ಆತ್ಮ ಪ್ರಕಟವಾಗುವುದನ್ನೇ ನಾವು ವಿಕಾಸ ಎಂದು ಕರೆಯುತ್ತೇವೆ.

ದೈವೀ ಸತ್, ಶಕ್ತಿ, ಬೆಳಕು ಮತ್ತು ಆನಂದಗಳ ದಿವ್ಯ ಸ್ತರಕ್ಕೇರಿ, ಈ ಜಗದ ಬಾಹ್ಯ ಸತ್ತೆಯನ್ನೆಲ್ಲ ಅದರಲ್ಲಿ ಎರಕ ಹೊಯ್ಯುವುದು ಧರ್ಮದ ಅತ್ಯುನ್ನತ ಅಭೀಪ್ಸೆಯಾಗಿದೆ. ಹಾಗೂ ಇದು ಯೋಗದ ವಾಸ್ತವಿಕ ಗುರಿಯಾಗಿದೆ. ಈ ವಿಶ್ವದಲ್ಲಿ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಮಹದೋದ್ದೇಶವಾಗಿದೆ. ಆದರೆ ವಿಶ್ವಾತೀತನಾಗಿರುವ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳದೇ ಈ ಕೆಲಸ ಸಾಧ್ಯವಾಗದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/102**

*

**ಉಚ್ಚ ಮನುಕುಲ**

ಶ್ರೀ ಅರವಿಂದರು ಅಲ್ಲಿ ಮುಂಜಾನೆಯಿಂದ ಸಂಜೆಯವರೆಗೆ ಇದ್ದರು. *(24 ನವೆಂಬರ್ 1965)*

ಹೌದು, ಒಂದು ತಾಸಿಗಿಂತ ಹೆಚ್ಚಿಗೆ ನನಗೆ ಖಂಡಿತವಾಗಿ ಜೀವಂತ ದರ್ಶನಕ್ಕೆ ಲಭ್ಯವಾಗಿದ್ದರು. ಮಾನವನ ಸದ್ಯದ ಸ್ಥಿತಿಯ ಬಗೆಗೆ, ಹೊಸದಾಗಿ ಬರಲಿರುವ ಅತಿಮಾನಸ ಸೃಷ್ಟಿಯ ದೃಷ್ಟಿಯಿಂದ, ಮಾನವನ ಜೀವನದ ವಿವಿಧ ಸ್ತರಗಳ ಬಗ್ಗೆ ದರ್ಶನ ಮಾಡಿಸಿದರು. ಮತ್ತು ಅದು ಅದ್ಭುತವಾದ ರೀತಿಯಲ್ಲಿ ಸ್ಪಷ್ಟವಾಗಿತ್ತಲ್ಲದೇ ದೃಢವೂ ಜೀವಂತವೂ ಆಗಿತ್ತು. ಅಲ್ಲಿ ಮಾನವನ ಅಸ್ತಿತ್ವವು ಯಾವ ರೀತಿಯಿಂದಲೂ ಪ್ರಾಣಿ ಸ್ತರದಲಿರಲ್ಲಿಲ್ಲ, ಎಲ್ಲರಿಗೂ ಮನಸ್ಸು ಎಂಬುದಿದೆ, ಅದರ ಬೆಳವಣಿಗೆಯಾಗಿದೆ ಮತ್ತು ಅವರೆಲ್ಲರ ಜೀವನದಲ್ಲಿ ಒಂದು ರೀತಿಯ ಸಾಮರಸ್ಯ ಮೂಡಿದೆ – ಪ್ರಾಣಿಕ ಸಾಮರಸ್ಯ, ಕಲಾತ್ಮಕ ಸಾಮರಸ್ಯ, ಸಾಹಿತ್ಯಿಕ ಸಾಮರಸ್ಯ – ಬಹಳಷ್ಟು ಜನ ಅದರಲ್ಲಿ ಸಂತೃಪ್ತ ಜೀವನ ನಡೆಸುತ್ತಿದ್ದಾರೆ. ಅವರಿಗೆ ಒಂದು ತೆರನಾದ ಸಾಮರಸ್ಯ ದಕ್ಕಿದೆ, ಅದರ ಪರಿಧಿಯೊಳಗೆ ಅವರು ಸುಸಂಸ್ಕೃತವಾದ ವಾತಾವರಣದಲ್ಲಿ ಬದುಕುತ್ತಿದ್ದಾರೆ. ಅಂದರೆ, ಒಂದು ತೆರನಾದ ಸುಸಂಸ್ಕೃತವಾದ, ಪರಿಷ್ಕೃತವಾದ ಪರಿಶೋಧಿತವಾದ

ಅಭಿರುಚಿಗಳ ಜೀವನ ನಡೆಸುತ್ತಿದ್ದಾರೆ. ಈ ತೆರನಾದ ಜೀವನಕ್ಕೂ ಒಂದು ನಿರ್ದಿಷ್ಟವಾದ ಸೀಮೆಯೊಳಗೆ ಅದರದೇ ಆದ ಸೊಗಸಿದೆ. ಏನಾದರೂ ದೊಡ್ಡದಾದ ದುರಂತ ಸಂಭವಿಸದೇ ಹೋದರೆ, ಅವರು ಅಲ್ಲಿಯವರೆಗೆ ಸಂತಸದಿಂದ, ಸಂತೃಪ್ತಿಯಿಂದ ಜೀವಿಸುತ್ತಾರೆ. ಇಂಥ ಜನರು (ಅವರಿಗೊಂದು ತೀವ್ರ ಅಭಿರುಚಿ ಇರುವುದರಿಂದ ಹಾಗೂ ಅವರು ಬೌದ್ಧಿಕವಾಗಿ ಬೆಳವಣಿಗೆ ಹೊಂದಿರುವುದರಿಂದ) ಹೊಸ ಶಕ್ತಿಗಳೆಡೆಗೆ, ಹೊಸ ವಿಷಯಗಳೆಡೆಗೆ, ಹೊಸ ಜೀವನದೆಡೆಗೆ ಸುಲಭವಾಗಿ ಆಕರ್ಷಿತರಾಗುತ್ತಾರೆ, ಸೆಳೆಯಲ್ಪಡುತ್ತಾರೆ. ಉದಾಹರಣೆಗಾಗಿ, ಅಂಥವರು ಶ್ರೀ ಅರವಿಂದರ ಶಿಷ್ಯರಾಗಬಹುದು – ಮಾನಸಿಕವಾಗಿ ಹಾಗೂ ಬೌದ್ಧಿಕವಾಗಿ: ಆದರೆ ಅಂಥವರು ಭೌತಿಕವಾಗಿ ವ್ಯಾವಹಾರಿಕವಾಗಿ ಬದಲಾಗಲು ಬಯಸುವುದಿಲ್ಲ. ಒಂದು ವೇಳೆ ಅವರ ಮೇಲೆ ಅಂಥ ಒತ್ತಡ ಹೇರಿದ್ದೇ ಆದರೆ, ಮೊದಲನೆಯದಾಗಿ ಅದು ಅಪಕ್ವ, ಆನಂತರ ಅನ್ಯಾಯವಾಗುವುದಲ್ಲದೇ ಹೆಚ್ಚಿನ ಅವ್ಯವಸ್ಥೆಯನ್ನು ಹುಟ್ಟುಹಾಕುವುದು, ಅವರ ಜೀವನ ಸಂಪೂರ್ಣವಾಗಿ ಗೊಂದಲಕ್ಕೀಡಾಗಿ ಬಿಡುವುದು.

ಇದು ಅಲ್ಲಿ ತುಂಬ ಸ್ಪಷ್ಟವಾಗಿತ್ತು.

ಅಲ್ಲಿ ಕೆಲ ಜನ – ಅಪರೂಪಕ್ಕೆ ಕೆಲವರು – ಇದ್ದರು, ಅವರು ಪರಿವರ್ತನೆಗಾಗಿ ಯೋಗ್ಯವಾದ ಪ್ರಯತ್ನ ಮಾಡಲು ಸಿದ್ಧರಿದ್ದರು, ಹೊಸ ಶಕ್ತಿಯನ್ನು ತುಂಬಿಕೊಳ್ಳಲು ತಯಾರಿದ್ದರು, ಅದನ್ನು ಭೌತಿಕ–ಜೀವನಕ್ಕೆ ಅಳವಡಿಸಿಕೊಳ್ಳಲು ಸಿದ್ಧರಿರುತ್ತಾರೆ, ಅದನ್ನು ಅಭಿವ್ಯಕ್ತಗೊಳಿಸಲು ಪ್ರಯತ್ನಿಸುತ್ತಿರುತ್ತಾರೆ. ಅದೆಲ್ಲ ಸರಿ. ಇಂಥವರು ಶ್ರೀ ಅರವಿಂದರ ಯೋಗಕ್ಕೆ ಯೋಗ್ಯರಿರುತ್ತಾರೆ. ಆದರೆ ಇಂಥವರು ಕಡಿಮೆ ಸಂಖ್ಯೆಯಲ್ಲಿದ್ದಾರೆ – ಭವಿಷ್ಯದಲ್ಲಿನ ಪರಿವರ್ತನೆಗಾಗಿ ಅವಶ್ಯವೆನಿಸಿದರೆ, ಅದರಿಂದ ಗುರಿ ಮುಟ್ಟಲು ಸಹಾಯವಾಗುವುದಾದರೆ ಇಂಥ ತ್ಯಾಗ ಮನೋಭಾವ ಹೊಂದಿದವರು ಎಂಥ ಕಠಿಣವಾದ ಹಾಗೂ ಯಾತನಾಮಯವಾದ ಜೀವನಕ್ಕೂ ಸಿದ್ಧರಿರುತ್ತಾರೆ. ಆದರೆ ಅಂಥವರು ಮಾತ್ರ ಯಾವುದೇ ರೀತಿಯಿಂದಲೂ ಬೇರೆಯವರ ಮೇಲೆ ಪ್ರಭಾವ ಬೀರಲು ಯತ್ನಿಸಬಾರದು, ತಮ್ಮ ಪ್ರಯತ್ನದಲ್ಲಿ ಇನ್ನೊಬ್ಬರು ಭಾಗಿಯಾಗುವಂತೆ ಮಾಡಬಾರದು. ಅದು ಸಂಪೂರ್ಣ ಅನ್ಯಾಯ, ಬರೀ ಅನ್ಯಾಯ ಮಾತ್ರ ಅಲ್ಲ ಅದು ವಿವೇಕಹೀನ ಕೆಲಸವಾಗುತ್ತದೆ, ಏಕೆಂದರೆ ಅದು ವಿಶ್ವದಲ್ಲಿನ ಲಯವನ್ನು ಕೆಡಿಸುತ್ತದೆ, ಕನಿಷ್ಠ ಪಕ್ಷ ಬಾಹ್ಯ ಚಲನೆಯನ್ನು

ಅಸ್ತವ್ಯಸ್ತಗೊಳಿಸುತ್ತದೆ. ಅದು ಸಹಾಯ ಮಾಡುವ ಬದಲು ಹೋರಾಟವನ್ನು ಸೃಷ್ಟಿಸುತ್ತದೆ, ಕೊನೆಗೆ ಗೊಂದಲವನ್ನು ಹುಟ್ಟು ಹಾಕಿಬಿಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/24–25**

*

**ಮಧ್ಯಂತರದ ಅವಧಿ**

ಇದು ಸ್ಪಷ್ಟವಾಗಿದೆ, ಈಗಲೂ ಸಹ ಈ ಮಧ್ಯಂತರದ ಅವಧಿಯು ಬಹು ದೀರ್ಘಕಾಲದ್ದಾಗಿರಲೂಬಹುದು ಹಾಗೂ ಹೆಚ್ಚು ಯಾತನಾಮಯವಾಗಿರುವುದು (ಯಾತನಾಮಯವಾಗಿಯೇ ಇರುತ್ತದೆ), ಅದರ ಪರಿಹಾರ ರೂಪವಾಗಿ ನಮಗೆ ಗುರಿಯ ಸ್ಪಷ್ಟ ದರ್ಶನವಾಗುವುದು, ನಾವು ಸಾಧಿಸಬೇಕಾಗಿರುವ ಹಾಗೂ ಸಾಧಿಸಲಿರುವ ಗುರಿಯ ಸ್ಪಷ್ಟ ಚಿತ್ರಣ ದೊರೆಯುವುದು. ಒಂದು ರೀತಿಯ ಭರವಸೆ, ಹೌದು ನಿಶ್ಚಿತ ಭರವಸೆ ದೊರೆಯುವುದು. ಆದರೆ ಅದರಲ್ಲಿ ಎಲ್ಲ ತಪ್ಪುಗಳನ್ನು, ವಿಕೃತಿಗಳನ್ನು, ಕುರೂಪತೆಯನ್ನು ತೊಡೆದು ಹಾಕುವ ಸಾಮರ್ಥ್ಯ ಇರುತ್ತದೆ – ಆಗ ಮಾನವ ಜನಾಂಗವು ಸುಖವಾಗಿ, ಸಂತೃಪ್ತವಾಗಿ, ಬೇರೆ ಏನೂ ಬೇಕಿಲ್ಲದಂತೆ, ಮಾನವನಾಗಿದ್ದರೆ ಸಾಕು, ಮಾನವೀಯ ಸೌಂದರ್ಯ ಹಾಗೂ ಮಾನವೀಯ ಸಾಮರಸ್ಯದಿಂದ ಇರುವುದೇ ಸಾಕು ಎಂಬ ಭಾವನೆ ಹೊಂದಿರುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/26**

*

**ಮಧ್ಯಂತರದ ಜೀವಿಗಳು**

ಖಚಿತವಾಗಿ ಹೇಳಬಹುದಾದುದೇನೆಂದರೆ ಮಾನವ ಮತ್ತು ಅತಿಮಾನವನ ನಡುವೆ ಮಧ್ಯಂತರ ಜೀವಿಯೊಂದಿರಬೇಕು, ಅದೊಂದು ರೀತಿಯ ಅತಿಮಾನವನೇ, ಆದರೆ ಮಾನವನ ಗುಣ–ಸ್ವಭಾವಗಳನ್ನು ಇನ್ನೂ ಭಾಗಶಃ ಹೊಂದಿರುವಂಥವನು, ಅಂದರೆ ಬಾಹ್ಯ ನೋಟಕ್ಕೆ ಅವನು ಮಾನವನಂತೆಯೇ ಕಾಣುವ, ಪ್ರಾಣಿಕದ ಮೂಲದಿಂದ ಜನಿಸಿದ ಮಾನವ ಜೀವಿಯಂತೆಯೇ ಕಾಣುತ್ತಾನೆ. ಆದರೆ ತನ್ನ ಪ್ರಜ್ಞೆಯಯನ್ನಾತ ಸಾಕಷ್ಟು ಪರಿವರ್ತಿಸಿಕೊಂಡು ಸಾಕ್ಷಾತ್ಕಾರದಲ್ಲಿ ಹಾಗೂ ತನ್ನ ಚಟುವಟಿಕೆಗಳಲ್ಲಿ ಹೊಸ ಜನಾಂಗಕ್ಕೆ,

ಅತಿಮಾನವ ಜನಾಂಗಕ್ಕೆ ಸೇರಬಲ್ಲವನಾಗಿರುತ್ತಾನೆ – ಇಂಥ ಸಂಕುಲವನ್ನು ಮಧ್ಯಂತರದ ಸಂಕುಲವೆಂದು ಕರೆಯಬಹುದು. ಏಕೆಂದರೆ ಈ ಜೀವ ಸಂಕುಲವು ಹಳೆಯದಾದ ಪ್ರಾಣಿಕ ಪದ್ಧತಿಯನ್ನು ಬಿಟ್ಟು ಹೊಸ ಜನಾಂಗವನ್ನು ಸೃಷ್ಟಿ ಮಾಡುವ ಮಾರ್ಗೋಪಾಯಗಳನ್ನು ಕಂಡುಹಿಡಿಯುವನು ಎಂಬುದನ್ನು ನಾವು ಖಚಿತವಾಗಿ ತಿಳಿದುಕೊಳ್ಳಬಹುದು – ಅಂಥ ಮಾನವನದು ಆಧ್ಯಾತ್ಮಿಕ ಜನ್ಮವಾಗಿರುವುದು, ಅವನು ಹೊಸ ಜನಾಂಗದ ಮೂಲ ದ್ರವ್ಯವನ್ನು ಹೊಂದಿರುತ್ತಾನೆ. ಅದರಿಂದ ಅತಿಮಾನಸ ಜನಾಂಗ ಹುಟ್ಟುವುದು.

ಹೀಗಾಗಿ ಯಾರು ಈಗಲೂ ಸಹ ಮೂಲ ಹಳೆಯ ಪದ್ಧತಿಯಿಂದಲೇ ಹುಟ್ಟಿ ಬಂದಿದ್ದರೂ ಕೂಡ, ತಮ್ಮ ಸಾಧನೆಯಲ್ಲಿ ಸಿದ್ಧಿಯಲ್ಲಿ ಅತಿಮಾನಸದ ಸಾಕ್ಷಾತ್ಕಾರದ ಜೊತೆ ಕ್ರಿಯಾಶೀಲವಾದ ಹಾಗೂ ಪ್ರಜ್ಞಾಪೂರ್ವಕವಾದ ಸಂಪರ್ಕ ಹೊಂದಿದವರನ್ನು ನಾವು ಅತಿಮಾನವರೆಂದು ಕರೆಯಬಹುದು.

ಖಚಿತವಾಗಿ, ನಿಶ್ಚಿತವಾಗಿ ತೋರುವುದೇನೆಂದರೆ, ಈಗಾಗಲೇ ನಿರ್ಮಾಣಗೊಂಡಿರುವ ಮಧ್ಯಂತರ ಜಗತ್ತಿನ ಮೂಲದ್ರವ್ಯವು ಸಮೃದ್ಧವಾಗಿದೆ, ಹೆಚ್ಚು ಶಕ್ತಿಶಾಲಿಯಾಗಿದೆ, ಪ್ರಕಾಶಮಾನವಾಗಿದೆ, ಹೆಚ್ಚು ಸಹನಶೀಲವಾಗಿದೆ ಕೆಲ ವಿಶಿಷ್ಟ, ಸೂಕ್ಷ್ಮ ಆಳವಾಗಿ ಭೇದಿಸಬಲ್ಲ, ಹೊಸ ಗುಣಗಳನ್ನು ಹೊಂದಿರುವ, ಹೆಚ್ಚು ವಿಶಾಲವಾದ ಏಕತೆಯ ಸಹಜ ಸಾಮರ್ಥ್ಯ ಹೊಂದಿರುವಂಥದಾಗಿದೆ. ಅದರ ಸೂಕ್ಷ್ಮತೆಗೆ ಹಾಗೂ ಪರಿಷ್ಕರಣೆಗೆ ಅವಕಾಶ ಮಾಡಿಕೊಟ್ಟರೆ ಅದರ ಕಂಪನಗಳು ಹೆಚ್ಚು ವಿಶಾಲವಾಗಿರುವುದರಿಂದ, ಸಂಪೂರ್ಣವಾಗಿ ಅಲ್ಲದಿದ್ದರೂ, ಸ್ವಲ್ಪ ಮಟ್ಟಿಗಾದರೂ ವಿಕ್ತತೆಯ, ವಿಭಜನೆಯ ಭಾವನೆಯನ್ನು ತೊಡೆದುಹಾಕಲು ಸಮರ್ಥವಾಗಿದೆ. ಅಲ್ಲಿರುವ ಕಂಪನಗಳ ಸೂಕ್ಷ್ಮತೆಯು ವಿಶ್ವಾತ್ಮಕವಾಗಿ, ವಿಶ್ವಾತ್ಮಕ ದರ್ಶನ ಸಮರ್ಥವಾಗಿ ಸಹಜವಾಗಿ ನಿಸರ್ಗದತ್ತವಾಗಿರುವಂಥದಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/313–14**

*

**ತರಬೇತಿ ಪಡೆಯುತ್ತಿರುವ ಅತಿಮಾನವ**

ಮಾನವ ಮತ್ತು ಅತಿಮಾನವ? ನೀವು ಹೊಸ ಅತಿಮಾನವ ಜನಾಂಗದ ಕುರಿತು ಮಾತನಾಡುತ್ತಿಲ್ಲ ತಾನೇ?

ಹೌದೇ? ನಾವು ಯಾರನ್ನು ಅತಿಮಾನವ ಎಂದು ಕರೆಯುತ್ತೇವೋ, ಅಂದರೆ ಮಾನವ ಸಹಜ ರೀತಿಯಲ್ಲಿ ಹುಟ್ಟಿ, ತಾನು ಅಂಥ ಮಾನವೀಯ ರೀತಿಯಲ್ಲಿ ಬಳುವಳಿಯಾಗಿ ಪಡೆದ ಭೌತಿಕ ಸತ್ತೆಯನ್ನು ಪರಿವರ್ತಿಸಲು ಪ್ರಯತ್ನ ಪಡುತ್ತಿರುವವನ ಬಗ್ಗೆ ನೀವು ಮಾತನಾಡುತ್ತಿದ್ದೀರಾ? ಅವರ ನಡುವೆ ಏನಾದರೂ ಹಂತಗಳಿವೆಯಾ? – ಖಂಡಿತವಾಗಿಯೂ ಈ ನಡುವೆ ಅನೇಕ ಅಗಣಿತ ಭಾಹಶಃ ಅಥವಾ ಸಾಂಶಿಕ ಸಾಕ್ಷಾತ್ಕಾರಗಳಿವೆ. ಪ್ರತಿಯೊಬ್ಬರ ಸಾಮರ್ಥ್ಯಕ್ಕೆ ತಕ್ಕಂತೆ ಪರಿವರ್ತನೆಯ ಮಟ್ಟ ಬದಲಾಗುತ್ತ ಹೋಗುತ್ತದೆ, ಹಾಗೂ ಖಂಡಿತವಾಗಿ, ಫಲಪ್ರದವಾದ ಅಥವಾ ಕೆಲಸಲ ನಿಷ್ಫಲವಾಗುವಂಥ ಅನೇಕ ಪ್ರಯತ್ನಗಳು ಇದ್ದೇ ಇರುತ್ತವೆ. ಅತಿಮಾನವನ ಹಂತಕ್ಕೆ ಬರುವವರೆಗೆ ನಾವು ಇಂಥ ಅನೇಕ ಯಶಸ್ವಿ ಪ್ರಯತ್ನಗಳನ್ನು ಮಾಡಬೇಕಾಗಿರುತ್ತದೆ.

ಯಾರೆಲ್ಲ ತಮ್ಮ ಸಾಧಾರಣ ಸ್ವಭಾವವನ್ನು ಮೀರಲು ಪ್ರಯತ್ನ ಪಡುತ್ತಿದ್ದಾರೋ, ತಮ್ಮನ್ನು ದೈವೀ ಸತ್ಯದ ಸಂಪರ್ಕದಲ್ಲಿ ತಂದ ಆಳವಾದ ಅನುಭವಗಳನ್ನು ಭೌತಿಕವಾಗಿ ಸಾಕ್ಷಾತ್ಕರಿಸಿಕೊಳ್ಳಲು ಯತ್ನಿಸುತ್ತಿದ್ದಾರೋ, ಕೇವಲ ಉನ್ನತವಾದುದೆಡೆಗೆ, ವಿಶ್ವಾತೀತದೆಡೆಗೆ ಹೋಗುವ ಬದಲು ಬಾಹ್ಯದಲ್ಲಿ, ಭೌತಿಕವಾಗಿ ಸಾಕ್ಷಾತ್ಕಾರ ಪಡೆದುಕೊಳ್ಳಲು ಬಯಸುತ್ತಿದ್ದಾರೋ, ತಮ್ಮಂತರಂಗದಲ್ಲಿ ಪ್ರಜ್ಞೆಯಲ್ಲಿ ತುಸು ಬದಲಾವಣೆಯಾಗಿರುವುದನ್ನು ಕಂಡುಕೊಂಡಿದ್ದಾರೋ ಅವರೆಲ್ಲರೂ ಅತಿಮಾನವ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳೇ. ಹಾಗೂ ಅವರ ಪ್ರಯತ್ನಗಳಲ್ಲಿ ಅಗಣಿತ ವ್ಯತ್ಯಾಸಗಳಿವೆ. ಯಶಸ್ಸಿನಲ್ಲೂ ವ್ಯತ್ಯಾಸಗಳಿವೆ. ನಾವು ಸಾಮಾನ್ಯ ಜೀವನ ನಡೆಸಬಾರದು, ನಮ್ಮ ಚಲನವಲನಗಳಲ್ಲಿ ನಮ್ಮ ಕೃತಿಗಳಲ್ಲಿ, ಪ್ರತಿಕ್ರಿಯೆಗಳಲ್ಲಿ ದೈವೀ ಸತ್ಯವನ್ನು ಪ್ರಕಟಪಡಿಸಬೇಕೆಂದು ಪ್ರಯತ್ನ ಪಟ್ಟಾಗಲೇ, ನಾವು ಸಾಮಾನ್ಯ ಅಜ್ಞಾನದಿಂದಲ್ಲದೇ ದೈವೀ ಸತ್ಯದ ಮೂಲಕ ಆಳಲ್ಪಡುತ್ತಿರುತ್ತೇವೆ, ಹಾಗಾದಾಗ ನಾವೆಲ್ಲರೂ ಅತಿಮಾನವ ತರಬೇತಿ ವಿದ್ಯಾರ್ಥಿಗಳಾಗಿರುತ್ತೇವೆ. ಹಾಗೂ ಪ್ರಯತ್ನಗಳ ಯಶಸ್ಸಿನ ಪ್ರಕಾರ ಕೂಡ ನಾವು ಹೆಚ್ಚೂ ಕಡಿಮೆ ತರಬೇತಿ ಪಡೆಯುತ್ತಿರುವ ಅತಿಮಾನವರೇ, ಆ ದಾರಿಯಲ್ಲಿ ಹೆಚ್ಚೂ ಕಡಿಮೆ ಮುಂದುವರಿದವರೇ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/410**

*

ಮಾನವನೇ ಕೊನೆಯವನಲ್ಲ. ಅವನೊಬ್ಬ ಮಧ್ಯಂತರದ ಜೀವಿ ಅವನಾಚೆಗೆ ದೈವೀ ಜನಾಂಗವು, ಅತಿಮಾನವನ ಸಂಕುಲವು ಸಾಕಾರಗೊಳ್ಳಲು ಕಾಯುತ್ತಲಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/221 – ಶ್ರೀ ಅರವಿಂದರು**

*

**ಮೊಟ್ಟಮೊದಲ ಅತಿಮಾನವ ಜನಾಂಗ**

ಅತಿಮಾನವನು ಇನ್ನೂ ಲಕ್ಷಾವಧಿ ವರ್ಷಗಳಿಗಿಂತ ಮೊದಲು ಬರುವುದಿಲ್ಲವೆಂದು ನಾನು ಘೋಷಿಸುತ್ತೇನೆಂದು ಅನೇಕರು ಭಾವಿಸಿದ್ದಾರೆಂದು ತೋರುತ್ತದೆ. ಈ ಅನಿಸಿಕೆಯನ್ನು ನಾನಿಲ್ಲಿ ಸರಿಪಡಿಸ ಬಯಸುತ್ತೇನೆ. ಶ್ರೀ ಅರವಿಂದರು ಹೇಳಿದ್ದಾರೆ, ಪ್ರಜ್ಞಾ ಸ್ತರದ ಬೆಳವಣಿಗೆಯಾದಂತೆ ಈ ಅತಿಮಾನವನ ಬರುವಿಕೆಯ ಕೆಲಸ ಜೋರಾಗಿ ಆಗುತ್ತದೆ, ತೀವ್ರವಾಗುತ್ತದೆ. ಆತ್ಮ (ಚೈತನ್ಯ) ಅಥವಾ ಅತಿಮಾನಸವು ಮಧ್ಯ ಪ್ರವೇಶಿಸಿದರೆ, ಆ ಗತಿ ಮತ್ತೂ ತೀವ್ರವಾಗುತ್ತದೆ. ಆದ್ದರಿಂದ, ಕೆಲ ನೂರು ವರ್ಷಗಳಲ್ಲಿ ಮೊದಲ ಅತಿಮಾನಸ ಜನಾಂಗ ಕಾಣಿಸಿಕೊಳ್ಳಬಹುದೆಂದು ಅಂದಾಜಿಸಬಹುದು.

ಆದರೆ ಇದು ಕೂಡ ಕೆಲವರಿಗೆ ಅಸ್ಪಷ್ಟವಾಗಿದೆ. ಏಕೆಂದರೆ ಶ್ರೀ ಅರವಿಂದರು ನೀಡಿದ್ದ ಭರವಸೆಗೆ ಇದು ವಿರುದ್ಧವಾಗಿದೆ ಎಂದು ಅವರು ಭಾವಿಸುತ್ತಾರೆ; ಎಂಬ ಅತಿಮಾನಸದ ಪರಿವರ್ತನೆಯ ಕಾಲ ಈಗ ಸನ್ನಿಹಿತವಾಗಿದೆ ಎಂದು ಅವರು ಹೇಳಿದ್ದರು. ಅದರೆ ನಾವು ಅತಿಮಾನಸದ ಪರಿವರ್ತನೆ ಮತ್ತು ಹೊಸ ಜನಾಂಗದ ಕಾಣಿಸಿಕೊಳ್ಳುವಿಕೆ ಎರಡೂ ಒಂದೇ ಎಂಬ ಗೊಂದಲಕ್ಕೆ ಒಳಗಾಗಬಾರದು.

ಶ್ರೀ ಅರವಿಂದರು ಏನು ಭರವಸೆ ನೀಡಿದ್ದರೋ ಹಾಗೂ ಇಲ್ಲಿರುವ ನಮಗೆಲ್ಲ ಸ್ವಾಭಾವಿಕವಾಗಿ ಯಾವ ಆಸಕ್ತಿ ಇದೆಯೋ ಅದೇನೆಂದರೆ ನಮ್ಮ ಸದ್ಯದ ಮಾನವ ಕುಲದ ಕೆಲ ಶ್ರೇಷ್ಠ, ಗಣ್ಯ ವ್ಯಕ್ತಿಗಳು ಆಧ್ಯಾತ್ಮೀಕರಣಕ್ಕೆ ಅವಶ್ಯವಾಗಿರುವ ನಿಯಮಗಳಲ್ಲಿ ಕೆಲವನ್ನಾದರೂ ಪೂರೈಸುತ್ತಾರೆ, ಅವರು ಅತಿಮಾನಸದ ಶಕ್ತಿ, ಚೈತನ್ಯ ಹಾಗೂ ಬೆಳಕು ಇವುಗಳ ಸಹಾಯದಿಂದ ತಮ್ಮ

ಶರೀರ ಪರಿವರ್ತನೆಯನ್ನು ಸಾಧಿಸುತ್ತಾರೆ, ಅಂಥವರು ಸಾಮಾನ್ಯ ಪ್ರಾಣಿಕ–ಮಾನವರಾಗಿ ಉಳಿಯದೇ ಅತಿಮಾನವರಾಗಿ ಬದಲಾಗುತ್ತಾರೆ.

ಇಂಥ ಭರವಸೆಯನ್ನು ಶ್ರೀ ಅರವಿಂದರು ಏಕೆ ನೀಡಿದ್ದರೆಂದರೆ ಈ ಭೂಮಿಯಲ್ಲಿ ಅತಿಮಾನಸವು ಪ್ರಕಟವಾಗುವ ಹಂತದಲ್ಲಿದ್ದುದನ್ನು ಅವರು ತಿಳಿದಿದ್ದರು. ವಾಸ್ತವವಾಗಿ ಅದು ಅವರಲ್ಲಿ ಬಹು ಪೂರ್ವದಲ್ಲಿಯೇ ಇಳಿದು ಬಂದಿತ್ತು. ಅವರಿಗದು ತಿಳಿದಿತ್ತು, ಮತ್ತು ಅದರ ಪರಿಣಾಮಗಳನ್ನು ಕೂಡ ಅವರು ಬಲ್ಲವರಾಗಿದ್ದರು. ಮತ್ತು ಅದೀಗ ವಿಶ್ವಾತ್ಮಕವಾಗಿ ಪ್ರಕಟವಾಗಿದೆ. ಆದ್ದರಿಂದ ಪರಿವರ್ತನೆಯ ಸಾಧ್ಯತೆ ಈಗ ಇನ್ನೂ ಅಧಿಕವಾಗಿದೆ ಎಂದು ಸಾಮಾನ್ಯವಾಗಿ ಹೇಳಬಲ್ಲೆ. ಯಾರು ಅದರ ನಿಯಮಗಳನ್ನು ಪೂರೈಸುವರೋ ಅವರು ಅದಾಗಲೇ ಪರಿವರ್ತನೆಯ ಪಥದಲ್ಲಿ ಸಾಗಿದ್ದಾರೆ ಎಂಬ ವಿಷಯದ ಬಗ್ಗೆ ಸಂದೇಹ ಉಳಿದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/322**

*

**ಅತಿಮಾನಸ ರೀತಿಯಲ್ಲಿ ಆ ಸೃಷ್ಟಿಯಾದ ಅತಿಮಾನಸದ ವ್ಯಕ್ತಿ**

ಇದನ್ನು ಅವರು ನಮ್ಮಿಂದ ಬಯಸಿದ್ದರು, ಅತಿಮಾನವನೆಂದರೆ, ಅವನು ಸದ್ಯದಲ್ಲಿರುವ ಮಾನವ ಹಾಗೂ ಅತಿಮಾನಸಿಕವಾದ ರೀತಿಯಲ್ಲಿ ಸೃಷ್ಟಿಯಾದ ಅತಿಮಾನವ ಇವರಿಬ್ಬರ ನಡುವಿನ ಹಂತದ ಅತಿಮಾನವ ಎಂಬುದೇ ಅವರ ಕಲ್ಪನೆಯಾಗಿತ್ತು. ಅಂದರೆ, ಅವನು ಪ್ರಾಣಿಕತೆಯಿಂದ ಭಿನ್ನವಾಗಿದ್ದು ಪ್ರಾಣಿ ಸಹಜ ಬಯಕೆಗಳಿಂದ ಮುಕ್ತವಾಗಿರುವ ವ್ಯಕ್ತಿಯಾಗಿರುತ್ತಾರೆ ಎಂಬುದು ಅವರ ಕಲ್ಪನೆಯಾಗಿತ್ತು.

ಈಗ ನಾವು, ಸಾಮಾನ್ಯ ಪ್ರಾಣಿಕ ಸಹಜವಾದ ರೀತಿಯಲ್ಲಿ ಜನಿಸಿದವರಾಗಿದ್ದೇವೆ, ಆದ್ದರಿಂದ ನಮ್ಮನ್ನು ನಾವು ರೂಪಾಂತರ ಮಾಡಿಕೊಂಡರೂ ಕೂಡ, ಪ್ರಾಣಿ, ಮೂಲದ ಅಂಶ ತುಸುವಾದರೂ ಉಳಿದೇ ಉಳಿಯುತ್ತದೆ. ಅವರ ಕಲ್ಪನೆಯ ಪ್ರಕಾರ, ಅತಿಮಾನಸ ವ್ಯಕ್ತಿಯು ಸಾಮಾನ್ಯ ಮಾನವೀಯ ಅಥವಾ ಪ್ರಾಣಿಕ ರೀತಿಯಲ್ಲಿ ಸೃಷ್ಟಿಯಾಗಿರದೇ, ನೇರವಾಗಿ,

ನಮಗೀಗ ಸದ್ಯಕ್ಕೆ ತುಂಬ ರಹಸ್ಯ ಅಥವಾ ಅಲೌಕಿಕವೆಂಬಂತೆ ತೋರುವ ರೀತಿಯಲ್ಲಿ ಮೂಡಿಬರುತ್ತಾನೆ, ಅತಿಮಾನಸದ ಶಕ್ತಿಗಳ ಹಾಗೂ ವಸ್ತುಗಳ ನೇರ ನಿರ್ವಹಣೆಯಿಂದಾಗಿ ಶರೀರವು ಅತಿಮಾನಸಿಕವಾಗಿಯೇ ರೂಪುಗೊಳ್ಳುತ್ತದೆ, ಅಲ್ಲಿ ಸಾಮಾನ್ಯ ಪ್ರಾಣಿಕ ಸಹಜ ರೀತಿಯಲ್ಲಿ ಶರೀರ ನಿರ್ಮಾಣವಾಗುವುದಿಲ್ಲ.

ಆದ್ದರಿಂದ ಮಧ್ಯಂತರದ ಜೀವಿಗಳ ಅವಶ್ಯಕವಿದೆ ಎಂಬುದು ಸ್ಪಷ್ಟವಾಗಿದೆ. ಈ ಮಧ್ಯಂತರದ ಜೀವಿಗಳು ಅತಿಮಾನಸದ ಜೀವಿಗಳನ್ನು ರೂಪಿಸುವ ಅಥವಾ ಸೃಷ್ಟಿಸುವ ವಿಧಾನವನ್ನು ಕಂಡುಹಿಡಿಯುತ್ತಾರೆ. ಶ್ರೀ ಅರವಿಂದರು ಇದನ್ನು ಬರೆಯುವಾಗ ನಾವೇನು ಮಾಡಬೇಕೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಂಡಿದ್ದರು.

ನನಗನಿಸುತ್ತದೆ, ನನಗೆ ಖಚಿತವಾಗಿ ಗೊತ್ತಿದೆ, ಶ್ರೀ ಅರವಿಂದರು ನಮ್ಮಿಂದ ಏನನ್ನು ನಿರೀಕ್ಷಿಸುತ್ತಿದ್ದಾರೋ ಅದು ಖಂಡಿತವಾಗಿಯೂ ಆಗಿಯೇ ತೀರುವುದು – ಇದೀಗ ಅದು ಕೇವಲ ನಂಬಿಕೆ ಅಥವಾ ಭರವಸೆಯಾಗಿ ಉಳಿದಿಲ್ಲ. ಅದು ನಿಶ್ಚಿತವಾಗಿದೆ. ಆದರೆ ಇಷ್ಟೇ. ಈ ಸಾಕ್ಷಾತ್ಕಾರಕ್ಕಾಗಿ ಬೇಕಾಗುವ ಸಮಯ ಅಥವಾ ಕಾಲವು ದೀರ್ಘವಾಗಿರಬಹುದು ಅಥವಾ ಹ್ರಸ್ವವಾಗಿರಬಹುದು, ಇದು ನಮ್ಮ ಪ್ರಯತ್ನದ ಮೇಲೆ ಅವಲಂಬಿಸಿದೆ, ನಮ್ಮ ಧಾರಣೆ, ನಮ್ಮ ಸದಾಶಯಗಳ ಮೇಲೆ ಅವಲಂಬಿಸಿದೆ, ಹಾಗೂ ಈ ಕೆಲಸಕ್ಕೆ ನೀಡುವ ಪ್ರಾಮುಖ್ಯತೆಯ ಮೇಲೆ ನಿರ್ಭರವಾಗಿದೆ. ಯಾರು ಗಮನವಿಟ್ಟು ನೋಡುವುದಿಲ್ಲವೋ ಅವರಿಗೆ ವಸ್ತು ಸ್ಥಿತಿಯಲ್ಲಿನ ಬದಲಾವಣೆ ಕಾಣುವುದಿಲ್ಲ, ಮೊದಲು ಹೇಗಿತ್ತೋ ಈಗಲೂ ಹಾಗೆಯೇ ಇದೆ ಎಂದು ತೋರುತ್ತದೆ. ಆದರೆ ಯಾರಿಗೆ ಹೇಗೆ ಗಮನಿಸಬೇಕೆಂಬುದು ಗೊತ್ತಿದೆಯೋ ಅವರು ಮೇಲಿನ ತೋರಿಕೆಯಿಂದ ಮೋಸ ಹೋಗುವುದಿಲ್ಲ, ಎಲ್ಲವೂ ಪರಿವರ್ತನೆ ಹೊಂದುತ್ತಿರುವುದರ ಅರಿವಾಗುತ್ತದೆ.

ಪ್ರತಿಯೊಬ್ಬರೂ ತಮ್ಮ ತಮ್ಮ ಶಕ್ತಿಗನುಗುಣವಾಗಿ ಸರಿಯಾಗಿ ಕೆಲಸ ಮಾಡಿದರೆ, ಮೊದಲ ಗೋಚರ ಫಲಿತಾಂಶ ಎಲ್ಲರಿಗೂ ಗೊತ್ತಾಗುವುದಕ್ಕೆ ಬಹುಶಃ ಬಹಳ ಸಮಯವೇನೂ ಬೇಕಾಗುವುದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/191–92 – ಶ್ರೀಮಾತೆ**

*

# ಅತಿಮಾನಸ ಚೈತನ್ಯದ ಅವತರಣ

– ಅನುವಾದ: ಪುಟ್ಟು ಕುಲಕರ್ಣಿ

**ಚಿನ್ಮಯದ ಬೆಳಗು: ಜನೇವರಿ 1, 1969**

*(ಅವತರಣಗೊಂಡ ಆ ಅಧಿಮಾನಸ ಚೈತನ್ಯವನ್ನು ಅಭಿಲಕ್ಷಿಸಿ ಅದರ ಬಗೆಗೆ ಶ್ರೀಮಾತೆಯವರು ನೀಡಿದ ವಿವರ)*

ರಾತ್ರಿ ಇರುವಾಗಲೇ ಅದು ನಿಧಾನ, ನಿಧಾನವಾಗಿಯೇ ಅವತರಣಗೊಂಡಿದೆ. ಈ ಉಷಾ ಅವಧಿಯಲ್ಲಿ ನಾನು ಎಚ್ಚೆತ್ತುಕೊಳ್ಳುತ್ತಲೇ, ಅಲ್ಲಿ ದರ್ಶನಕ್ಕೆ ಇದ್ದದ್ದು ಆ ಚಿನ್ಮಯದ ತೇಜದ ದಿವ್ಯ ಬೆಳಗು. ಅಪೂರ್ವವಾದ ಉಷೆಯ ತೋಷ. ಮತ್ತೆ ಇಡೀ ವಾತಾವರಣವೇ ಅತ್ಯಂತ ಪ್ರಕಾಶಮಯದಿಂದ ತೇಜಗೊಂಡಿತ್ತು. ಇಡೀ ಶರೀರವೇ ಅದರಿಂದ ಅನುಭೂತಿಗೊಂಡು, "ಓ... ಇದು ಸತ್ಯ ಘಟನೆ.. ಸತ್ಯಸ್ಯ ಸತ್ಯ ಘಟನೆ, ನಿಜವಾಗಿಯೂ ನೂತನ. ಒಂದು ಸ್ವರ್ಣಮಯ ಪ್ರಕಾಶವು ಅಲ್ಲಿತ್ತು; ಅದು ಅತ್ಯಂತ ಪಾರದರ್ಶಕವಾಗಿತ್ತು. ಜೊತೆಗೆ ಸರ್ವ ಹಿತೈಷಿಯಾಗಿತ್ತು (Benevolent) ನಿಶ್ಚಿತವಾಗಿಯೂ ಈ ಸರ್ವ ಹಿತೈಷಿತನವು ಸೌಷಮ್ಯದ ನಿಶ್ಚಿತತೆಯನ್ನು ಹೊಂದಿತ್ತು; ಇದು ನಿಜವಾಗಿಯೂ ನೂತನ ಘಟನೆ.

ಅಲ್ಲಿಯೇ ನೀವು ಇದ್ದಿರಿ. ಆ ಸಂದರ್ಭದಲ್ಲಿ ನಾನು "ನವ ಯುಗ", "ನವ ಯುಗ" ("ನವ ವರ್ಷ") [Bonne Anne] ಎಂದು ಸಮುದಾಯಕ್ಕೆ ಹೇಳುವ ಮೂಲಕ ಅವರಿಗೂ ಅದನ್ನು ತಲುಪಿಸಿದ್ದೇನೆ. ಮತ್ತೆ ಇದೇ ರೀತಿಯಲ್ಲಿಯೇ ನಾನು ಈ ದಿನದ ಮುಂಜಾವನ್ನು ಅನುಭವಿಸಿದ್ದೇನೆ. ಹೀಗಾಗಿಯೇ ನಾನು ಸ್ವಯಂಪ್ರೇರಿತಳಾಗಿ 'ಹೊಸ ಯುಗ' 'ಹೊಸ ಯುಗ' ಎಂದು ಉದ್ಗರಿಸಿದ್ದೇನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/148**

*

ಮೊದಲನೇಯದಾಗಿ, ಅಲ್ಲೊಂದು ವಿಶೇಷ ಘಟನೆ ಜರುಗಿತ್ತು...

ಅದು ಮೇಲ್ನೋಟಕ್ಕೆ ಪೂರ್ಣತಃ ಲೌಕಿಕದಂತೆಯೇ ಇತ್ತು. ಆದರೆ ಸಂಪೂರ್ಣ ಬಾಹ್ಯವಾಗಿರಲಿಲ್ಲ, ದರ್ಶನಕ್ಕೆ ಲಭ್ಯವಿರಲಿಲ್ಲ. ಆದರೂ ಬಾಹ್ಯ

ವಾತಾವರಣದಲ್ಲಿಯೇ ಅದು ಇದ್ದಂತೆ ಕಾಣುತ್ತಿತ್ತು. ಕಾಂತಿಮಯದಿಂದ ಬೆಳಗುತ್ತಿತ್ತು. ಅದರಲ್ಲೂ ಸ್ವರ್ಣ ವರ್ಣದ ಪ್ರಕಾಶದಿಂದ ಕಂಗೊಳಿಸುತ್ತಿತ್ತು. ಅದು ಅತ್ಯಂತ ಸಾಮರ್ಥ್ಯಪೂರ್ಣ ಹಾಗೂ ಶಕ್ತಿದಾಯಕವಾಗಿತ್ತು. ಹಾಗಿದ್ದರೂ, ಅದರ ಗುಣ ವಿಶೇಷವು ಮಂದಸ್ಮಿತದಿಂದ ಕೂಡಿರುವ ಹಿತೈಷಿತನದಲ್ಲಿತ್ತು. ಪ್ರಶಾಂತವಾದ ತೋಷದಿಂದ ಕೂಡಿದ್ದು ಮತ್ತೆ ಅದೇ ತೋಷದಲ್ಲಿಯೇ ಉದಿತಗೊಂಡ ಬೆಳಕಾಗಿತ್ತು. ಪ್ರಕಟಗೊಂಡಿತ್ತು. ಇದು 'ನವ ಯುಗ"ದ ಆರಂಭದಂತೆಯೇ ಇತ್ತು. ಒಂದು ನಿತ್ಯ ನೂತನವಾದ ಕಾಣಿಕೆಯಂತೆ ಇತ್ತು. ಇದು ನನಗೆ ತುಂಬ ಆಶ್ಚರ್ಯವನ್ನು ಮೂಡಿಸಿತು. ಕನಿಷ್ಠ ಮೂರು ತಾಸುಗಳ ಕಾಲ ಈ ತೆರನಾದ ಅನುಭೂತಿ ನನಗೆ ದೊರೆತಿದೆ. ತದನಂತರದಲ್ಲಿ ಅದು ನಿಧಾನವಾಗಿ ದೃಷ್ಟಿಗೆ ಅಗೋಚರವಾಯಿತು.

ಆಮೇಲೆ ಅದರೊಡನೆ ನಾನು ದೀರ್ಘ ಸಮರ್ಪಕವನ್ನು ಹೊಂದಲಿಲ್ಲ. ಆಗ ಏನು ಘಟಿಸಿತು ಎನ್ನುವದು ನನಗರಿವಿಲ್ಲ. ಆದರೆ ಆ ಘಟನೆಯ ಬಗೆಗೆ ಒಂದೆರಡು ಮಾತುಗಳನ್ನು ಮಾತ್ರ ಹೇಳಬಲ್ಲೆ. ಜೊತೆಗೆ ಮತ್ತೆ ಇಬ್ಬರು–ಮೂವರೊಡನೆ ಈ ವಿಷಯವಾಗಿ ಚರ್ಚೆ ಮಾಡಿದ್ದೇನೆ; ಅವರೂ ಸಹಿತ ಇದೇ ತೆರನಾದ ಅನುಭೂತಿಯನ್ನು ಹೊಂದಿದ್ದರು. ಹೀಗಾಗಿಯೇ ನಾನು ಇದನ್ನು ಲೌಕಿಕದ ಒಂದು ಸಹಜ ಘಟನೆ ಎಂದು ಕರೆಯಲು ಇಚ್ಛಿಸಿದ್ದೇನೆ. ಅವರಿಗೂ ಸಹಿತ ಅದರ ಅನುಭೂತಿಯಾಗಿದೆ; ಇದೇ ತೆರನಾಗಿ, ಅಂದರೆ ಒಂದು ರೀತಿಯ ಅಮೂರ್ತ ತೋಷದ ಅನುಭೂತಿಯಾಗಿದೆ. ಆದರ ಇದು ಮಿತೃತ್ವದ ಹಂತದ ಸಂತೋಷ. ಇದು ಶಕ್ತಿದಾಯಕವಾದದ್ದು. ಮತ್ತೆ.. ಮತ್ತೆ.. ಓ! ಅತ್ಯಂತ ಮಾರ್ದವದ, ಮಂದಸ್ಮಿತದ ಹಾಗೂ ಸಂಪೂರ್ಣ ಲೋಕ ಹಿತೈಷಿಯಾಗಿತ್ತು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/149**

*

**ಒಂದು ಮಹಾನ್ ಹಿತೈಷಿ ವ್ಯಕ್ತಿತ್ವ**

ಈ ರೀತಿಯಾದ ಒಂದು ಮಹಾನ್ ಹಿತೈಷಿ ವ್ಯಕ್ತಿತ್ವವು... ಹೌದು.. ನಿಜವಾಗಿಯೂ ಹಿತೈಷಿ ವ್ಯಕ್ತಿತ್ವ. ಇದು ನನ್ನ ಅಭಿಮತವಾಗಿದೆ. ನಾನು ಏನು

ಹೇಳಬಯಸುತ್ತಿದ್ದೇನೆ ಎಂದರೆ, ಆ ವ್ಯಕ್ತಿತ್ವದ ಎದುರು ಈ ಭೂಮಿಯೊಂದು ಕೇವಲ ಚಿಕ್ಕ ಚೆಂಡಿನಂತೆ. (ಅದನ್ನೂ ದೈಹಿಕ ಹಾವಭಾವದಿಂದಲೇ, ಅಂದರೆ ಒಂದು ಚೆಂಡನ್ನು ಕೈಯಲ್ಲಿ ಹಿಡಿದುಕೊಂಡು ತೋರಿಸುತ್ತ).. ಇರುತ್ತದೆ. ಆ ಮಹಾನ್ ವ್ಯಕ್ತಿತ್ವವು ಖಚಿತದಲಿ ಲೋಕ ಹಿತೈಷಿಯಾಗಿರುತ್ತದೆ. ಅದಕ್ಕಾಗಿಯೇ ಅದು ಇಲ್ಲಿ ಆಗಮಿಸಿರುವದು. (ಈ ರೀತಿ ಹೇಳುತ್ತಲೇ ಶ್ರೀಮಾತೆಯು ತನ್ನ ಅಂಗೈಯಲ್ಲಿ ಇದ್ದ ಚೆಂಡನ್ನು ಅವಕಾಶದಲ್ಲಿ ಮೇಲೆತ್ತಿ ತೋರಿಸುತ್ತ).. ಇದು ವ್ಯಕ್ತಿಯ ದಿವ್ಯತ್ವವನ್ನು ಪ್ರಕಟಿಸುತ್ತದೆ. (ಅದು ಇದೇ ರೀತಿಯಲ್ಲಿ ಇರುತ್ತದೆಯೇ ಎನ್ನುವದನ್ನು ನಾನರಿಯೆ.) ಈ ದಿವ್ಯತ್ವದ ಮೂಲಕವೇ ಅದು ನಮಗೆ ಸಹಾಯ ಮಾಡಲು ಆಗಮಿಸುತ್ತದೆ. ಅಷ್ಟೇ ಬಲಶಾಲಿಯಾಗಿಯೂ ಮತ್ತೆ ಅದೇ ವೇಳೆಗೆ ಕೋಮಲವೂ ಆಗಿರುತ್ತದೆ. ಆದ್ದರಿಂದ ಎಲ್ಲವೂ ಸ್ವೀಕಾರಾರ್ಹವಾಗಿರುತ್ತದೆ, ತುಂಬ ಅಪ್ಯಾಯಮಾನವಾಗಿರುತ್ತದೆ.

ಇದು ಸಂಪೂರ್ಣವಾಗಿ ಬಾಹ್ಯ ವಾತಾವರಣದಲ್ಲಿಯೇ ಇದೆ; ಈ ದೇಹವು ಅದನ್ನು ಎಲ್ಲೆಡೆಯಲ್ಲಿಯೂ ಅನುಭೂತಿಗೊಳಿಸುತ್ತದೆ, ಎಲ್ಲ ಕಡೆಗೂ (ಎಂದು ಹೇಳುತ್ತಲೇ ತಮ್ಮ ಮುಖವನ್ನು, ಹಾಗೂ ಕರಗಳನ್ನು ಸ್ಪರ್ಶಿಸುತ್ತ)... ಹೌದು, ಇದು ಎಲ್ಲೆಡೆಯಲ್ಲಿಯೂ ಇದೆ..

ಇದು ಯುಗದ(ವರ್ಷದ) ಆರಂಭವಾಗಿತ್ತು. ಯಾರೋ ಓರ್ವ ವ್ಯಕ್ತಿಯು ಈ ಎಲ್ಲ ಅಂದರೆ ದೈವದ ಎಲ್ಲ ಆಯಾಮಗಳನ್ನೂ ಹೊಂದಿ, ಆಗಮಿಸಿ "ನವಯುಗ" (Bonne annee) ಎಂದು ತನ್ನ ಸರ್ವಶಕ್ತಿಯನ್ನು ಬಳಸಿಕೊಂಡು "ನವಯುಗ"ವನ್ನು ನಿರ್ಮಿಸಲು ಆಗಮಿಸುತ್ತಾನೆ. – ಹೌದು, ಇದು ನಿಖರವಾಗಿಯೂ ಇದೇ ರೀತಿಯಲ್ಲಿ ಇರುವದು...

ಅದು ದೀಪ್ತಿಮಯವಾಗಿತ್ತು, ಮಂದಸ್ಮಿತದಲ್ಲಿ ತನ್ನೆಲ್ಲ ಅಂತಃಶಕ್ತಿಯಿಂದಲೇ ಲೋಕ ಹಿತೈಷಿಯಾಗಿತ್ತು; ಇಲ್ಲಿ ಗಮನಿಸಬೇಕಾಗಿರುವದೇನೆಂದರೆ – ಸಾಮಾನ್ಯವಾಗಿ ಮಾನವನಲ್ಲಿ ಈ ಲೋಕ ಹಿತೈಷಿತನವು ಸಶಕ್ತವಾಗಿರುವದಿಲ್ಲ. ಹೀಗಾಗಿ ಅದು ಒಂದು ಹೋರಾಟದ ಹಂತದಲ್ಲಿ ಇರುವದಿಲ್ಲ. ಅದು ಯುದ್ಧದೋಪಾದಿಯೂ ಇರುವದಿಲ್ಲ; ಆ ತೆರನಾದ ಯಾವ ಗುರುತುಗಳೂ ಅದಕ್ಕೆ ಇರುವದಿಲ್ಲ! ಲೋಕ ಹಿತೈಷಿತನವು ತನ್ನಷ್ಟಕ್ಕೆ ತಾನೆ

ಬಾಧ್ಯಸ್ಥಗೊಳಿಸಿಕೊಂಡಿರುತ್ತದೆ [ಎಂದು ಹೇಳುತ್ತಲೇ ಮಾತೆಯು ತಾವು ಕುಳಿತ ಖುರ್ಚಿಯ ಕೈಗಳ ಮೇಲೆ ತಮ್ಮ ಹಸ್ತಗಳನ್ನು ಊರುತ್ತ] ಹೇಳಿದರು.

ಅದು ಸಂಪೂರ್ಣವಾಗಿ ನೂತನವಾಗಿದ್ದರಿಂದಲೇ ನನಗೆ ತುಂಬ ಆಸಕ್ತಿ ಮೂಡಿಸಿತು. ಜೊತೆ ಜೊತೆಗೆ ಅದು ಅಷ್ಟೇ ಸುನಿಶ್ಚಿತವಾಗಿತ್ತು! ಎಷ್ಟೊಂದು ಸುನಿಶ್ಚಿತವೆಂದರೆ (ತಮ್ಮ ಕೈಗಳನ್ನು ಖುರ್ಚಿಯ ಕೈಗಳ ಮೇಲೆ ಊರಿ), ಭೌತಿಕ ಪ್ರಜ್ಞೆಯು (Physical Conscious) ಸಾಮಾನ್ಯವಾಗಿಯೇ 'ಅನ್ಯ'ವೆಂದು ಭಾವಿಸಿರುವಂತೆಯೇ ಸುನಿಶ್ಚಿತವಾಗಿದ್ದಿತು. ಅದಕ್ಕಾಗಿಯೇ ಅದು ಅಂತರಾತ್ಮನ ಮೂಲಕ ಸಂವಹನಗೊಳ್ಳದೇ, ಚೈತ್ಯಾತ್ಮನ ಮೂಲಕ ಸಂವಹನಗೊಳ್ಳದೇ, ನೇರವಾಗಿ ಭೌತಿಕ ದೇಹದ ಮೇಲೆ–ನೇರವಾಗಿ ಆಗಮಿಸಿತು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/149–50**

*

**ದೈವಾಂಶ ಸಂಭೂತ ಮಾನವ ಜೀವಿ**

ನನ್ನ ಅನುಭವದ ಪ್ರಕಾರ ಅದು (ಇಲ್ಲಿ) ಪ್ರವೇಶ ಮಾಡುತ್ತಲೇ ಸಾಕಾರಗೊಂಡಿದೆ, ತನ್ನನ್ನು ತಾನೇ ಅಭಿವ್ಯಕ್ತಗೊಳಿಸಿಕೊಳ್ಳಲು ತುಡಿಯುತ್ತಿದೆ... ಇಲ್ಲಿ ಪ್ರವೇಶಿಸಿ ತನ್ನನ್ನು ತಾನೇ ಅಭಿವ್ಯಕ್ತಿಗೊಳಿಸಿಕೊಳ್ಳಲು – ಅದೂ ಆ ದೇಹಗಳ ಮೂಲಕ ಆಗಮಿಸುತ್ತದೆ. ಆಗ ಎಲ್ಲ ದೇಹಗಳೂ ಉನ್ಮನೀ ಮನೋಚೈತನ್ಯದ (Supramental) ದೇಹಗಳಾಗುತ್ತವೆ.

ಇಲ್ಲವೇ... ಬಹುತೇಕವಾಗಿ.. ಆ ವ್ಯಕ್ತಿಯು ಅತಿಮಾನವ(superman) ನಾಗಿರುತ್ತಾನೆ. ಇದು ನನಗೆ ಅರಿಯದ ವಿಷಯ. ಅವೆರಡರ ಮಧ್ಯದ ಸ್ಥಿತಿಯೂ ಇರಬಹುದು, ಆದರೆ ಬಹುತೇಕವಾಗಿ ಅತಿಮಾನವನಂತೆ; ಸಂಪೂರ್ಣ ಮಾನವೀಯತೆಯಿಂದ, ಆದರೆ ದೇವಾಂಶಗಳನ್ನು ಹೊಂದಿರುವ ಮಾನವನಾಗಿರುವನು. ಈ ವಿಷಯದ ಬಗೆಗೆ ನಾನು ಖಚಿತವಾಗಿ ಹೇಳಬಲ್ಲೆ.

ಯಾವುದೇ ದೌರ್ಬಲ್ಯಗಳು ಇರದ, ಯಾವುದೇ ಛಾಯೆಯೂ ಇರದ ಮಾನವನು ಅವನಾಗಿದ್ದಾನೆ. ಅದು ಕೇವಲ ಪ್ರಕಾಶಮಯ ಸ್ಥಿತಿ – ಸರ್ವಸ್ವವೂ ಪ್ರಕಾಶಮಯವಾಗಿದ್ದು, ಮಂದಸ್ಮಿತದಿಂದ ಕೂಡಿದ್ದು – ಅದೇ ಸಮಯಕ್ಕೆ

ಮಾಧುರ್ಯದಿಂದಲೂ ಕಂಗೊಳಿಸುತ್ತದೆ. ಹೌದು, ಅವನು ಅತಿಮಾನವನೇ ಹೌದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/151**

*

ಇದು ಅತಿಮಾನವನ ಚೈತ್ಯವು ಅವತರಣಗೊಂಡ ಸಂಗತಿಯಾಗಿದೆ. ಈ ವಿಷಯದ ಬಗೆಗೆ ನಾನು ತದನಂತರದಲ್ಲಿ ಖಾತ್ರಿ ಪಡಿಸಿಕೊಂಡಿದ್ದೇನೆ. ಈ ವಿಷಯವಾಗಿ ಸಂಪೂರ್ಣ ಭರವಸೆ ಹೊಂದಿದ್ದೇನೆ.

ಅದು ಜನೇವರಿ ಮೊದಲನೆ ದಿನ ಮಧ್ಯರಾತ್ರಿಯ ಸಮಯ. ನಾನು ಆ ದಿನ ಎರಡು ಘಂಟೆಗೆ ಎಚ್ಚರಗೊಂಡಿದ್ದೆ. ಅಲ್ಲಿ ಸಂಪೂರ್ಣವಾಗಿ ಪ್ರಜ್ಞೆಯು (ಚೈತ್ಯವು) ಆವರಿಸಿಕೊಂಡಿತ್ತು. ಅದು ಸುನಿಶ್ಚಿತ ಸಂಗತಿಯಾಗಿತ್ತು. ಮತ್ತೆ ನೂತನವೂ ಆಗಿದ್ದಿತು. ಏಕೆಂದರೆ ಇದುವರೆಗೂ ನಾನು ಅಂತಹ ಅನುಭವವನ್ನು ಹೊಂದಿಲ್ಲ. ಅದು ಎಲ್ಲೆಲ್ಲಿಯೂ ನಿಶ್ಚಲವಾಗಿ ಹಾಜರಿದ್ದು, ಕನಿಷ್ಠ ಎರಡು–ಮೂರು ತಾಸುಗಳ ಕಾಲ ಇತ್ತು. ಆಮೇಲೆ ಅದು ಅಲ್ಲಿಂದ ನಿಧಾನವಾಗಿ ಚೆದುರಿ, ತನ್ನನ್ನು ಸ್ವೀಕರಿಸಲು ನಿರೀಕ್ಷಿಸುತ್ತಿರುವ ವ್ಯಕ್ತಿಗಳನ್ನು ಅರಸಿಕೊಂಡು ಸಾಗಿತು. ಅದು ಅತಿಮಾನವನ ಚೈತನ್ಯವಾಗಿತ್ತು ಎಂದು ನನಗೆ ಸಂಪೂರ್ಣ ವಿಶ್ವಾಸವಿದೆ. ಹೀಗಾಗಿಯೇ ಮಾನವನ ಮತ್ತು ಅತಿಮಾನಸ ಜೀವಿಯ ಮಧ್ಯದ ಸ್ಥಿತಿಯಲ್ಲಿರುವ ಹಂತವಾಗಿತ್ತು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/153**

*

**ಲೌಕಿಕ ಪರಾಮರ್ಶೆಯ ವ್ಯಕ್ತಿ ಅಥವಾ ಮಾರ್ಗದರ್ಶಿ**

ಆ ಪ್ರಜ್ಞೆಯ ಅಂತರ್ಗತದಲ್ಲಿ ಅದು ಸ್ಥಿತಗೊಂಡಿತ್ತು. – ಅದು ಅತ್ಯಂತ ಅಪೂರ್ವವಾದ ವಸ್ತು–ವಿಷಯವಾಗಿತ್ತು. ಅದು ಆ ದೇಹಕ್ಕೆ ಕೆಲವೊಂದು ಪಾಠಗಳನ್ನು ಹೇಳುತ್ತಿದೆ. ಏನನ್ನು ಮಾಡಬೇಕೆಂದು ಕಲಿಸಿಕೊಡುತ್ತದೆ. ಅದು ಹೊಂದಿರಬೇಕಾದ ದೃಷ್ಟಿಕೋನವನ್ನು ತೋರಿಸಿಕೊಡುತ್ತದೆ. ಅದು ಪ್ರತಿಕ್ರಿಯೆ ರೀತಿಯನ್ನು ತೋರಿಸುತ್ತದೆ. – ನಾನು ಈಗಾಗಲೇ ಹಲವಾರು ಬಾರಿ

ಹೇಳಿರುವಂತೆ, ಇದರ ರೂಪಾಂತರದ ಪ್ರಕ್ರಿಯೆಯನ್ನು ಅರಸುವದು ತುಂಬ ಕಠಿಣತಮ ಕಾರ್ಯವಾಗಿದೆ. ಏಕೆಂದರೆ ಅಲ್ಲಿ ಅದರ ಸೂಚನೆಗಳನ್ನು–ಸಂಕೇತಗಳನ್ನು ಕೊಡುವವರಾರೂ ಇರುವದಿಲ್ಲ; ಅದು ಸರಿ, ಅದು ಸರಿಯಾದ ರೀತಿ. ಅದು ಪ್ರತ್ಯುತ್ತರದ ಮೂಲಕ ಬಂದಂತಿತ್ತು. ಅದು ನೇರವಾಗಿ ದೇಹಕ್ಕೇನೇ "ಈ ದೃಷ್ಟಿಕೋನವನ್ನು ಸ್ವೀಕರಿಸು, ಇದೇ ಪಥದಲ್ಲಿ ಇದನ್ನು ಕಾರ್ಯಗತಗೊಳಿಸು, ಹೌದು ಅದೇ ಪಥದಲ್ಲಿ ಕಾರ್ಯಗತಗೊಳಿಸು" ಎಂದು ಹೇಳಲು ಅವತರಣಗೊಂಡಿದೆ. ಈ ಮೂಲಕವಾಗಿ ಶರೀರವು ಸಂಪೂರ್ಣ ತೃಪ್ತವಾದ ನಂತರ, ಅಲ್ಲಿ ಮುಂದೆಯೂ ತಪ್ಪುಗಳು ಘಟಿಸಲು ಸಾಧ್ಯವಿರದ ಹಾಗೆ ಪರಿಪೂರ್ಣವಾಗಿ ಖಾತ್ರಿಗೊಳಿಸಲ್ಪಡುತ್ತದೆ.

ಇದೊಂದು ತುಂಬ ಆಶ್ಚರ್ಯಜನಕ ಸಂಗತಿಯಾಗಿದೆ. ಅದು ಬಂದದ್ದು "ಪರಾಮರ್ಶೆಯ ವ್ಯಕ್ತಿ"ಯಾಗಿ, ಪೂರ್ಣ ಲೌಕಿಕವಾಗಿ ಹೆಚ್ಚಾಗಿ ವ್ಯಾವಹಾರಿಕ ಎನ್ನುವಂತೆ ಅನ್ವಯಿಕವಾಗಿತ್ತು. ಈ ಜೀವಿಯನ್ನು ನಿರಾಕರಿಸಬಹುದು, ಆದರೆ ಆ ರೀತಿ ಮಾಡದೇ ಕಡ್ಡಾಯವಾಗಿ ಸ್ವೀಕರಿಸಲೇಬೇಕಾಗಿದೆ, ಇದೊಂದು ಸಾಮಾನ್ಯ ನಿಯಮವಾಗಬೇಕು. ಅಷ್ಟೇ.." ಇವೆಲ್ಲವೂ ಆಂತರ್ಯದಲ್ಲಿ ಘಟಿಸುವ ಸಂಚಲನಗಳಾಗಿವೆ. ಮತ್ತೆ ಇದು ಬಹುತೇಕವಾಗಿ ಭೌತಿಕವಾಗಿ, ಕೆಲವೊಂದು ಕಂಪನಗಳೊಂದಿಗೆ ತಿಳಿಸುತ್ತಿರುವುದೇನೆಂದರೆ, "ಇದನ್ನು ನೀನು ಪ್ರೋತ್ಸಾಹಿಸಲೇಬೇಕು, ಗೌರವಿಸಲೇಬೇಕು", ಹಾಗೂ ಇನ್ನುಳಿದ ಸಂಗತಿಗಳ ಬಗೆಗೆ, "ಅದು ಇಲ್ಲಿ ಸಂಪರ್ಕಗೊಳ್ಳಲೇಬೇಕು" ಮತ್ತೂ ಕೆಲವು ವಿಷಯಗಳ ಬಗೆಗೆ "ಇದು" ಸಂಪೂರ್ಣವಾಗಿ ಅವುಗಳನ್ನು ತ್ಯಜಿಸಲೇಬೇಕಾಗಿದೆ ಎಂದು ಈ ರೀತಿಯ ಸಂಕೇತಗಳನ್ನು ಸಾರುತ್ತಿದೆ. ಉದಾಹರಣೆಗೆ, ಈ ಪ್ರಜ್ಞೆಯು (ಚೈತನ್ಯವು) ಅದು ಹೇಗೆ ವೈಯಕ್ತಿಕವಾಗಿ, ನನ್ನಿಂದ (ದೇಹದಿಂದ) ಹೊರಗೇ ಇದ್ದು ಕರ್ಮ ಪ್ರವೃತ್ತಿಗೆ ತೊಡಗಿಸಿಕೊಳ್ಳುತ್ತದೆ? ಇದು ನನಗೆ ಈಗಲೂ ಆಶ್ಚರ್ಯದ ವಿಷಯವಾಗಿದೆ.

ಇದೇ ರೀತಿಯಲ್ಲಿಯೇ, ಕೇವಲ ಯಾರು ತಮ್ಮನ್ನು ತಾವು ಅಂತರ್ನಿರೀಕ್ಷಣೆಯನ್ನು ಮಾಡಿಕೊಳ್ಳುವದನ್ನು ಅರಿತಿರುವದಿಲ್ಲವೋ, ಅವರಿಗೆ ಇದು ಗಮನಕ್ಕೆ ಬರುವದು ಕಡಿಮೆ. ಇದು ಇಷ್ಟೇ ಇದರ ವಿಷಯ. ಇದು

ಮೋಡದ (ಅರಳೆಯ) ಮಧ್ಯದಿಂದಲೇ ಹಾದು ಹಾದು ಹೋಗುವಂತೆ – ಅಂದರೆ ಅದು ಸಾಧಾರಣವಾಗಿ ಚಲಿಸುವ ರೀತಿಯೇ ಹಾಗಿರುವದರಿಂದ – ಚಲಿಸುತ್ತದೆ. ಒಂದು ವೇಳೆ ಹಾಗಿಲ್ಲದೇ ಇರುವ ಸಂದರ್ಭವಿರುವಲ್ಲಿ ಮಾತ್ರ, ಅದು ತನ್ನ ಸ್ವಂತಿಕೆಯಲ್ಲಿ ಉಳಿದುಬಿಡುತ್ತದೆ.

*– ನಾನು ಇಲ್ಲಿ ಹೇಳಬೇಕೆಂದಿರುವ ಸಂಗತಿ ಎಂದರೆ, ಈ ಪ್ರಜ್ಞೆಯು ದೇಹದ ಮೇಲೆ ಯಾವ ರೀತಿಯಲ್ಲಿ ಕ್ರಿಯೆಯನ್ನು ರೂಪಿಸುತ್ತದೆಯೋ ಅದೇ ತೆರನಾಗಿ ಅದು ಮನಸ್ಸಿನ ಮೇಲೆ ಏಕೆ ರೂಪಿಸುವದಿಲ್ಲ?*

ಓರ್ವನು ಸೂಕ್ತವಾಗಿ ಯೋಚನೆ ಮಾಡಲು ಅಣಿಗೊಳ್ಳುವಂತೆ ಸಹಕರಿಸುತ್ತದೆ ಎನ್ನುವದು ನನ್ನ ಅಭಿಮತವಿದೆ.

ಮೂಲಭೂತವಾಗಿ ಇದು ಮಾರ್ಗದರ್ಶಿಯಾಗಿದೆ... ಹೌದು... ಇದು ಮಾರ್ಗದರ್ಶಿ...

ಜನೇವರಿ ಪ್ರಥಮ ದಿನದಂದು ಯಾರು ಇದರ ಸಂಪರ್ಕಕ್ಕೆ ಬಂದಿದ್ದಾರೋ ಅವರೆಲ್ಲರಲ್ಲಿಯೂ ಒಂದು ಗಮನಾರ್ಹ ಬದಲಾವಣೆ ಕಂಡುಬಂದಿದೆ. ಅದರಲ್ಲಿ ವಿಶೇಷವಾಗಿ ಅವರ ಜೀವನದಲ್ಲಿ ಹಾಗೂ ಅವರ ಚಿಂತನಗಳಲ್ಲಿ ಒಂದು ನಿಖರತೆ ಮತ್ತು ಸುನಿಶ್ಚತತೆ (precision and certitude) ಬಂದಿರುವದನ್ನು ಮೇಲ್ನೋಟಕ್ಕೆ ಕಾಣಬಹುದು.

ಅದು ಇಲ್ಲಿ ಇರುತ್ತದೆ ಎಂದು (ಶ್ರೀಮಾತೆಯವರು ಹೃದಯದ ಭಾಗವನ್ನು ನೋಡುತ್ತ) ಹೇಳಿದರು. ಇದು ತುಂಬ ಕುತೂಹಲದ ಸಂಗತಿ, ಯಾರು ಯಾರು ಇದರ ಸಂಪರ್ಕಕ್ಕೆ ಬಂದಿದ್ದಾರೋ ಮತ್ತು ಆ ಮೂಲಕ ಯಾರು ಯಾರು ನನ್ನ ಸಮೀಪಕ್ಕೆ ಬರುತ್ತಾರೋ, ಅವರೆಲ್ಲರೊಡನೆಯೂ ಸಂಪರ್ಕ ಹೊಂದುವದಕ್ಕೆ ನಾನು ಜವಾಬ್ದಾರಿಯಾಗಿದ್ದೇನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/154, 156 – ಶ್ರೀಮಾತೆ**

*

ಮಾನವನ ವಿಶೇಷತೆ ಇರುವದು ಅವನು ಈಗ ಏನಿದ್ದಾನೆ ಎನ್ನುವದರಲ್ಲಿ ಇಲ್ಲ. ಅವನು ಏನನ್ನು ಸಾಧ್ಯಗೊಳಿಸಿಕೊಳ್ಳಲಿದ್ದಾನೆ ಎನ್ನುವದನ್ನು ಅವಲಂಬಿಸಿದೆ. ಆ ದಿವ್ಯ ಕುಸುರಿಗಾರ(ದೇವಶಿಲ್ಪಿಯು)ನು ಈ ಅತಿಮಾನವತತ್ವ(Supermanhood)ವನ್ನು ರೂಪಣೆಗೊಳಿಸುವ ಸಲುವಾಗಿ ಇರುವ ಒಂದು ಜೀವ–ಚೈತನ್ಯಯುಕ್ತ ರಹಸ್ಯ ಕಾರ್ಯಾಗಾರದ ಶ್ರಮದೊಂದಿಗೆ ಅತ್ಯಂತ ನಿಕಟವಾದ ಸ್ಥಳದಂತೆ ಇರುವದೇ ಮಾನವನ ವೈಭವದ ಪ್ರಭಾವಳಿಯಾಗಿದೆ. ಇದೇ ಸ್ಥಳದಲ್ಲಿಯೇ ಆ ದೈವೀ–ಕುಶಲಗಾರನು ಈ ಅತಿಮಾನವ–ತತ್ವವನ್ನು ರೂಪಿಸುತ್ತಾನೆ.

ಆದರೆ ಅವನು ಭವ್ಯತೆಗಿಂತ ಇನ್ನೂ ಉನ್ನತೋನ್ನತ ಭವ್ಯತೆಯನ್ನು ಮಾತ್ರ ಆಯ್ಕೆ ಮಾಡಿಕೊಳ್ಳುತ್ತಾನೆ. ಅದು ಈ ರೀತಿಯಲ್ಲಿ ಇರುತ್ತದೆ. ಆದರೆ ಮುಖ್ಯವಾಗಿ ಇದು ಅಧೋಲೋಕದ (ಕೆಳ ಸ್ತರದ) ಸೃಷ್ಟಿಯಂತೆ ಇರುವದಿಲ್ಲ. ಅವನ ದಿವ್ಯ–ಬದಲಾವಣೆಯನ್ನು ಕೆಲ ಅಂಶಗಳಲ್ಲಿ ಪ್ರಜ್ಞಾವಂತ ಶಿಲ್ಪಿಯಂತೆಯೇ ಅದಕ್ಕೆ ಸಮ್ಮತಿ ಸೂಚಿಸಿರುತ್ತಾನೆ. ಅವನ ಈ ಮುಕ್ತ ಸ್ವೀಕೃತಿ, ಅವನ ಈ ಪಾವಿತ್ರ್ಯಮಯದ (Conserated) ಸಂಕಲ್ಪವು ಮತ್ತು ಅವನ ಈ ರೀತಿಯ ಸಹಭಾಗಿತ್ವಗಳೆಲ್ಲವೂ ಅವಶ್ಯಕವಾಗಿದ್ದು, ಅವು ಅವನ ದೇಹದಲ್ಲಿಯೇ ಸ್ಥಿತವಾಗಿದ್ದು, ಬಹುತೇಕವಾಗಿ ಆ ವೈಭವವನ್ನು ಅವತರಣಗೊಳಿಸಿಕೊಂಡು, ಅದು ಅವನನ್ನು ಸ್ಥಾನಾಂತರಗೊಳಿಸುತ್ತಿದೆ.

ಅವನ ಅಭೀಪ್ಸೆಯು ಈ ಭೂಮಿಯ ಕರೆಯೇ ಆಗಿದ್ದು ಅದು ಆ ಅತಿಮಾನಸದ ಸೃಷ್ಟಿಕರ್ತನನ್ನು ಆಹ್ವಾನಿಸುವದಾಗಿದೆ. ಒಂದು ವೇಳೆ ಭೂಮಿಯು ಈ ರೀತಿಯ ಕರೆಯಿತ್ತು ಮತ್ತು ಇದಕ್ಕೆ ಆ 'ಪರಮನು' ಉತ್ತರಿಸಿದಲ್ಲಿ, ಆ ಒಂದು ಘಳಿಗೆಯು – ಆಗಲೂ – ಒಂದು ಅತ್ಯಪೂರ್ವವಾದ ಮತ್ತು ವೈಭವದಿಂದ ಕೂಡಿದ ರೂಪಾಂತರವಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/160 – ಶ್ರೀ ಅರವಿಂದರು**

*

**ಬದಲಾವಣೆಯು ಘಟಿಸಲ್ಪಟ್ಟಿದೆ**

ಮನಸ್ಸು ರೂಪಿಸಿದ್ದ ಪ್ರಾಚೀನ ಭಾಗವೊಂದು ಹೀಗಿದೆ, "ಅಲ್ಲಿ ಊರ್ಧ್ವದಲ್ಲಿ ಇರುವ ವಸ್ತು–ವಿಷಯಗಳೆಲ್ಲವೂ ಸರ್ವೋತ್ತಮ ಸೂಕ್ತವಾಗಿವೆ. ಅಲ್ಲಿ ನೀನು ಎಲ್ಲ ಅನುಭವಗಳನ್ನೂ ಹೊಂದಬಹುದು. ಅಲ್ಲಿರುವ ಸರ್ವಸ್ವವೂ ಕಾಂತಿಮಯ–ವಾಗಿರುವದರಿಂದ ಮತ್ತು ಪ್ರಭಾವಪೂರ್ಣವಾಗಿ ಅತ್ಯಾಕರ್ಷಕವಾಗಿದೆ; ಇಲ್ಲಿ ಬೇರೇನನ್ನೂ ಮಾಡುವಂತಿಲ್ಲ." ಮತ್ತೆ ಇದು ಈಗಾಗಲೇ ಉದ್ಭವಗೊಂಡಿರುವದು. ಇನ್ನೊಂದು ಸಂಗತಿ ಎಂದರೆ, ಈ ನಿರ್ಣಾಯಕ ಜಗತ್ತಿನಲ್ಲಿ ಮತ್ತೆ ಜನ್ಮಗೊಳ್ಳುವದು...

(ಮೌನ)

ಸಾಮಾನ್ಯವಾಗಿ, ನಿಜವಾಗಿಯೂ ಸ್ಥಾಪಿಸಲ್ಪಡಬೇಕಾದ ವಸ್ತು–ವಿಷಯಕ್ಕೆ, ಅದಕ್ಕೆ ಅದರದೇ ಆದ ನಿಗದಿತ ಅವಧಿಯೊಂದು ಇರುತ್ತದೆ. ಇದೊಂದು ಅವಿರತವಾಗಿ ಮುಂದುವರೆದುಕೊಂಡು ಬಂದಿರುವ ಹೋರಾಟವೂ ಹೌದು. ಸರ್ವ ದಿಶೆಯಿಂದಲೂ, ಸರ್ವ ಸ್ತರದಲ್ಲಿಯೂ ವಿಷಯದ ಬಹಿರಂಗದಲ್ಲಿ, ಪ್ರಕಟಪಡಿಸುತ್ತಿರುವದೇನೆಂದರೆ, – "ಯಾವುದೂ ಬದಲಾವಣೆಯಾಗಿಲ್ಲ", ಎನ್ನುವ ವಿಷಯವೇ ಆಗಿದೆ. ಆದರೆ ಇದು ನಿಜವಾದ ಸಂಗತಿ ಅಲ್ಲ. ಇದು ಸತ್ಯ ಸಂಗತಿಯೂ ಆಗಿಲ್ಲ. ಏಕೆಂದರೆ ಈ ದೇಹಕ್ಕೆ ಇದು ಸತ್ಯವಲ್ಲವೆನ್ನುವದು ತಿಳಿಯುತ್ತದೆ. ಮತ್ತೆ, ಹೀಗಾಗಿ ಅದು ಮತ್ತೆ ಅರಿತುಕೊಳ್ಳುತ್ತದೆ, ಆ ಅರಿತುಕೊಳ್ಳುವಿಕೆಯ ಅಭಿಪ್ರಾಯ ಯಾವ ರೀತಿಯಲ್ಲಿ ಇರುತ್ತದೆಂದರೆ, – ಇದೀಗ ನಾನು ಕಾಣುತ್ತಿದ್ದೇನೆ, ಅವರ (ಶ್ರೀ ಅರವಿಂದರ) ಪಂಚತ್ವ(departion)ವನ್ನು ಜೊತೆಗೆ ಅವರು ಕೈಕೊಂಡ ಕಾರ್ಯಗಳನ್ನೂ ನಾನು ಕಾಣುತ್ತೇನೆ. ಇವು ತುಂಬ ಅಪರಿಮೇಯವೂ (Immense) ಆಗಿವೆ. ಈ ವಿಷಯ ನಿಮಗೂ ಗೊತ್ತಿದೆ. ಇದು ಸೂಕ್ಷ್ಮ ಭೌತಿಕ ವ್ಯವಸ್ಥೆಯಲ್ಲಿ ಚಿರಂತನವಾಗಿದೆ. ಇದು ಯಾವ ಪ್ರಮಾಣದಲ್ಲಿ ಇದೆ ಎಂದರೆ, ಅತ್ಯಗಾಧ ಪ್ರಮಾಣದಲ್ಲಿ ಸಹಾಯ ಮಾಡುವಂತಿದೆ. ಮಾಡಿದೆ! ಯಾವ ಪ್ರಮಾಣದಲ್ಲಿ ಎಂದರೆ (ಶ್ರೀಮಾತೆಯವರು ಜಡತ್ವವನ್ನು ಮೃದುಗೊಳಿಸುವ ಹಾಗೆ ಆಂಗಿಕಾಭಿನಯ ತೋರುತ್ತ) – ಅವರು ಈ ರೀತಿಯಲ್ಲಿಯೇ ವಸ್ತು–

ವಿಷಯಗಳನ್ನು ರೂಪಿಸಲು ಸಹಕಾರಿಯಾಗಿದ್ದಾರೆ. ಆ ಮೂಲಕ ಈ ಭೌತಿಕ ವ್ಯವಸ್ಥೆಯ ರಚನೆಯನ್ನು ಬದಲಾಯಿಸುವಲ್ಲಿ ತುಂಬ ತುಂಬ ಸಹಾಯ ಮಾಡುತ್ತಿದ್ದಾರೆ.

ಇನ್ನುಳಿದವರು ಅನುಭವಿಸಿರುವ (ಅನುಭಾವಿಸಿರುವ) ಆ ಎಲ್ಲ ಘಟನೆಗಳೂ ಸಹಿತ, ಆ ಊರ್ಧ್ವ ಲೋಕಗಳ ಜೊತೆಗೆ ಸಂಪರ್ಕ ಸಾಧಿಸುವದನ್ನೇ ಹೇಳುತ್ತಿವೆ. ಅದೇ ಸಮಯಕ್ಕೆ ಇಲ್ಲಿರುವ ಭೌತಿಕ ವ್ಯವಸ್ಥೆಯನ್ನು ಅದು ಇದ್ದಂತೆಯೇ ಇರಲು ಬಿಟ್ಟುಬಿಡುವದನ್ನು ಹೇಳುತ್ತಿವೆ. (ಸೃಷ್ಟಿಯ ಆದಿಮೂಲದಿಂದ ಶ್ರೀ ಅರವಿಂದರ ಪಂಚತ್ವದ ತನಕವೂ ನಾನು ಅಲ್ಲಿ ಉದಿತಗೊಂಡಿರುವ ಜಾಗೃತಿಯಲ್ಲಿ ಜೀವಿಸಿದ್ದೇನೆ (ನಾನು ಇನ್ನೂ ಎಷ್ಟು ಅಂತಾ ಇದನ್ನು ಇಟ್ಟುಕೊಳ್ಳಲಿ?). ಇದು ಪ್ರತಿಯೊಬ್ಬರಿಗೂ ಅನುಭವಕ್ಕೆ ಬರುತ್ತದೆ. ಪ್ರತಿಯೊಬ್ಬರೂ ಅದನ್ನು ಅರಿತುಕೊಳ್ಳಲು ಸಾಧ್ಯವೂ ಇದೆ. (ಅವರು ಖಚಿತವಾಗಿಯೂ ಅದನ್ನು ಹೊಂದಿಯೇ ಹೊಂದುತ್ತಾರೆ). ಆದರೆ ಮತ್ತೆ ಮರಳಿ ಯಾವಾಗ ಈ ದೇಹಕ್ಕೆ ಬಂದಾಗ,.. ಅದು ಪುರಾತನ ಶಾಸನಗಳಲ್ಲಿ ನಿರೂಪಿಸಲ್ಪಟ್ಟಿರುವ ಹಾಗೆಯೇ ದಾರುಣ(formidable)ದಂತೆ ಸರ್ವವೂ ಮನಸ್ಸಿನಿಂದಲೇ ನಿಯಂತ್ರಿಸಲ್ಪಡುತ್ತದೆ.

ಹೀಗಾಗಿ ಈ ಎಲ್ಲ ವರ್ಷಗಳಲ್ಲಿಯೂ ಸಿದ್ಧತೆಗೊಳ್ಳುತ್ತ, ಸಿದ್ಧತೆಗೊಳ್ಳುತ್ತಲೇ, – ಈ ಸ್ವಂತಿಕೆಯಿಂದ ಮುಕ್ತವಾಗುತ್ತ ಮತ್ತು ಮತ್ತೂ ಸಿದ್ಧಗೊಳ್ಳುತ್ತಲೇ – ಇತ್ತೀಚಿನ ಕೆಲ ದಿನಗಳಲ್ಲಿ... ಇದು... ಓ! ಈ ದೇಹವು ಭೌತಿಕವಾಗಿಯೇ ಬದಲಾವಣೆಗಳನ್ನು ಗ್ರಹಿಸುತ್ತಲೇ–ಗುರುತಿಸುತ್ತಲೇ ಬಂದಿದೆ.

ಇದನ್ನು ಅನುಷ್ಠಾನಗೊಳಿಸಲೇಬೇಕಾಗಿದೆ ಎನ್ನುವ ಹೇಳಿಕೆಯಂತೆ, ಅದೂ ವಿವರ–ವಿವರವಾಗಿಯೇ ಪ್ರತ್ಯಕ್ಷಾನುಭಾವಕ್ಕೆ ಬಂದಿದೆ. ಆದರೆ ಈ ಬದಲಾವಣೆ ಖಂಡಿತ ಘಟಿಸಿದೆ. ಹೌದು, ಹೌದು, ಬದಲಾವಣೆಯು ಘಟಿಸಿದೆ.. ಇವೆಲ್ಲವುಗಳ ಅರ್ಥವೆಂದರೆ, – ಈ ಭೌತಿಕ (ಲೌಕಿಕ) ಸ್ಥಿತಿಗಳು ಘಟಿಸುತ್ತಿದ್ದಲ್ಲಿ, ಅದರ ಮೂಲಕವೇ ನಿಶ್ಚಿತಗೊಳಿಸಲ್ಪಡುತ್ತಿದ್ದಲ್ಲಿ, ಈ ಒಂದು ಸಂದರ್ಭದಲ್ಲಿ ಯಾರಿಗೆ ಆ ಊರ್ಧ್ವ ಲೋಕಗಳಲ್ಲಿನ ಅನುಭವವಿದೆಯೋ, ಅವನು ಈ ಜಗತ್ತನ್ನು ಮುನ್ನಡೆಸಬಲ್ಲ ಎನ್ನುವ ಚಿಂತನವಿದೆ. ಇದರ ಜೊತೆಗೆ ಈ ಲೌಕಿಕ ಜಗತ್ತನ್ನು ಪರಿತ್ಯಜಿಸುವ ಮೂಲಕ, ಯಾರೇ ಆಗಲಿ ಆ ಋತದಲ್ಲಿಯೇ (ಈ ಎಲ್ಲ

ಸಿದ್ಧಾಂತಗಳ ಮತ್ತು ವಿಶ್ವಾಸಗಳಿಗೆ ಆಧಾರವಾಗಿರುವಲ್ಲಿ) ವಾಸಿಸಲು ಇಚ್ಛಿಸುತ್ತಾರೆಯೋ, ಹಾಗಾದ ನಂತರದಲ್ಲಿ ಈ ಎಲ್ಲ ಘಟನೆಗಳೂ ಮುಂಚಿನ ಸ್ವರೂಪದಲ್ಲಿ ಉಳಿಯುವದಿಲ್ಲ. ಈ ಭೌತಿಕ ವ್ಯವಸ್ಥೆಯು ಆ ಊರ್ಧ್ವದಿಂದ ಆಗಮಿಸುತ್ತಿರುವ ಪ್ರಕಾಶವನ್ನು ಸ್ವೀಕರಿಸಲು, ಆ ನೈಜ–ಚೇತನವನ್ನು ಸ್ವೀಕರಿಸಲು ಮತ್ತು ಆ ಪರಮವನ್ನು ಹೊಂದಲು ಸಮರ್ಥವಾಗಿರುತ್ತದೆ. ಜೊತೆಗೆ ಅದೇ ರೀತಿಯಲ್ಲಿ ಪ್ರಾದುರ್ಭೂತಗೊಳಿಸುತ್ತದೆ (Manifesting).

ಆದರೆ ಇದೆಲ್ಲವೂ ಅಷ್ಟೊಂದು ಸರಳವಾದ ವಿಷಯವಲ್ಲ. ಇದು ತಿತಿಕ್ಷು ಹಂತದ ಸಹನಶೀಲತೆಯನ್ನು (Endurance) ಹೊಂದಬೇಕೆಂದು ಕರೆಕೊಡುತ್ತಿದೆ. ಆದರೆ ಒಂದು ದಿನ ಇವೆಲ್ಲವೂ ಅತೀ ಸಹಜವಾದ–ನೈಸರ್ಗಿಕವಾಗಿಯೇ–ಗಟಿಸುವ ಕಾಲ ಬಂದೇಬರುವದು. ಅದಕ್ಕಾಗಿಯೇ ಮಾಡಲೇಬೇಕಾದ ಕಾರ್ಯವೆಂದರೆ, “ನಮ್ಮ ಹೃದಯದ ದ್ವಾರವನ್ನು ಸದಾ ತೆರೆದಿಟ್ಟುಕೊಂಡಿರಬೇಕಾಗಿದೆ”. ಅಷ್ಟೇ ಮುಖ್ಯ ವಿಷಯ. ಹೌದು ಇದು ಇಷ್ಟೇ ಇರುವ ಮುಖ್ಯ ವಿಷಯವಾಗಿದೆ. ಇನ್ನು ನಾವು ಇಲ್ಲಿಂದ ಮುಂದೆ ಸಾಗುವಾ...

**– ಶ್ರೀಮಾತೆ: ಭಕ್ತನೋರ್ವನೊಡನೆ ಸಂದರ್ಶನ, ಮಾರ್ಚ 14, 1970**

*

ಮನೋಚೇತನದ ಸಂಪರ್ಕದೊಡನೆ ಜ್ಞಾನ ವಿಕಸನದ ನಿರಂತರವಾದ ಪ್ರಗತಿಯ ಮೂಲಕವಾಗಿ, ಈ ದೇಹವು ಸಮರ್ಥವಾಗಿ, ಪ್ರಾಣಿ ಸದೃಶ ಜೀವನದಿಂದ ಮಾನವ–ಜೀವಕ್ಕೆ ಪರಿವರ್ತನಗೊಂಡಿದೆ; ಇದೀಗ ಈ ಮಾನವ ಸ್ವರೂಪದಿಂದ ತನ್ನಲ್ಲಿಯೇ ಮತ್ತೂ ಮತ್ತೂ ವಿಕಸನವಾಗಿ, ಆ ತದುತ್ತರದ ದಿವ್ಯಮಾನವ ಸ್ವರೂಪಕ್ಕೆ ಅಥವಾ ಅತಿಮಾನವ ಸ್ವರೂಪಕ್ಕೆ ಪ್ರಗತಿಗೊಳ್ಳಬೇಕಾಗಿದೆ. ಅವನು ಕಡ್ಡಾಯವಾಗಿ ಈ ಭೌತಿಕ ಕಾಯದ ಸ್ವರೂಪವನ್ನು ಮತ್ತೂ ಪ್ರಗತಿ ಹಂತಕ್ಕೆ ಒಯ್ಯಬೇಕಾಗಿದೆ. ಅಥವಾ ಈ ದೇಹವು ಮತ್ತೂ ಮತ್ತೂ ಉನ್ನತೋನ್ನತದ ಆ ಅತಿಮನೋಚೇತನದ ಕಾಂತಿಯನ್ನು ಧರಿಸಿಕೊಳ್ಳುವಲ್ಲಿ ಸಮರ್ಥವಾಗಬೇಕಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/504**

ಈ ಅತಿಮಾನವನೆಂದರೆ ಓರ್ವ ಮಾನವನು ತನ್ನದೇ ವಲಯದ ನೈಸರ್ಗಿಕ ಖಮಧ್ಯ (ಝೆನಿತ್) ಏರಿ, ತಲುಪಿದ ಮಾನವನಂತೂ ಖಂಡಿತ ಅಲ್ಲ; ಅಥವಾ ಆ ತದುತ್ತರದಲ್ಲಿ – ಪರಮೋಚ್ಚ ಹಂತದಲ್ಲಿ ಇರುವ ಉದಾತತ್ತೆಯ, ಜ್ಞಾನದ, ಬಲದ, ಬುದ್ಧಿಮತ್ತೆಯ, ಆಶಯದ, ಗುಣ ಸ್ವಭಾವದ, ಪ್ರತಿಭೆಯ, ಕ್ರಿಯಾತ್ಮಕ ಶಕ್ತಿಯ, ಸಂತ ಸ್ವಭಾವದ, ಪ್ರೇಮ ಮತ್ತು ಪರಿಶುದ್ಧತೆಯ ಅಥವಾ ಪರಿಪೂರ್ಣತೆಯ ಮಾನವೀಯ ಹಂತವೂ ಆಗಿರುವದಿಲ್ಲ.

ಈ ಅತಿಮಾನಸ ಎನ್ನುವದು ಇವೆಲ್ಲವುಗಳಿಗಿಂತ ಆಚೆಯಾಚೆಯೇ ಇದ್ದು, ಅಂದರೆ ಮನೋಮಯ ಪ್ರಭಾವದ ಮಾನವನಿಗಿಂತ ಮತ್ತು ಅವನ ಸೀಮಿತತನಕ್ಕಿಂತ ಆಚೆಯೇ ಇರುತ್ತಾನೆ. ಇದು ಮಾನವ ಸ್ವಭಾವಕ್ಕೆ ಸೂಕ್ತವಗಿರುವ ಆ ಅಧಿಚೇತನಕ್ಕಿಂತಲೂ ಮಹೋನ್ನತವಾದ ಚೈತನ್ಯವಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/158 – ಶ್ರೀ ಅರವಿಂದರು**

*

**ಈ ವಿಜಯವು ಸ್ವಯಂಸಾಧಿತಗೊಂಡಿದೆ**

ಸ್ವಾಭಾವಿಕವಾಗಿಯೇ, ಯಾವುದು ಪ್ರತಿಷ್ಠಾಪಿಸಲ್ಪಟ್ಟು, ತನ್ನಷ್ಟಕ್ಕೆ ತಾನೇ ಗುರುತರವಾಗಿ ಪ್ರತಿಪಾದಿತಗೊಳ್ಳುತ್ತಿದೆಯೋ, ಮತ್ತು ಆ ಮೂಲಕ ಅದೇ ರೀತಿಯಲ್ಲಿ ಅತ್ಯಂತ ಕಠಿಣವಾಗಿಯೇ ಕಾಣುತ್ತಿರುವ ಹಾಗೆಯೇ ಅದು ಪ್ರತಿಷ್ಠಾಪಿಸಲ್ಪಟ್ಟಿದೆ. ಇದೇ ಎಲ್ಲ ರೀತಿಯ ತೊಂದರೆಗಳಿಗೂ ಕಾರಣವಾಗಿದೆ. (ಭೂಮಿಯ ವಾತಾವರಣದ ಹಾಗೆ ಸಾಮೂಹಿಕವಾಗಿರುವ ಹಾಗೆ ಆಂಗಿಕಾಭಿನಯ ತೋರುತ್ತ) ಆದರೆ ಇದು ಹೋರಾಟದಿಂದ ಹಿಂದೆ ಸರಿಯಿತು. ಹೌದು ಅದು ಈಗ ಮುಗಿದು ಹೋಗಿದೆ. ಅದು ಮುಕ್ತಾಯ ಕಂಡಿದೆ.

ಇದನ್ನೇ ಈ "ಚೈತನ್ಯ" ಎಂದು ಕರೆಯಲಾಗಿದೆ. ಈ ವಿಜಯವನ್ನು ಹೊಂದಲು ಒಂದು ವರ್ಷಕ್ಕೂ ಅಧಿಕ ಸಮಯದ ಅವಧಿ ಈ ವಿಜಯಕ್ಕೆ ಬೇಕಾಗಿದೆ. ಆದರೆ ಯಾರು ಅಂತರ್ದೃಷ್ಟಿಯನ್ನು ಹೊಂದಿದ್ದಾರೆಯೋ ಅವರಿಗೆ ಸ್ವಾಭಾವಿಕವಾಗಿಯೇ ದೃಷ್ಟವಾಗುತ್ತದೆ. ಆದರೂ.... ಆದರೂ... ಈ ಘಟನೆ ಘಟಿಸಿದೆ. ಇನ್ನು ಉಳಿದ ಸಂಗತಿಗಳೆಲ್ಲ ಕೇವಲ ಹಳೆಯದಾಗಿಬಿಡುತ್ತವೆ. ಪ್ರಾಚೀನವಾಗುತ್ತವೆ. ಎಷ್ಟೊಂದು ಪ್ರಾಚೀನವೆಂದರೆ – ಮೃತ ಹೊಂದಿರುವ ಭೂತಕಾಲದ ಹಾಗೆ. ಆದರೆ ಅದು ಮತ್ತೆ ಬರಲು ಪ್ರಯತ್ನಿಸುತ್ತಿರುತ್ತದೆ..... ಆದರೆ ಆ ರೀತಿ ಮತ್ತೆ ಬರಲು ಸಾಧ್ಯವೇ ಇಲ್ಲ.

ಮತ್ತೆ ಎಲ್ಲವೂ, ಎಲ್ಲ ಸಂದರ್ಭಗಳೂ ವಿಪ್ಲವಕಾರೀ (catastrophic) ಆಗಿರುತ್ತವೆ, ಅವು ಹೇಗೆ ಇದ್ದರೂ ಸಹಿತ ವಿಪ್ಲವಕಾರೀ ಆಗಿರುತ್ತವೆ; ತೊಂದರೆಗಳು, ತೊಡಕುಗಳು, ಸರ್ವಸ್ವವೂ. ಹೌದು ಸರ್ವಸ್ವವೂ ಹಾಗೆ ನಿಷ್ಠುರತೆಯಿಂದಲೇ ಇರುವಂತೆ, ಕಾಡು ಪ್ರಾಣಿಗಳಂತೆ....

ಆದರೆ.. ಇದೆಲ್ಲವೂ ಈಗ ಮುಕ್ತಾಯಗೊಂಡ ಹಂತಕ್ಕೆ ಬಂದಿವೆ. ಇದರ ಸಂಪೂರ್ಣ ಮುಕ್ತಾಯದ ಹಂತವನ್ನು ಈ ದೇಹ ಅನುಭವಿಸುತ್ತದೆ. ಇದಕ್ಕೆ ಹಲವಾರು ಶತಮಾನಗಳ ಸಮಯವೂ ಬೇಕಾಗಬಹುದು, ಏನೇ ಆದರೂ ಇದೆಲ್ಲವೂ ಈಗ ಮುಗಿದು ಹೋಗಿದೆ. ಯಾರು ಈ ಜಡತ್ವದಿಂದ ಮುಕ್ತಗೊಂಡು ಹೊರಗೆ ಬರುತ್ತಾರೋ, ಆವಾಗ ಅವರು ಮಾತ್ರ ಈ ಪೂರ್ಣ ಸ್ವರೂಪದ ಸ್ಥಿರ ರೂಪದ ಮತ್ತು ಪರಿಪೂರ್ಣವಾದ ಸಾಕ್ಷಾತ್ಕಾರವನ್ನು ಪಡೆದುಕೊಳ್ಳಲು

ಸಾಧ್ಯವಾಗುತ್ತದೆ. ಇದು ಖಚಿತವಾದ ವಿಷಯವಾಗಿದೆ. ಇದು ಸತ್ಯ. ಇದು ನಿಶ್ಚಿತ. ಅದನ್ನು ಸೂಕ್ತವಾಗಿಯೇ ಇಲ್ಲಿ ಪಡೆಯುತ್ತೇವೆ.

ಇಂತಹ ಚೇತನದ ಆಗಮನದ ನಂತರದ ಹದಿನಾಲ್ಕನೇ ತಿಂಗಳು ಇದಾಗಿದೆ. ಹೌದು ಸರಿಯಾಗಿ ಹದಿನಾಲ್ಕು ತಿಂಗಳು ಕಳೆದಿವೆ. ಅಂದರೆ ಇದು "ಸಪ್ತ ಸಂಖ್ಯೆಯ ದ್ವಿಗುಣ"ವಾಗಿದೆ.

*ಇವೆಲ್ಲ ಹಿನ್ನೆಲೆಯಲ್ಲಿ ಮಾನವ ಚೇತನದ ಸರ್ವವೂ ವಿಶ್ವಾಸ ಹೊಂದಿರುವ ಹಾಗೆ, ಈ ರೀತಿಯ ಮಾನಸಿಕ ಸಂಮೋಹನದ ಹಂತದಿಂದ ಹೊರ ಬರುವದರ ಬಗೆಗೆ ಸಂಭವವಿದೆ ಎಂದುಕೊಳ್ಳಬಹುದೇ?*

ಹೌದು, ಹೌದು, ಖಂಡಿತವಾಗಿಯೂ; ಖಂಡಿತವಾಗಿಯೂ ಇದೆ.

**– ಶ್ರೀಮಾತೆ: ಭಕ್ತನೋರ್ವನ ಜೊತೆ ಸಂಭಾಷಣೆ, ಮಾರ್ಚ 14, 1970**

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯ ಶಾಲಾ ವಾರ್ಷಿಕೋತ್ಸವ ಸಮಾರಂಭ ದಿನಾಂಕ 1ನೇ ಡಿಸೆಂಬರ್ 2018ರ ಶನಿವಾರದಂದು ಬೆಳಿಗ್ಗೆ 9.30 ರಿಂದ 12.00ರವರೆಗೆ ನಡೆಯಿತು. ಮೊದಲ ಹಂತದಲ್ಲಿ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳು ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಶಾಲಾ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್‌ರವರು ಅಧ್ಯಕ್ಷತೆ ವಹಿಸಿದ್ದರು. ನಂತರ ಮಧ್ಯಾಹ್ನ 4ನೇ ತರಗಿತಿಯಿಂದ 10ನೇ ತರಗತಿ ವಿದ್ಯಾರ್ಥಿಗಳು ಹಲವು ಸಾಂಸ್ಕೃತಿಕ ಮತ್ತು ಮನರಂಜನ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಖ್ಯಾತ ಪ್ರಸೂತಿ ವೈದ್ಯರಾದ ಶ್ರೀಮತಿ ರೀಟಾ ಸಿಂಗ್, ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮ ಮಧ್ಯಾಹ್ನ 3.30 ರಿಂದ 8.30ರವರೆಗೂ ನಡೆಯಿತು. ನಂತರ ವಂದೇಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು.

ದಿನಾಂಕ 5ನೇ ಡಿಸೆಂಬರ್ 2018ರ ಬುಧವಾರದಂದು "ಶ್ರೀ ಅರವಿಂದರ ಮಹಾ ಸಮಾಧಿ"ಯ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 7.00 ಗಂಟೆಯಿಂದ 7.30ರ ವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ನಂತರ ಸಾಯಂಕಾಲ 5.00 ಗಂಟೆಯಿಂದ 6.15 ಗಂಟೆಯವರೆಗೆ ಶ್ರೀ ಭಾಸ್ಕರ ರೆಡ್ಡಿಯವರಿಂದ "The Book of The Divine Mother in Sri Aurobindo's Savitri" ವಿಷಯದ ಬಗ್ಗೆ ಉಪನ್ಯಾಸ ಏರ್ಪಡಿಸಲಾಗಿತ್ತು. ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಶ್ರೀ ಅರವಿಂದ ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಶ್ರೀ ಅರವಿಂದೋ ಸೊಸೈಟಿ ಶಾಖೆ, ಧಾರವಾಡ

ಶ್ರೀ ಅರವಿಂದೋ ಸೊಸೈಟಿ ಧಾರವಾಡದಲ್ಲಿ ದಿನಾಂಕ 23–12–2018 ರಂದು "ಶ್ರೀ ಅರವಿಂದ ಸಮಾಲೋಚನಾ ಸಭೆ" ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಗುರುಲಿಂಗ ಕಾಪಸೆರವರು ವಹಿಸಿದ್ದರು. ಅವರು "ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ತತ್ವಗಳು ಹೇಗೆ ಇಂದಿನ ಬದುಕಿಗೆ ಪ್ರಸ್ತುತ ಎಂಬುದನ್ನು ವಿವರಿಸಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಶ್ರೀ ಶ್ಯಾಮಸುಂದರ ಬಿದರಕುಂದಿಯವರು "ಮಧುರಚೆನ್ನ ಹಾಗೂ ಬೇಂದ್ರೆಯವರ ಮೂಲಕ ಬಿಜಾಪೂರ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ತತ್ವಗಳು ಕಾವ್ಯದ ಮೂಲಕ ಪಸರಿಸಿ ಬೆಳೆದು ಬಂದ ವಿಷಯವನ್ನು ತಿಳಿಸಿದರು. ಹಾಗೂ ಮುಂಬರುವ ಶ್ರೀ ಅರವಿಂದರ 150 ನೇ ವರ್ಷದ ಅವಧಿಗೆ ಕೈಕೊಳ್ಳಬಹುದಾದ ಕಾರ್ಯತಂತ್ರಗಳ ಬಗ್ಗೆ ಮಾತನಾಡಿದರು.

ಪ್ರೊ. ಇಂಗಳಿಯವರು ಅತಿಮಾನಸ ಹಾಗೂ ದಿವ್ಯ ಜೀವನದ ಬಗ್ಗೆ ಹೇಳುತ್ತ ಶ್ರೀ ಅರವಿಂದರು ತೋರುತ್ತಿರವ ಋತ–ಚೇತನವನ್ನು ಅರ್ಥೈಸಿಕೊಳ್ಳಲು ಪೂರ್ಣಯೋಗವು ದಾರಿಯಾಗಿದೆ ಎಂದು ಅವುಗಳ ಆಯಾಮಗಳ ಬಗ್ಗೆ ವಿವರಿಸಿದರು. ಪ್ರೊ. ಮಧುಕರ ಕೋಣನತಂಬಿಗೆಯವರು ಶ್ರೀ ಅರವಿಂದರ ಅಭಿಪ್ರಾಯದಲ್ಲಿ ಮುಕ್ತಿ ಎಂದರೆ ಸ್ವಯಂ ಅರಳುವಿಕೆ, ಅದನ್ನು ಪ್ರತಿಯೊಬ್ಬರೂ ಸಾಧಿಸಬಹುದಾಗಿದೆ. ಈ ವಿಷಯವಾಗಿ ಡಾ॥ ವಿ ಕೆ ಗೋಕಾಕರು ಶ್ರೀ ಅರವಿಂದರ ಮೂಲತತ್ತ್ವ, ಇದಕ್ಕೆ "ತತ್ತ್ವಜ್ಞಾನ"ದ ನೂತನ ವೈಶ್ವಿಕ ಶಾಸ್ತ್ರವೆಂದು ಕರೆಯುತ್ತಿದ್ದರು ಎಂದು ಹೇಳುತ್ತಿದ್ದುದನು ಸ್ಮರಿಸಿದರು. ಹುಬ್ಬಳ್ಳಿಯ ಶ್ರೀ ಅರುಣ ಕುಲಕರ್ಣಿಯವರು ಕಳೆದ 40 ವರ್ಷಗಳಿಂದಲೂ ಅವರ ಮನೆಯಲ್ಲಿ ಶ್ರೀಮಾತಾರವಿಂದರ ವಿಚಾರಗಳನ್ನು ಅಧ್ಯಯನ ಮಾಡುತ್ತಿರುವ ವಿಷಯವನ್ನು ಸಭೆಯಲ್ಲಿ ಹಂಚಿಕೊಂಡರು.

ಅಖಿಲ ಭಾರತ ಪತ್ರಿಕೆಯ ಸಂಪಾದಕರಾದ ಶ್ರೀ ಪುಟ್ಟು ಕುಲಕರ್ಣಿರವರು, ಪತ್ರಿಕೆಯಲ್ಲಿ ರೂಪಿಸಲ್ಪಡುವ ಭಾಷೆಯ ಶಾಬ್ದಿಕ ಆಯಾಮಗಳ ಬಗ್ಗೆ ಮಾತನಾಡಿ, ಓದುಗರ ಸಂಖ್ಯೆಯನ್ನು ಹೆಚ್ಚಿಸುವ ಕುರಿತು ಚರ್ಚೆ ನಡೆಸಿದರು. ಶ್ರೀ ಹರೀಶ ಅಮೂರರವರು ನಮಗೆ ಮಾಹಿತಿಯ ಕೊರತೆಯಿಲ್ಲ; ಆದರೆ ಜ್ಞಾನವನ್ನಾಗಿ ಪರಿವರ್ತಿಸುವ ಪ್ರಕ್ರಿಯೆ ನಡೆಯಬೇಕಾಗಿದೆ ಎಂದು ಆಶಿಸಿದರು.

ಸಭೆಯಲ್ಲಿ ಡಾ॥ ಕೆ.ಎಸ್. ಅಮೂರರವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಶ್ರೀಮತಿ ನಿರ್ಮಲಾ ಮತ್ತು ಶ್ರೀಮತಿ ಉಮಾ ಇವರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡ ಸಮಾಲೋಚನದಲ್ಲಿ, ಹುಬ್ಬಳ್ಳಿ, ಗರಗ, ಯಳವತ್ತಿಯ ಗುರು–ಬಂಧುಗಳು, ಹಿರಿಯ ಸಾಧಕರೂ, ಸದಸ್ಯರೂ ಮತ್ತು ಶ್ರೀಮಾತಾರವಿಂದರ ಭಕ್ತರು ಆಗಮಿಸಿದ್ದರು.

## ಶ್ರೀ ಅರವಿಂದೋ ಸೊಸೈಟಿ ಕೇಂದ್ರ, ದಾಂಡೇಲಿ

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಶ್ರೀ ಅರವಿಂದ ಧ್ಯಾನ ಕೇಂದ್ರ ಪ್ರಾರಂಭವಾಗಿ 54 ವರ್ಷಗಳ ಆಚರಣೆ ಪ್ರಯುಕ್ತ ದಿನಾಂಕ 23–12–2018 ರಂದು ಕಾರ್ಯಕ್ರಮ ಆಯೋಜಿಸಲಾಗಿತ್ತು.

ಶ್ರೀ ಸಂತೋಷ ಅಣ್ವೇಕರ ಅವರು ಈ ಧ್ಯಾನ ಕೇಂದ್ರ ಇಲ್ಲಿ ಪ್ರಾರಂಭವಾದ ಹಿನ್ನಲೆ ಹಾಗೂ ಕರ್ನಾಟಕದಲ್ಲಿ ಕೇವಲ ಎರಡು ಕಡೆ ಮಾತ್ರ ಇರುವ ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರ ಪವಿತ್ರ ಅವಶೇಷಗಳ ವಿಶೇಷತೆ ಕುರಿತು ವಿವರಿಸಿದರು. ಶ್ರೀಮತಿ ಪುಷ್ಪಾ ಗಾಂವಕರ ಅವರು ಈ ದಿವ್ಯ ವಿಶೇಷಗಳ ಬಗೆಗೆ ಸಂಕ್ಷಿಪ್ತ ವಿವರಣೆಯನ್ನು ಕೊಟ್ಟರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಸುಬ್ರತೋರವರು, ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಬೋಧನೆಯ ದಿವ್ಯ–ಪ್ರೇಮದಿಂದ ನಮ್ಮ ಜೀವನವನ್ನು ಯಾವ ರೀತಿಯಲ್ಲಿ ವಿಕಸನಗೊಳಿಸಿಕೊಳ್ಳಬಹುದಾಗಿದೆ ಎಂಬುದರ ಬಗ್ಗೆ ಸವಿಸ್ತಾರವಾಗಿ ತಿಳಿಸಿಕೊಟ್ಟರು. ಮತ್ತೋರ್ವ ಅತಿಥಿ ಶ್ರೀ ಪ್ರದೀಪ ಜೆ. ರವರು **"ತುಮ್ ಪಧಾರೋ ಮಾ"** (ಮಾತೆಯವರೇ ನೀವು ಆಗಮಿಸಿ) ಎನ್ನುವ ಪ್ರಾರ್ಥನೆಯ ಆಂತರ್ಯವನ್ನು ವಿವರಿಸಿದರು. ಶ್ರೀ ನಿರಂಜನ ರಾಣಾ, ಶ್ರೀ ಜೆ.ಎಲ್. ಬ್ಯಾಹತಿ ಮೊದಲಾದವರು ಶ್ರೀ ಅರವಿಂದ ಕೇಂದ್ರವು ನಡೆದು ಬಂದ ದಾರಿಯ ಬಗೆಗೆ ವಿವರಿಸಿದರು.



ಸಾವಿರದ ಜ್ವಾಲೆ ಸಾವಿರದ ದಳದ ಉತ್ತುಂಗ ತುಂಗದಲ್ಲಿ
ಅವರದನು ಧರಿಸಿ ನಿಸ್ಸೀಮ ಪರಮದೂರ್ಧ್ವದಲಿ ನಿತ್ಯದಲ್ಲಿ,
ಗುಹ್ಯಾತಿಗುಹ್ಯ ಆ ತದುತ್ತರದಿ ಕಾಣ್ಕೆಗಳ ಸ್ವಪ್ನ ದರ್ಶ
ಆ ಆದ್ಯ ಪೂಣ್ ಪರಿಪೂರ್ಣ ಸ್ವರ್ಣ–ವರ್ಣದಲಿ ಆತ್ಮ ದರ್ಶ.

ವಿಧವಿಧದಿ ಮತ್ತೆ ಕಾಲಯಾನಕ್ಕೆ ಪಥಗಳಿವು ನಿತ್ಯ–ಸತ್ಯ
ಸೂಚ್ಯಂಕ–ಶಿಖರಗಳ ಸರಣಯೊಡನೆ ಸಂಕೇತವಾಗಿಸುತ್ತ
ತಂತಮ್ಮ ಮಧ್ಯೆ ತಾವಿದ್ದುಕೊಂಡು ಉತ್ತರಕೆ ತೋರಿಸುತ್ತ
ಮ್ಲಾನಗೊಂಡಿರುವ –ನೀಲಮಣಿ–ತಾರ–ಈ–ಥರದ ದೇವಚಿತ್ತ
ಹಿರಣ್ಮಯದ ಕೆಲ ತಾಣಗಳ ಎಡೆಗೆ ನಡೆಯುವೆಡೆ ತಪನದೊಡನೆ
ಅನಂತಾನಂತದಾಂತರ್ಯ ಗುಹ್ಯ ರಹಸ್ಯೋದ್ಘಾಟ ಒಡನೆ.

[ಶ್ರೀ ಅರವಿಂದರ 'ಸಾವಿತ್ರಿ' (ದಳ 2 ರೇಣು 12 ಪುಟ 280)]
[ಅನುವಾದ: ಪುಟ್ಟು ಕುಲಕರ್ಣಿ]

**RNI No. 22511/1971**
No. of Pages **60 + 4 (Cov. Page)**
KAR Reg No : RNP/KA/BGS/368/2018-2020
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till : 31-12-2020
Licensed to Post at BG PSO, Mysore Road, Bengaluru - 560 026

## ಮಾನವ–ಬೌದ್ಧಿಕ ಪ್ರಾಣಿ

“ತನ್ನ ನರೆತ ಅಜ್ಞಾತದಲ್ಲಿ ತಾನೆರೆತ ಒಂದು ಪ್ರಾಣಿ
ನೆರಳು ಬೆಳಕು ಅರ್ಧಾರ್ಧವಿರುವ ಮನ; ಬದುಕಿನೊಂದು ಕಾಣಿ
ಮರ್ತ್ಯಲೋಕದೀ ಬಂದಿ, ತಿಳಿವ ಶ್ವಾಸೋಚ್ಛ್ವಾಸ ಹರುಷ,
ಹೇಗೋ ಬಾಳುವನು ಕುಂಟುಕೂರಿಗೆಯ ಕ್ಷಣಿಕ ನೂರು ವರುಷ.

ಆದರೇನು ಆಂತರ್ಯ ಪ್ರಗತಿ ದೈವಿಕದ ಅದ್ವಚಲವು
ಅಚಿನ್ಮಯದ ಅಜ್ಞಾನ ನಿಶೆಯ ಚೇತನದ ಚೊಕ್ಕ ಬಲವು
ಬರುವೆ ಎನ್ನುತಿದೆ ಪರಂಜ್ಯೋತಿ ಸಾಕ್ಷಾತ್ಕರಿಸಿಕೊಂಡು
ಆ ಅದೃಷ್ಟ ನಿಷ್ಕರುಣ ಶಕ್ತಿಗಳನಿದಿರು ಎದುರುಗೊಂಡು

ಅಚಿತ್ತಾದ ಈ ಮಣ್ಣಿನಲ್ಲಿ ದಿವ್ಯತ್ವದೂರ್ಧ್ವಭಾವ
ಕಾಂಬೆನೆನ್ನುವದು ಮಂದಗತಿಯೊಳೇ ಚಿರಂತನದ ಭಾವ.”

– **ಅಂಬಿಕಾತನಯದತ್ತ**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.